ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಫೆಬ್ರವರಿ 19, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 278 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999

## ವಿಕಸಿತ ಭಾರತಕ್ಕೆ ಬಿಜೆಪಿ ಗೆಲುವು ಮೊದಲ ಹೆಜ್ಜೆ : ಪ್ರಧಾನಿ ಮೋದಿ



ನವದೆಹಲಿ, ಫೆ. 18 – ವಿಕಸಿತ ಭಾರತದ ಗುರಿ ತಲುಪಲು ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬರಬೇಕಿದೆ. ವಿಕಸಿತ ಭಾರತಕ್ಕಾಗಿ ಪ್ರತಿಪಕ್ಷಗಳು ಯಾವುದೇ ಮಾರ್ಗಸೂಚಿ ಹೊಂದಿಲ್ಲ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಭಾರತ ಮಂಡಪಂನಲ್ಲಿ ದೇಶಾದ್ಯಂತದಿಂದ ಆಗಮಿಸಿದ್ದ ಬಿಜೆಪಿ ನಿಯೋಗಿಗಳನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಅಧಿಕಾರ ಅನುಭವಿಸಲಿಕ್ಕಾಗಿ ಬಿಜೆಪಿ ಗೆಲ್ಲಿಸಲು ಕೇಳುತ್ತಿಲ್ಲ. ದೇಶದ ಲಾಭಕ್ಕಾಗಿ ಕೇಳುತ್ತಿದ್ದೇನೆ ಎಂದರು.

ಪ್ರತಿಪಕ್ಷಗಳು ಅದರಲ್ಲೂ ಕಾಂಗ್ರೆಸ್ ಪಕ್ಷ ಎಲ್ಲ ರೀತಿಯ ಹುಸಿ ಭರವಸೆಗಳನ್ನು ನೀಡುತ್ತಿದೆ. ಆದರೆ, ದೇಶದ ಅಭಿವೃದ್ಧಿಗೆ ಯಾವುದೇ ಮಾರ್ಗಸೂಚಿ ಹೊಂದಿಲ್ಲ ಎಂದು ಟೀಕಿಸಿದರು.

ವಿಕಸಿತ ಭಾರತ ಬಿಜೆಪಿಯಿಂದ ಮಾತ್ರ ಸಾಧ್ಯ. ಬಿಜೆಪಿ ಅಧಿಕಾರಕ್ಕೆ ಬರುವ ವಿಶ್ವಾಸವಿದೆ ಎಂದ ಅವರು, ಹಲವು ದೇಶಗಳು ಬರುವ ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್‌ನಲ್ಲಿರುವ ಕಾರ್ಯಕ್ರಮಗಳಿಗೆ ತಮ್ಮನ್ನು ಆಹ್ವಾನಿಸಿದ್ದಾರೆ. 'ಆಯೇಗಾ ತೋ ಮೋದಿ ಹಿ' (ಅಧಿಕಾರಕ್ಕೆ ಬರುವುದು ಮೋದಿಯೇ) ಎಂಬುದು ಅವರಿಗೂ ಗೊತ್ತಾಗಿದೆ ಎಂದರು.

ಬಿಜೆಪಿ ರಾಷ್ಟ್ರೀಯ ಮಂಡಳಿಯ ಎರಡು ದಿನಗಳ ಸಮಾವೇಶದ ಸಮಾರೋಪದಲ್ಲಿ ಮಾತನಾಡಿದ ಪ್ರಧಾನಿ, ಬಿಜೆಪಿ ಕಾರ್ಯಕರ್ತರು ಸಮಾಜದ ಎಲ್ಲ ವರ್ಗದವರ ಜೊತೆ ಬೆರೆಯಬೇಕು. ಬಿಜೆಪಿ ಜೊತೆ ಒಲವು ಹೊಂದಿರದವರ ಜೊತೆಯೂ ಬೆರೆಯಬೇಕು. ಪ್ರತಿಯೊಬ್ಬರ ವಿಶ್ವಾಸ ಗಳಿಸಬೇಕು ಎಂದು ಕರೆ ನೀಡಿದರು.

ಪ್ರತಿಯೊಬ್ಬರ ಪರಿಶ್ರಮದಿಂದ ಮಾತ್ರ ಬಿಜೆಪಿ ಮುಂದಿನ ಲೋಕಸಭಾ ಚುನಾವಣೆಯಲ್ಲಿ 370 ಸ್ಥಾನ ಪಡೆಯಲು ಹಾಗೂ ಎನ್.ಡಿ.ಎ. 400ಕ್ಕೂ ಹೆಚ್ಚು ಸ್ಥಾನ ಪಡೆಯಲು ಸಾಧ್ಯ ಎಂದವರು ಹೇಳಿದರು.

ನಾವು ಪ್ರತಿಯೊಬ್ಬರನ್ನೂ ಸಂಪರ್ಕಿಸಬೇಕಿರುವುದು ಚುನಾವಣೆಯಲ್ಲಿ ಗೆಲ್ಲಲಿಕ್ಕಾಗಿ ಅಲ್ಲ, ದೇಶವನ್ನು ನಿರ್ಮಿಸಲು ಎಂದೂ ಮೋದಿ ಹೇಳಿದರು.

ವಿದೇಶಾಂಗ ನೀತಿಯ ಬಗ್ಗೆ ತಮ್ಮನ್ನು ಟೀಕಿಸುತ್ತಿದ್ದವರನ್ನೂ ತರಾಟೆಗೆ ತೆಗೆದುಕೊಂಡ ಮೋದಿ, ಪಶ್ಚಿಮ ಏಷಿಯಾ ಜೊತೆ ಭಾರತದ ಸಂಬಂಧ ಈಗ ಬಲಿಷ್ಠವಾಗಿದೆ ಎಂದರು.

ಕಳೆದ ಹಲವು ದಶಕಗಳಲ್ಲಿ ಯು.ಎ.ಇ.ಗೆ ಭೇಟಿ ನೀಡಿದ ಮೊದಲ ಪ್ರಧಾನಿ ತಾವು ಎಂದ ಮೋದಿ, ಕಾಂಗ್ರೆಸ್ ಪಕ್ಷವು ಪಶ್ಚಿಮ ಏಷಿಯಾವನ್ನು ಪಾಕಿಸ್ತಾನದ ದೃಷ್ಟಿಕೋನದಿಂದ ನೋಡುತ್ತಿತ್ತು (4ನೇ ಪುಟಕ್ಕೆ)

## ಕ್ರೀಡಾಕೂಟದಿಂದ ಯುವಕರಲ್ಲಿ ನವ ಚೈತನ್ಯ

### ತರಳಬಾಳು ಹುಣ್ಣಿಮೆ ಗ್ರಾಮೀಣ ಕ್ರೀಡಾಕೂಟ ಉದ್ಘಾಟನಾ ಕಾರ್ಯಕ್ರಮದಲ್ಲಿ ಬಿ.ಸಿ. ಉಮಾಪತಿ

ದಾವಣಗೆರೆ, ಫೆ.18- ಕ್ರೀಡಾಕೂಟದಿಂದ ಯುವಕ-ಯುವತಿಯರಲ್ಲಿ ನವ ಚೈತನ್ಯ ತುಂಬುವುದರ ಜೊತೆಗೆ ಆರೋಗ್ಯದ ದೃಢತೆಯನ್ನು ಕಾಪಾಡುವಲ್ಲಿ ಇದು ಸಹಕಾರಿಯಾಗುತ್ತದೆ ಎಂದು ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಹೇಳಿದರು.

ಸಿರಿಗೆರೆಯಲ್ಲಿ ಇದೇ ತಿಂಗಳು 22 ರಿಂದ 24ರ ವರೆಗೆ ಜರುಗಲಿರುವ 76ನೇ ವರ್ಷದ ತರಳಬಾಳು ಹುಣ್ಣಿಮೆ ಮಹೋತ್ಸವದ ಅಂಗವಾಗಿ ಭಾನುವಾರ ನಗರದ ಮಾಗನೂರು ಬಸಪ್ಪ ಮೈದಾನದಲ್ಲಿ ಏರ್ಪಡಿಸಿದ್ದ ಗ್ರಾಮೀಣ ಯುವ ಕ್ರೀಡಾ ಸ್ಪರ್ಧೆಯ ಉದ್ಘಾಟನಾ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವುದರಿಂದ ಮಾನಸಿಕವಾಗಿ ಹೊಸ ಹುರುಪು, ಉತ್ಸಾಹ ತುಂಬುತ್ತದೆ. ಬದುಕಿಗೆ ನವೋಲ್ಲಾಸ ಬರುತ್ತದೆ. ಆದ್ದರಿಂದ ಕ್ರೀಡೆಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ಸಮಾಜದ ಮುಖಂಡ ಶಿವನಹಳ್ಳಿ ರಮೇಶ್ ಮಾತನಾಡಿ, ತರಳಬಾಳು ಜಗದ್ಗುರುಗಳು ತರಳಬಾಳು ಹುಣ್ಣಿಮೆ ಮಹೋತ್ಸವದ ಅಂಗವಾಗಿ ಗ್ರಾಮೀಣ ಯುವಕ-ಯುವತಿಯರಲ್ಲಿ ನವೋತ್ಸಾಹ ತುಂಬಿ ಹಾಗೂ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಅಧ್ಯಕ್ಷತೆ ವಹಿಸಿದ್ದ ದಾವಣಗೆರೆ ತಾಲ್ಲೂಕು ಶ್ರೀಮದ್ ಸಾಧು ಸದ್ಧರ್ಮ ವೀರಶೈವ ಸಮಾಜದ ಅಧ್ಯಕ್ಷ ಹೆಚ್.ಡಿ. ಮಹೇಶ್ವರಪ್ಪ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಕ್ರೀಡೆಗಳು



ಮರೆಯಾಗುತ್ತಿರುವ ಈ ಸಂದರ್ಭದಲ್ಲಿ ತರಳಬಾಳು ಜಗದ್ಗುರುಗಳವರು ತರಳಬಾಳು ಹುಣ್ಣಿಮೆ ಮಹೋತ್ಸವದ ಅಂಗವಾಗಿ ಈ ಹೊಸ ಪರಿಕಲ್ಪನೆಗೆ ನಾಂದಿ ಹಾಡಿದ್ದಾರೆ ಎಂದರು.

ಸಮಾರಂಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ಗೌರವ ಕಾರ್ಯದರ್ಶಿ ಮಾಗನೂರು ಸಂಗಮೇಶ್ವರ ಗೌಡ್ರು, ಸಮಾಜದ ಮುಖಂಡರಾದ ಶ್ರೀನಿವಾಸ್ ಶಿವಗಂಗಾ, ಪಾಲಿಕೆ ಸದಸ್ಯೆ ಗೀತಾ ದಿಳ್ಯೆಪ್ಪ, ಶಶಿಧರ ಹೆಮ್ಮನಬೇತೂರು, ಉಮೇಶ್ ಮಾಗನೂರ್, ಕುಮಾರ್ ಮಳ್ಳೇಕಟ್ಟೆ, ಕೊರಟಿಕೆರೆ ಶಿವ ಕುಮಾರ್, ರವಿಕುಮಾರ್ ಉಪಸ್ಥಿತರಿದ್ದರು. ವಿನ್ನರ್ ಅಕಾಡೆಮಿ ಸಂಸ್ಥಾಪಕ ಶಿವರಾಜ್ ಕಬ್ಬೂರ್ ನಿರೂಪಿಸಿದರು.

## ಟೆಸ್ಟ್‌ನಲ್ಲಿ ಭಾರತಕ್ಕೆ 434 ರನ್‌ಗಳ ದಾಖಲೆ ಗೆಲುವು

ರಾಜಕೋಟ್, ಫೆ. 18 – ಇಂಗ್ಲೆಂಡ್ ವಿರುದ್ಧ ನಡೆದ ಮೂರನೇ ಟೆಸ್ಟ್ ಪಂದ್ಯದಲ್ಲಿ ಭಾರತ ದಾಖಲೆಯ 434 ರನ್‌ಗಳ ಜಯ ಸಾಧಿಸಿದೆ.

ಯಶಸ್ವಿ ಜೈಸ್ವಾಲ್ ಅವರ ಸಂಚಲನಾತ್ಮಕ ದ್ವಿಶತಕ ಹಾಗೂ ರವೀಂದ್ರ ಜಡೇಜಾ ಗಳಿಸಿದ ಐದು ವಿಕೆಟ್‌ಗಳು ಭಾರತದ ಗೆಲುವಿಗೆ ಸಹಕಾರಿಯಾಗಿವೆ. ಇಂಗ್ಲೆಂಡ್ ಗೆಲ್ಲಲು 557 ರನ್‌ಗಳ ಬೃಹತ್ ಗುರಿ ಹೊಂದಿತ್ತು. ಆದರೆ, ಎರಡನೇ ಇನ್ನಿಂಗ್ಸ್‌ನಲ್ಲಿ 122 ರನ್‌ಗಳಿಗೆ ಎಲ್ಲಾ ವಿಕೆಟ್ ಕಳೆದುಕೊಂಡಿತು. (4ನೇ ಪುಟಕ್ಕೆ)

## ಜಾರ್ಖಂಡ್ : ಜಾತಿಗಣತಿಗೆ ಆದೇಶ

ರಾಂಚಿ, ಫೆ. 18 – ಜಾತಿ ಆಧರಿತ ಗಣತಿ ನಡೆಸಲು ಜಾರ್ಖಂಡ್ ಮುಖ್ಯಮಂತ್ರಿ ಪಂಚೈ ಸೋರೇನ್ ಅವರು ಅನುಮತಿ ನೀಡಿದ್ದಾರೆ. ಬಿಹಾರ ರಾಜ್ಯದ ಮಾದರಿಯಲ್ಲೇ ಜಾತಿ ಗಣತಿ ನಡೆಸಲಾಗುವುದು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಾತಿ ಆಧರಿತ ಸಮೀಕ್ಷೆ ನಡೆಸಲು ಮಾರ್ಗಸೂಚಿ ರೂಪಿಸುವಂತೆ ಸಿಬ್ಬಂದಿ ಇಲಾಖೆಗೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. ಈ ಮಾರ್ಗಸೂಚಿಯನ್ನು ಸಂಪುಟದ ಎದುರಿಟ್ಟು ಒಪ್ಪಿಗೆ ಪಡೆಯಲಾಗುವುದು. (3ನೇ ಪುಟಕ್ಕೆ)

## ದೆಹಲಿಗೆ ಮಧ್ಯಪ್ರದೇಶದ 6 ಶಾಸಕರು

### ಕೈ ನಾಯಕ ಕಮಲ್‌ನಾಥ್ ಮನೆ ಮೇಲೆ ಜೈ ಶ್ರೀರಾಮ್ ಧ್ವಜ



ಭೂಪಾಲ್, ಫೆ. 18 – ಮಧ್ಯಪ್ರದೇಶದ ಕಾಂಗ್ರೆಸ್ ಹಿರಿಯ ನಾಯಕ ಕಮಲ್ ನಾಥ್ ಅವರನ್ನು ಬೆಂಬಲಿಸುವ ಆರು ಶಾಸಕರು ದೆಹಲಿಗೆ ತಲುಪಿದ್ದಾರೆ. ಕಮಲ್ ನಾಥ್ ಹಾಗೂ ಅವರ ಪುತ್ರ ಸಂಸದ ನಕುಲ್ ನಾಥ್ ಅವರು ಬಿಜೆಪಿ ಸೇರಲಿದ್ದಾರೆ ಎಂಬ ವರದಿಗಳ ನಡುವೆ ಈ ಬೆಳವಣಿಗೆಯಾಗಿದೆ.

ಈ ನಡುವೆ, ನಾಥ್ ದೆಹಲಿಯಲ್ಲಿ ಹೊಂದಿರುವ ಮನೆಯ ಮೇಲೆ ಜೈ ಶ್ರೀರಾಮ್ ಎಂದು ಬರೆದಿರುವ ಕೇಸರಿ ಧ್ವಜ ಹಾರುತ್ತಿದ್ದುದು ಕಂಡು ಬಂದಿದೆ. ಇದು ಅವರ ಒಲವು ಯಾವ ಕಡೆ ಇದೆ ಎಂಬುದನ್ನು ಸ್ಪಷ್ಟಪಡಿಸುತ್ತಿದೆ.

ಮಧ್ಯಪ್ರದೇಶದ ಕಾಂಗ್ರೆಸ್ ಅಧ್ಯಕ್ಷ ಜಿತು ಪಟ್ವಾರಿ ಅವರು ಶನಿವಾರವಿಡೀ ಪಕ್ಷದ ಶಾಸಕರ ಸಂಪರ್ಕದಲ್ಲಿದ್ದರು. ಕಮಲ್ ನಾಥ್ ಹಾಗೂ ಅವರ ಪುತ್ರ ಬಿಜೆಪಿ ಸೇರುವುದಿಲ್ಲ ಎಂದು ಶಾಸಕರಿಗೆ ಭರವಸೆ ನೀಡುತ್ತಿದ್ದರು.

ಈ ನಡುವೆ ಹೇಳಿಕೆ ನೀಡಿರುವ ಹಿರಿಯ ನಾಯಕ ದಿಗ್ವಿಜಯ್ ಸಿಂಗ್, ತಮ್ಮ ಹಳೆಯ ಮಿತ್ರ ಕಮಲ್ ನಾಥ್ ಅವರು ಕಾಂಗ್ರೆಸ್ ತೊರೆಯುವುದಿಲ್ಲ ಎಂದು ಹೇಳಿದ್ದಾರೆ.

1980ರಲ್ಲಿ ಸಾರ್ವಜನಿಕ ಸಭೆಯೊಂದ ರಲ್ಲಿ ಮಾತನಾಡುವಾಗ ಆಗಿನ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರು, ಕಮಲ್ ನಾಥ್‌ರನ್ನು ತಮ್ಮ ಮೂರನೇ ಮಗ ಎಂದು ಪರಿಚಯಿಸಿದ್ದರು. ಇಂದಿರಾ ಗಾಂಧಿ ಪುತ್ರ ಸಂಜಯ್ ಗಾಂಧಿ ಹಾಗೂ ನಾಥ್ ಗೆಳೆತನ ಕಾಂಗ್ರೆಸ್ ವಲಯದಲ್ಲಿ ಬಹು ಚರ್ಚಿತವಾಗಿತ್ತು.

ಕಮಲ್ ನಾಥ್ ಅವರ ನಿಕಟವರ್ತಿ ಮಾಜಿ ಸಚಿವ ಸಜ್ಜನ್ ಸಿಂಗ್ ವರ್ಮ ಅವರು ತಮ್ಮ ಟ್ವಿಟ್ಟರ್ ಖಾತೆಯಲ್ಲಿ 'ಜೈ ಶ್ರೀರಾಮ್' ಎಂದು ಬರೆದುಕೊಂಡಿದ್ದಾರೆ. ಕಮಲ್ ನಾಥ್ ಅವರನ್ನು ಅನುಸರಿಸು ವುದಾಗಿ ವರ್ಮಾ ಹೇಳಿಕೆ ನೀಡಿದ್ದಾರೆ.

230 ಸದಸ್ಯರ ವಿಧಾನಸಭೆಯಲ್ಲಿ ಕಾಂಗ್ರೆಸ್ ಪಕ್ಷ 66 ಸ್ಥಾನಗಳನ್ನು ಹೊಂದಿದೆ. ಪಕ್ಷಾಂತರ ಕಾಯ್ದೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ 23 ಶಾಸಕರ ಬೆಂಬಲ ಪಡೆಯಲು ನಾಥ್ ಬಣ ಪ್ರಯತ್ನ ನಡೆಸಿದೆ ಎಂದು ಹೇಳಲಾಗುತ್ತಿದೆ.

## ಸಿದ್ದರಾಮಯ್ಯ ವಿರುದ್ಧದ ಎಫ್‌ಐಆರ್ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ



ನವದೆಹಲಿ, ಫೆ. 18 – 2022ರಲ್ಲಿ ಪ್ರತಿಭಟನೆ ನಡೆಸಿದ್ದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದಾಖಲಿಸಲಾದ ಎಫ್.ಐ.ಆರ್. ರದ್ದುಗೊಳಿಸುವ ಮನವಿಯ ಬಗ್ಗೆ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಲಿದೆ.

ನ್ಯಾಯಮೂರ್ತಿಗಳಾದ ಹೃಶಿಕೇಶ್ ರಾಯ್ ಹಾಗೂ ಪ್ರಶಾಂತ್ ಕುಮಾರ್ ಮಿಶ್ರ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ವಿಚಾರಣೆ ನಡೆಸುವ ಸಾಧ್ಯತೆ ಇದೆ.

ಎಫ್.ಐ.ಆರ್. ರದ್ದುಗೊಳಿಸುವ ಮನವಿಯನ್ನು ತಳ್ಳಿ ಹಾಕಿದ್ದ ಹೈಕೋರ್ಟ್, 10 ಸಾವಿರ ರೂ.ಗಳ ದಂಡವನ್ನೂ ವಿಧಿಸಿತ್ತು. ಸಿದ್ದರಾಮಯ್ಯ ಅಷ್ಟೇ ಅಲ್ಲದೇ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಸಚಿವರಾದ ಎಂ.ಬಿ. ಪಾಟೀಲ್ ಹಾಗೂ ರಾಮಲಿಂಗಾರೆಡ್ಡಿ ಅವರು ಮಾರ್ಚ್ 6ರಂದು ವಿಶೇಷ ನ್ಯಾಯಾಲಯದ ಎದುರು ಹಾಜರಾಗಬೇಕು ಎಂದು ಹೈಕೋರ್ಟ್ ತಿಳಿಸಿತ್ತು.

ಈ ಆದೇಶವನ್ನು ಪ್ರಶ್ನಿಸಿ ಸಿದ್ದರಾಮಯ್ಯ ಅವರ ಪರವಾಗಿ ವಕೀಲ ರಾಜೇಶ್ ಗುಲಾಬ್ ಇನಾಮ್ದಾರ್ ಅವರು ಅರ್ಜಿ ದಾಖಲಿಸಿದ್ದಾರೆ.

2022ರಲ್ಲಿ ಕಾಂಗ್ರೆಸ್ ನಾಯಕರು ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬೆಂಗಳೂರು ನಿವಾಸಕ್ಕೆ ಮುತ್ತಿಗೆ ಹಾಕಲು ತೆರಳಿದ್ದರು. ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ಅವರ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಗುತ್ತಿತ್ತು.

ಸಾರ್ವಜನಿಕ ಕಾಮಗಾರಿಗೆ ಸಂಬಂಧಿಸಿದಂತೆ ಈಶ್ವರಪ್ಪ ಶೇ.40ರ ಕಮೀಷನ್ ಕೇಳಿದ್ದಾರೆ ಎಂದು ಆರೋಪಿಸಿ ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಬಗ್ಗೆ ಕಾಂಗ್ರೆಸ್ ನಾಯಕರು ಪ್ರತಿಭಟನೆ ನಡೆಸಿದ್ದರು.

ಕಾಂಗ್ರೆಸ್ ನಾಯಕರು ರಸ್ತೆ ತಡೆ ನಡೆಸಿ, ಸಾರ್ವಜನಿಕರಿಗೆ ತೊಂದರೆ ನೀಡಿದ್ದಾರೆ ಎಂದು ಆರೋಪಿಸಿ ಪೊಲೀಸರು ಎಫ್.ಐ.ಆರ್. ದಾಖಲಿಸಿದ್ದರು.

## ಪ್ರಕಾಶ ಪಾಟೀಲ್ ಪಂಚಮಸಾಲಿ ಪೀಠದ ದಾಸೋಹ ಸಮಿತಿ ರಾಜ್ಯಾಧ್ಯಕ್ಷ



ಹರಿಹರ, ಫೆ. 18 - ಹರಿಹರದ ಶ್ರೀ ಪೀಠದಲ್ಲಿ ಜಗದ್ಗುರು ವಚನಾನಂದ ಶ್ರೀಗಳು, ಟ್ರಸ್ಟ್‌ನ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ, ಕಾರ್ಯದರ್ಶಿ ಜ್ಯೋತಿಪ್ರಕಾಶ್, ಸಂಘದ ರಾಜ್ಯಾಧ್ಯಕ್ಷ ಜಿ.ಪಿ.ಪಾಟೀಲ್ ಹಾಗೂ ಶ್ರೀಪೀಠದ ಟ್ರಸ್ಟ್‌ನ ಇತರೆ ಸದಸ್ಯರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಶ್ರೀ ಪೀಠದ ನಿತ್ಯದಾಸೋಹ ಹಾಗೂ ಪೀಠದ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸಲು ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ದಾಸೋಹ ಸಮಿತಿ ರಾಜ್ಯಾಧ್ಯಕ್ಷರಾಗಿ ವಕೀಲರಾದ ಪ್ರಕಾಶ ಪಾಟೀಲ್ ಅವರನ್ನು ನೇಮಿಸಲಾಗಿದೆ ಎಂದು ಶ್ರೀಪೀಠದ ಆಡಳಿತಾಧಿಕಾರಿ ಡಾ.ರಾಜ್ ಕುಮಾರ್ ತಿಳಿಸಿದ್ದಾರೆ.

## ರಾಜನಹಳ್ಳಿ ಶಿವಕುಮಾರ್ ಬಿಜೆಪಿ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ



ದಾವಣಗೆರೆ, ಫೆ. 18 - ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷರಾಗಿ ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ನೇಮಕಗೊಂಡಿದ್ದಾರೆ.

ಬೆಂಗಳೂರಿನ ಪಕ್ಷದ ಕಚೇರಿಯಲ್ಲಿ ನಿನ್ನೆ ನಡೆದ ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ರಾಜ್ಯ ಬಿಜೆಪಿ ಒಬಿಸಿ ಅಧ್ಯಕ್ಷ ರಘು ಕೌಟಿಲ್ಯ ಅವರು ರಾಜನಹಳ್ಳಿ ಶಿವಕುಮಾರ್ ಅವರಿಗೆ ನೇಮಕಾತಿ ಪತ್ರ ಹಸ್ತಾಂತರಿಸಿದರು.

## ಹೆದ್ದಾರಿಯಲ್ಲಿ ಪೊಲೀಸರಿಂದ ಲಂಚ 40 ಸಿಬ್ಬಂದಿಗಳ ವರ್ಗಾವಣೆ

ಥಾಣೆ, ಫೆ. 18- ಮಹಾರಾಷ್ಟ್ರದ ಥಾಣೆಯ ಮುಂಬ್ರಾ ಪ್ರದೇಶ ದಲ್ಲಿ ಕೆಲವು ಸಂಚಾರಿ ಪೊಲೀಸ್ ಸಿಬ್ಬಂದಿ ವಾಹನ ಚಾಲಕರಿಂದ ಲಂಚ ಪಡೆಯುವ ವಿಡಿಯೋ ಒಂದು ಬೆಳಕಿಗೆ ಬಂದಿದೆ. ನಂತರ 40 ಪೊಲೀಸರನ್ನು ವರ್ಗಾಯಿಸಲಾಗಿದೆ.

ವರ್ಗಾವಣೆಯಾದ ಎಲ್ಲರೂ ಸಂಚಾರಿ ಪೊಲೀಸರ ಮುಂಬ್ರಾ ವಿಭಾಗದಲ್ಲಿದ್ದವರೇ ಆಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬ್ರಾ ಸಂಚಾರಿ ವಿಭಾಗದ ಹಿರಿಯ ಇನ್ಸ್‌ಪೆಕ್ಟರ್ ಸುರೇಶ್ ಖೇಡೇಕರ್, ಇಬ್ಬರು ಎ.ಎಸ್.ಐ. ಹಾಗೂ ಪೇದೆಗಳನ್ನು ವರ್ಗಾಯಿಸಲಾಗಿದೆ. ಸಂಚಾರಿ ಪೊಲೀಸರು ಹೆದ್ದಾರಿಯಲ್ಲಿ ಭಾರೀ ವಾಹನಗಳ ಚಾಲಕರಿಂದ ಹಣ ಪಡೆಯುತ್ತಿದ್ದ ವಿಡಿಯೋ ಬಯಲಾಗಿತ್ತು.






# ನವೀಕೃತ ಈಜುಕೊಳ ನಾಳೆ ಸೇವೆಗೆ ಲೋಕಾರ್ಪಣೆ



**ದೂರು ಬರದಂತೆ, ಜನರು ಖುಷಿಯಿಂದ ವಾಪಸ್ ಹೋಗುವಂತಾಗಬೇಕು : ರೇಣುಕಾ, ಗಡಿಗುಡಾಳ್ ಮಂಜುನಾಥ್ ಸೂಚನೆ**

ದಾವಣಗೆರೆ, ಫೆ. 18 - ನಗರದ ಎಂಸಿಸಿ ಬಿ ಬ್ಲಾಕ್ ನಲ್ಲಿರುವ ನವೀಕೃತ ಈಜುಕೊಳದ ಲೋಕಾರ್ಪಣೆ ಕಾರ್ಯಕ್ರಮವು ಇದೇ ದಿನಾಂಕ 20ರಂದು ನಡೆಯಲಿದೆ. ಈ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತರಾದ ರೇಣುಕಾ, ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಅವರು ಇಂದು ಭೇಟಿ ನೀಡಿ ಪರಿಶೀಲಿಸಿದರು. ಯಾವುದೇ ರೀತಿಯ ದೂರು ಬರದಂತೆ ನಿರ್ವಹಿಸಿಕೊಂಡು ಹೋಗುವಂತೆ ಸೂಚಿಸಿದರು.

ನವೀಕೃತ ಈಜುಕೊಳ ಇದಾಗಿದ್ದು, ಸಾರ್ವಜನಿಕರಿಗೆ ಲೋಕಾರ್ಪಣೆ ಯಾಗುತ್ತಿದೆ. ಬೆಳಿಗ್ಗೆ 6 ರಿಂದ 9 ರವರೆಗೆ ಸಾರ್ವಜನಿಕರು, 10 ರಿಂದ 11 ರವರೆಗೆ ಮಹಿಳೆಯರಿಗೆ ಮಾತ್ರ, 12 ರಿಂದ ಮಧ್ಯಾಹ್ನ 3 ರವರೆಗೆ ಎಲ್ಲರಿಗೂ ಪ್ರವೇಶ ನೀಡಲಾಗುತ್ತಿದೆ. ಸಂಜೆ ಈಜು ಕಲಿಯುವವರಿಗೆ ತರಬೇತಿ ನೀಡಲಾಗುತ್ತದೆ. ಇದಕ್ಕಾಗಿ ನುರಿತ ಈಜು ತರಬೇತುದಾರರನ್ನು ನೇಮಕ ಮಾಡಲಾಗಿದೆ.

ಪ್ರತಿ ಗಂಟೆಗೆ 10 ವರ್ಷದೊಳಗಿನ ಮಕ್ಕಳಿಗೆ 40 ರೂಪಾಯಿ, 10 ವರ್ಷ ಮೇಲ್ಪಟ್ಟವರಿಗೆ 60 ರೂಪಾಯಿ ನಿಗದಿಪಡಿಸಲಾಗಿದೆ. ಒಂದು ತಿಂಗಳಿಗೆ ಮಕ್ಕಳಿಗೆ 800 ರೂಪಾಯಿ ಹಾಗೂ ಹಿರಿಯರಿಗೆ 1000 ರೂಪಾಯಿ ನಿಗದಿ ಮಾಡಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿಕೊಳ್ಳಲಾಗಿದೆ. ಈ ಜುಕೊಳದ ಮೇಲುಸ್ತುವಾರಿ ಮಧು ಎಂಬುವವರು ನೋಡಿಕೊಳ್ಳಲಿದ್ದು, ತರಬೇತುದಾರರ ನೇಮಕ ಮಾಡಲಾಗಿದೆ.

ಈ ಈಜುಕೊಳವು ಉತ್ತಮ ನಿರ್ವಹಣೆ ಆಗಬೇಕು. ಯಾವುದೇ ರೀತಿಯ ದೂರು ಬರಬಾರದು. ಅವಘಡ ಸಂಭವಿಸದಂತೆ ನೋಡಿಕೊಳ್ಳಬೇಕು. ನೀರನ್ನು ಆಗಾಗ್ಗೆ ಬದಲಾಯಿಸಬೇಕು. ಇಲ್ಲಿಗೆ ಬಂದು ಹೋಗುವವರು ಖುಷಿಯಿಂದ ವಾಪಸ್ ಹೋಗಬೇಕು. ಏನೇ ಸಮಸ್ಯೆಗಳಿದ್ದರೂ ಗಮನಕ್ಕೆ ತನ್ನಿ. ಜನರು ಬೇಸರದಿಂದ ಹೋಗಬಾರದು. ಸಂತೋಷದಿಂದ ನೀರಿನಲ್ಲಿ ಆಟವಾಡಿ ಮಕ್ಕಳು, ಮಹಿಳೆಯರು, ಹಿರಿಯರು ಹೋಗುವಂತಹ ವಾತಾವರಣ ಕಲ್ಪಿಸುವಂತೆ ಸಂಬಂಧಿಸಿದವರಿಗೆ ಸೂಚನೆ ನೀಡಿದರು.

ಈಜುಕೊಳ ನವೀಕರಣದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ ಗಮನಕ್ಕೆ ತಂದ ಬಳಿಕ ಅವರು ಇದಕ್ಕೆ ಅನುದಾನ ನೀಡಿದ್ದರು. ಪಾಲಿಕೆ ಆಯುಕ್ತರ ಗಮನಕ್ಕೆ ತಂದಿದ್ದೆವು. ಅವರೂ ಸಹ ಸಹಕಾರ ನೀಡಿದ್ದಾರೆ ಎಂದು ಗಡಿಗುಡಾಳ್ ಮಂಜುನಾಥ್ ಸ್ಮರಿಸಿದ್ದಾರೆ.



## ಹರಿಹರದಲ್ಲಿ ಶ್ರೀ ಸವಿತಾ ಮಹರ್ಷಿ ಜಯಂತೋತ್ಸವ

ಹರಿಹರ, ಫೆ.18- ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಶ್ರೀ ಸವಿತಾ ಮಹರ್ಷಿ ಜಯಂತೋತ್ಸವ ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಗುರುಬಸವ ರಾಜ, ಶ್ರೀ ಸವಿತಾ ಮಹರ್ಷಿ ಸಮಾಜದ ಅಧ್ಯಕ್ಷ ಜಿ. ಎಚ್. ರಾಜು ಗೌಡರು, ಉಪಾಧ್ಯಕ್ಷ ಯು.ಎಚ್. ರಾಜು, ಕಾರ್ಯದರ್ಶಿ ವೈ.ಎನ್. ಮಂಜುನಾಥ, ಸಹ ಕಾರ್ಯದರ್ಶಿ ತಿಮ್ಮಪ್ಪ, ಖಜಾಂಚಿ ವಿ.ಎನ್. ಗೋಪಾಲ್, ಸಹ ಖಜಾಂಚಿ ಶ್ರೀಧರ, ಸಮಾಜದ ಸದಸ್ಯರುಗಳಾದ ರಾಜಕಮಾಲ್ ಮಂಜುನಾಥ, ವಿ.ಎನ್. ಹರೀಶ್, ಯು. ಜಗನ್ನಾಥ, ಜಿ.ಸಿ. ವೆಂಕಟೇಶ್, ಹರೀಶ್, ಕೆ.ವೆಂಕಟೇಶ್, ಸಂತೋಷ, ಉಪನ್ಯಾಸಕ ಹೆಚ್.ಎಂ. ಗುರುಬಸವರಾಜಯ್ಯ, ಶಾಸಕರ ಆಪ್ತ ಸಹಾಯಕ ಶಿವಶಂಕರ್ ಚಿಕ್ಕಬಿದರಿ, ವಿನಾಯಕ ಆರಾಧ್ಯಮಠ ಇತರರು ಉಪಸ್ಥಿತರಿದ್ದರು.

# ಸಮೃದ್ಧ ಕನ್ನಡ ನಾಡು ಸರಿಸಾಟಿ ಇಲ್ಲದ ಸಂಪತ್ತನ್ನು ಹೊಂದಿದೆ



**ಹರಪನಹಳ್ಳಿ ತೆಗ್ಗಿನ ಮಠದ ಕಾರ್ಯದರ್ಶಿ ಡಾ.ಟಿ.ಎಂ.ಚಂದ್ರ ಶೇಖರಯ್ಯ**

ಹರಪನಹಳ್ಳಿ, ಫೆ. 18 - ಸಂಪದ್ಭರಿತವಾದ ಕರುನಾಡು ಸಾಹಿತ್ಯ, ಕಲೆ, ಸಂಸ್ಕೃತಿ ಕ್ಷೇತ್ರದಲ್ಲಿ ಉನ್ನತ ಪರಂಪರೆಯನ್ನು ಹೊಂದಿದೆ. ಸಮೃದ್ಧ ಕನ್ನಡನಾಡು ಸರಿಸಾಟಿಯಿಲ್ಲದಷ್ಟು ಸಂಪತ್ಭರಿತ ವಾಗಿದೆ ಎಂದು ತೆಗ್ಗಿನ ಮಠದ ಕಾರ್ಯದರ್ಶಿ ಡಾ.ಟಿ.ಎಂ.ಚಂದ್ರ ಶೇಖರಯ್ಯ ಹೇಳಿದರು.

ತಾಲ್ಲೂಕಿನ ಅನಂತನಹಳ್ಳಿ ಬಳಿ ಇರುವ ಆದರ್ಶ ವಿದ್ಯಾಲಯದಲ್ಲಿ ಶ್ರೀ ಚೋರನೂರು ಹಿರೇಮಠದ ಚೆನ್ನಬಸಯ್ಯ ಮತ್ತು ದೇವಿರಮ್ಮ ದತ್ತಿ, ಅಧ್ಯಕ್ಷರು ತೆಗ್ಗಿನ ಮಠ ಆರ್ಟ್ಸ್ ಎಜುಕೇಶನ್ ಸೊಸೈಟಿ ದತ್ತಿ, ಟಿ.ಎಂ. ಸೋಮಲಿಂಗಯ್ಯ ದತ್ತಿ, ಎಂ.ಪಿ.ಎಂ. ಶಾಂತಮ್ಮ ದತ್ತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಹಾಗೂ ಎಲ್ಲ ಕನ್ನಡಪರ ಸಂಸ್ಥೆಗಳಿಗೆ ಮಾತೃ ಸಂಸ್ಥೆಯಾಗಿ, ಪ್ರಾರಂಭದಿಂದಲೂ ಕನ್ನಡ-ಕನ್ನಡಿಗ-ಕರ್ನಾಟಕದ ಸೇವೆಗೆ ಕನ್ನಡ ಸಾಹಿತ್ಯ ಪರಿಷತ್ತು ಕಂಕಣ ಬದ್ಧವಾಗಿದೆ ಎಂದರು.

ಸಿ.ಪಿ.ಐ. ಸಾಬಯ್ಯ ನಾಯಕ ಮಾತನಾಡಿ, ಮಕ್ಕಳನ್ನು ಲೈಂಗಿಕವಾಗಿ ಶೋಷಿಸುವ ಅಥವಾ ನಿಂದಿಸುವ ಅಥವಾ ಮಕ್ಕಳ ಮೇಲಿನ ಲೈಂಗಿಕ ಶೋಷಣೆ ಖಂಡನೀಯವಾಗಿದ್ದು, ಭಾರತವು ಮಕ್ಕಳನ್ನು ರಕ್ಷಿಸಲು ವ್ಯಾಪಕ ಶ್ರೇಣಿಯ ಕಾನೂನುಗಳನ್ನು ಹೊಂದಿದೆ ಎಂದರು.

ತೆಲಿಗಿ ಸಾಹಿತಿ ಕೆ.ಎಸ್. ವೀರಭದ್ರಪ್ಪ ಅವರು ರಂಗಭೂಮಿ ಕಲೆಗೆ ಪ್ರೋತ್ಸಾಹ ಎಂಬ ವಿಷಯ ಕುರಿತು ಉಪನ್ಯಾಸ ನೀಡಿ, ಗ್ರಾಮೀಣ ಪ್ರದೇಶದ ಜನರಿಗೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ತಿಳಿಸಲು ರಂಗಭೂಮಿ ಪರಿಣಾಮಕಾರಿ ಮಾಧ್ಯಮವಾಗಿ ಬಳಸಲ್ಪಟ್ಟಿದೆ. ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಲು ಇದು ಪರಿಪೂರ್ಣ ಮಾಧ್ಯಮವಾಗಿ ಬಳಸಲ್ಪಟ್ಟಿದೆ. ಕನ್ನಡದಲ್ಲಿ ಜನಪದ ರಂಗಭೂಮಿ, ವೃತ್ತಿ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಗಳಾಗಿ ವಿಂಗಡಿಸಬಹುದು. ರಂಗಭೂಮಿಯ ರಂಗ ಶಿಕ್ಷಣವು ಮಕ್ಕಳಲ್ಲಿ ಜಾತಿ, ಧರ್ಮವನ್ನೂ ಮೀರಿದ ಸಂಸ್ಕೃತಿಯನ್ನು ಕಲಿಸುತ್ತದೆ. ಒಟ್ಟಿಗೆ ಬದುಕುವುದು ಹೇಗೆ ಎಂಬುದನ್ನು ಕಲಿಸಿಕೊಡುತ್ತದೆ. ನೈತಿಕ ಮೌಲ್ಯ ಕುಸಿಯುತ್ತಿದೆ ಎನ್ನುವ ಮಾತುಗಳು ಕೇಳಿಬರುತ್ತಿರುವ ಈ ದಿನಗಳಲ್ಲಿ ರಂಗಭೂಮಿ ಮಕ್ಕಳಲ್ಲಿ ನೈತಿಕ ಮೌಲ್ಯವನ್ನೂ ಕಲಿಸಿಕೊಡುತ್ತವೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ಭಾಷೆ, ನೆಲ, ಜಲ, ಸಾಹಿತ್ಯ, ಸಂಸ್ಕೃತಿ, ಜಾನಪದ ಕನ್ನಡ-ಕನ್ನಡಿಗ-ಕರ್ನಾಟಕ ಹಾಗೂ ಕನ್ನಡದ ಅಸ್ಮಿತೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿಯೊಂದಿಗೆ ಕನ್ನಡ ಭಾಷೆ, ನೆಲ-ಜಲದ ಅಸ್ಮಿತೆಗೆ ತೊಂದರೆ ಬಂದಾಗ ಸರ್ಕಾರ ಹಾಗೂ ಅಪಾರ ಕನ್ನಡಿಗರ ಒತ್ತಾಸೆಯೊಂದಿಗೆ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸದಾ ನಿಮ್ಮೊಂದಿಗೆ ಇದೆ ಎಂದರು.

ಕಾರ್ಯಕ್ರಮದಲ್ಲಿ ಸರ್ಕಾರಿ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕ ಎಚ್.ಕೆ. ಚಂದ್ರಪ್ಪ. ಎಸ್.ಡಿ.ಎಂ.ಸಿ ಅಧ್ಯಕ್ಷ ಎಂ. ಬಸವನಗೌಡ, ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಗೌರವ ಕಾರ್ಯದರ್ಶಿ ಜಿ. ಮಹಾದೇವಪ್ಪ, ಗೌರವ ಕೋಶಾಧಿಕಾರಿ ಕೆ. ರಾಘವೇಂದ್ರ ಶೆಟ್ಟಿ, ಶಿಕ್ಷಕರಾದ ಮಲ್ಲಮ್ಮ, ಪರ್ವಿನ್, ಸಂತೋಷ್, ಸೂರ್ಯನಾಯ್ಕ, ವೃಷಭೇಂದ್ರಪ್ಪ ಸೇರಿದಂತೆ ಇತರರು ಇದ್ದರು.

## ಕಾಶ್ಮೀರ ನಿಯಂತ್ರಣ ರೇಖೆ ಬಳಿಯ ಉರಿ ಸೆಲ್ಫಿ ತಾಣ ಪ್ರವಾಸಿಗರ ಆಕರ್ಷಣೆ

ಉರಿ (ಕಾಶ್ಮೀರ), ಫೆ. 18 – ಕಾಶ್ಮೀರದ ನಿಯಂತ್ರಣ ರೇಖೆ ಬಳಿ ನಿರ್ಮಿಸಲಾಗಿರುವ ಸೆಲ್ಫಿ ತಾಣ ಈಗ ಪ್ರವಾಸಿಗರ ಆಕರ್ಷಣೆಯ ತಾಣವಾಗಿದೆ. ಈ ಸೆಲ್ಫಿ ತಾಣದಲ್ಲಿ ಝೀಲಂ ನದಿಯ ವಿಹಂಗಮ ಹಿನ್ನೆಲೆಯೊಂದಿಗೆ ಚಿತ್ರ ತೆಗೆಸಿಕೊಳ್ಳಲು ಅವಕಾಶ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ. 'ಇಂಡಿಯಾ' ಹೆಸರಿನ ಹಿನ್ನೆಲೆಯಲ್ಲಿ ಸೆಲ್ಫಿ ತಾಣವನ್ನು ರೂಪಿಸಲಾಗಿದೆ. ನಿಯಂತ್ರಣ ರೇಖೆಯ ಬಳಿ ಸೈನ್ಯ ಕಳೆದ ವರ್ಷ 'ಕಮಾನ್ ಸೇತು' ನಿರ್ಮಿಸಿತ್ತು. ಗಣರಾಜ್ಯೋತ್ಸವದ ವೇಳೆ ಇದನ್ನು ಸಾರ್ವಜನಿಕರಿಗೆ ತೆರವುಗೊಳಿಸಲಾಗಿದೆ. ಆರ್.ಎನ್.ಎ.ಎಫ್. ಸ್ಥಾಪಕಿ ಹಾಗೂ ಕಲಾವಿದೆ ರೂಬಲ್ ನಾಗಿ ಅವರು ಈ ಸೆಲ್ಫಿ ತಾಣವನ್ನು ರೂಪಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿ - 44ರ ಪಕ್ಕದಲ್ಲಿ ಸೆಲ್ಫಿ ತಾಣ ರಚಿಸಲಾಗಿದೆ.

## ನಗರದಲ್ಲಿ ಇಂದು ಕಬಡ್ಡಿ ಕ್ರೀಡಾಪಟುಗಳ ಆಯ್ಕೆ

ದಾವಣಗೆರೆ ಜಿಲ್ಲೆಯ ಬಾಲಕ ಮತ್ತು ಬಾಲಕಿಯರ ಹಾಗೂ ಪುರುಷರ ಸೀನಿಯರ್ ಕಬಡ್ಡಿ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆ ಇಂದು ಮಧ್ಯಾಹ್ನ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ.

ಸೀನಿಯರ್ ಪುರುಷರ ಕಬಡ್ಡಿ ಕ್ರೀಡಾಪಟುಗಳ ತೂಕ 85 ಕೆಜಿ ಒಳಗೆ ಇರಬೇಕು. ಸಬ್ ಜ್ಯೂನಿಯರ್ ಬಾಲಕ ಮತ್ತು ಬಾಲಕಿಯರ ತೂಕ 55 ಕೆಜಿ ಒಳಗಿರಬೇಕು. 16 ವರ್ಷದೊಳಗಿನವರಾಗಿರಬೇಕು. ಕಡ್ಡಾಯವಾಗಿ ಆಧಾರ್ ಕಾರ್ಡ್ ತರಬೇಕು. ಹೆಚ್ಚಿನ ಮಾಹಿತಿಗಾಗಿ ದಾವಣಗೆರೆ ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆಯ ಅಧ್ಯಕ್ಷರು ಅಥವಾ ಸಹ ಕಾರ್ಯದರ್ಶಿಯನ್ನು (6363118501, 8073185068) ಸಂಪರ್ಕಿಸಬಹುದು. ಬಿಹಾರದಲ್ಲಿ ನಡೆಯುವ 33 ನೇ ರಾಷ್ಟ್ರೀಯ ಸಬ್ ಜ್ಯೂನಿಯರ್ ಕಬಡ್ಡಿ ಚಾಂಪಿಯನ್‌ಶಿಪ್ ಗೆ ಹಾಗೂ 70 ನೇ ಸೀನಿಯರ್ ರಾಷ್ಟ್ರೀಯ ಪುರುಷರ ಕಬಡ್ಡಿ ಚಾಂಪಿಯನ್ ಶಿಪ್‌ಗೆ ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ವತಿಯಿಂದ ರಾಜ್ಯ ಕಬಡ್ಡಿ ತಂಡದ ಆಯ್ಕೆಯು ನಾಡಿದ್ದು ದಿನಾಂಕ 20 ರಂದು ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ.

## ಸನ್ನದುದಾರರ ಬೇಡಿಕೆಗಳ ಈಡೇರಿಕೆಗೆ ಒತ್ತಾಯ

ದಾವಣಗೆರೆ, ಫೆ. 18 - ರಾಜ್ಯದ ಎಲ್ಲಾ ವರ್ಗದ ಸನ್ನದುದಾರರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಬಿ. ಗೋವಿಂದ ರಾಜ್ ಹೆಗ್ಡೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಸುಮಾರು 12,500 ಪರವಾನಿಗೆ ನೀಡಲಾಗಿದ್ದು, ಈ ಎಲ್ಲಾ ಸನ್ನದುದಾರರ ಪರವಾಗಿ ಅಸೋಸಿಯೇಷನ್ ಧ್ವನಿ ಎತ್ತುತ್ತಾ ಬಂದಿದೆ ಎಂದರು.

ಚಿಲ್ಲರೆ ಮದ್ಯ ಮಾರಾಟದ ಮೇಲೆ ಕನಿಷ್ಠ ಶೇ. 20 ಲಾಭಾಂಶ ನೀಡುವಂತೆ ಮನವಿ ಮಾಡಲಾಗಿದೆ. ಹೆಚ್ಚಳ ಮಾಡಿರುವ ಅಬಕಾರಿ ಶುಲ್ಕವನ್ನು ಕಡಿಮೆ ಮಾಡಬೇಕೆಂಬಿತರೆ ಬೇಡಿಕೆಗಳನ್ನು ಈಡೇರಿಸಲು ಮನವಿಯಲ್ಲಿ ತಿಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ಸಂಬಂಧ ಮೇಜರ್ ಸರ್ಜರಿಯ ಅಗತ್ಯವಿದ್ದು, ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಫೆ. 22 ರಂದು ಗುರುವಾರ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 10.30 ಕ್ಕೆ ರೈಲ್ವೆ ನಿಲ್ದಾಣದಿಂದ ಮೆರವಣಿಗೆ ಆರಂಭವಾಗಿ, ಫ್ರೀಡಂ ಪಾರ್ಕ್‌ವರೆಗೆ ನಡೆಯಲಿದೆ. ನಂತರ ಪ್ರತಿಭಟನೆ ನಡೆಯಲಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅಸೋಸಿಯೇಷನ್ ಪದಾಧಿಕಾರಿಗಳಾದ ಎಸ್. ಗುರುಸ್ವಾಮಿ, ಟಿ.ಎಂ. ಮೆಹರ್ವಾಡಿ, ರಾಮುಲು ಬಳ್ಳಾರಿ, ಅಶೋಕ್ ಗುತ್ತೇದಾರ್, ಬಾಬುರೆಡ್ಡಿ, ರಾಜೇಂದ್ರ ಭೂತೆ, ರಾಮಲು ರೆಡ್ಡಿ, ತಿಮ್ಮಪ್ಪ, ವೆಂಕಟೇಶ್, ಈಶ್ವರ್ ಸಿಂಗ್ ದಾವಣಗೆರೆ ಉಪಸ್ಥಿತರಿದ್ದರು.

## ಪಿಹೆಚ್‌ಡಿ ಸಂಶೋಧನಾ ಅಭ್ಯರ್ಥಿಗಳಿಂದ ಅರ್ಜಿ

ದಾವಣಗೆರೆ, ಫೆ. 18 - ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಪ್ರಸಕ್ತ ಸಾಲಿನ ಪಿಹೆಚ್‌ಡಿ ಸಂಶೋಧನಾ ಸ್ಥಾನಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಮಾರ್ಚ್ 10 ರೊಳಗಾಗಿ ವಿಭಾಗವಾರು ಖಾಲಿ ಸ್ಥಾನಗಳ ವಿವರಗಳಿಗಾಗಿ ಹಾಗೂ ಸಂಶೋಧನಾ ಸ್ಥಾನಗಳ ವಿವರಗಳಿಗಾಗಿ ವೆಬ್ ಸೈಟ್ www.davangereuniversity.ac.in ಮೂಲಕ ಅರ್ಜಿ ಸಲ್ಲಿಸಬಹುದು ಎಂದು ವಿಶ್ವವಿದ್ಯಾನಿಲಯದ ಕುಲಸಚಿವರು ತಿಳಿಸಿದ್ದಾರೆ.

## ಇದೇ ದಿನಾಂಕ 26 ರಂದು ಉದ್ಯೋಗ ಮೇಳ

ದಾವಣಗೆರೆ, ಫೆ. 18- ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಇದೇ ದಿನಾಂಕ 26 ಮತ್ತು 27 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳ ಆಯೋಜಿಸ ಲಾಗಿದೆ. ಉದ್ಯೋಗಾಕಾಂಕ್ಷಿಗಳಿಗೆ ವಿದ್ಯಾರ್ಹತೆಗೆ ಅನು ಗುಣವಾಗಿ ಉದ್ಯೋಗಾವಕಾಶ ಒದಗಿಸುವ ಸಂಬಂಧ ಈ ಮೇಳವನ್ನು ಆಯೋಜಿಸಲಾಗಿದೆ. ನೋಂದಣಿ ಯಾಗಲು ವೆಬ್‌ಸೈಟ್; https;//skillconnect.kaushalkar.com ಮೂಲಕ ನೋಂದಾಯಿಸಿ ಉದ್ಯೋಗಾಕಾಂಕ್ಷಿಗಳು ಇದರ ಸದುಪಯೋಗ ಪಡೆ ಯಲು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದ್ದಾರೆ.

### ಬಿ.ಎಲ್. ಶೇಷಪ್ಪ ಶ್ರೇಷ್ಠಿ ನಿಧನ




ದಾವಣಗೆರೆ ಸಿಟಿ ಕೆ.ಟಿಜೆ ನಗರ ನಿವಾಸಿಯಾದ ಶ್ರೀಯುತ ಬಿ.ಎಲ್. ಶೇಷಪ್ಪ ಶ್ರೇಷ್ಠಿ (84) ನಿವೃತ್ತ ತಹಶೀಲ್ದಾರ್ ಇವರು ದಿನಾಂಕ 17.02.2024ರ ಶನಿವಾರದಂದು ರಾತ್ರಿ 12.10ಕ್ಕೆ ನಿಧನರಾದರು. ಮೃತರು ಪತ್ನಿ, ಪುತ್ರರು, ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.2.2024ರ ಭಾನುವಾರ ಮಧ್ಯಾಹ್ನ 1.30ಕ್ಕೆ ಆರ್.ಹೆಚ್. ಬೃಂದಾವನದಲ್ಲಿ ನೆರವೇರಿಸಲಾಯಿತು.

### ನಾಗರತ್ನಮ್ಮ ನಿಧನ



ದಾವಣಗೆರೆ ಸಿಟಿ ಕುಂದುವಾಡ ರಸ್ತೆ ಜೈನ್ ಲೇಔಟ್, 3ನೇ ಮುಖ್ಯ ರಸ್ತೆಯ ವಾಸಿ ಹೊಸ ಬುಳ್ಳಾಪುರ ಗ್ರಾಮ ನಲ್ಕುದುರೆ ಮಠದ ವೇ. ಬಿ.ಬಿ. ರುದ್ರಮುನಿಸ್ವಾಮಿ ಇವರ ಧರ್ಮಪತ್ನಿ ಶ್ರೀಮತಿ ನಾಗರತ್ನಮ್ಮ (60) ದಿನಾಂಕ 18.02.2024ರ ಭಾನುವಾರ ಸಂಜೆ 5.30ಕ್ಕೆ ನಿಧನರಾದರು. ಪತಿ, ಮೂವರು ಪುತ್ರರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.02.2024ರ ಸೋಮವಾರ ಮಧ್ಯಾಹ್ನ 1ಕ್ಕೆ ನಗರದ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

### ಹತ್ತನೇ ವರ್ಷದ ಪುಣ್ಯಸ್ಮರಣೆ



**ಲಿಂ|| ಸಿ.ಎಸ್. ಸಿದ್ಧಬಸಯ್ಯನವರು,** ಮುಡೇನಹಳ್ಳಿ

ಲಿಂಗೈಕ್ಯ : 19.02.2014

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು

ನಿಮ್ಮ ನೆನಪು ನಮ್ಮಲ್ಲಿ ಸದಾ ಹಚ್ಚಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ,

ಧರ್ಮಪತ್ನಿ : **ಶ್ರೀಮತಿ ಶಾರದಮ್ಮ ಸಿ.ಎಸ್. ಸಿದ್ಧಬಸಯ್ಯ**

**ಶ್ರೀಮತಿ, ಶ್ರೀ ಸಿ.ಎಸ್. ಮರುಳಸಿದ್ಧಯ್ಯ ಮತ್ತು ಸಹೋದರರು,** ಅಗಸನಕಟ್ಟೆ

**ಶ್ರೀಮತಿ ಲತಾ, ಶ್ರೀ ಸಿ.ಎಸ್. ನಾಗರಾಜಯ್ಯ,**

**ಶ್ರೀಮತಿ ಗೀತಾ, ಶ್ರೀ ಸಿ.ಎಸ್. ವಸಂತಯ್ಯ**

**ಶ್ರೀಮತಿ ಮಮತ, ಶ್ರೀ ಸಿ.ಎಸ್. ಸಿದ್ದೇಶ್**

ಮೊಮ್ಮಕ್ಕಳಾದ : **ಯಶವಂತ್, ಯೋಗೇಶ್, ಆಕಾಶ್, ನಿವೇದಿತಾ, ನೂತನ್, ಕಾರ್ತಿಕ್ ಹಾಗೂ ಬಂಧು-ಮಿತ್ರರು,** ಮುಡೇನಹಳ್ಳಿ.

**ಮುಡೇನಹಳ್ಳಿ ಮತ್ತು ಅಗಸನಕಟ್ಟೆ ಗ್ರಾಮಸ್ಥರು**

**ಶ್ರೀ ವಿಶ್ವಬಂಧು ಪ್ರಾವಿಜನ್ ಸ್ಟೋರ್**

ಕೆ.ಆರ್.ಮಾರ್ಕೆಟ್, ದಾವಣಗೆರೆ. ಮೊ : 99807-28126

## ಜಗಳೂರು : ವೈಯಕ್ತಿಕ ಸೌಲಭ್ಯಕ್ಕೆ ಅರ್ಜಿ

ಜಗಳೂರು, ಫೆ.18- ಶೇಕಡಾ 24.10, 7.25 ಮತ್ತು ಶೇ. 5 ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ, ಅಲ್ಪಸಂಖ್ಯಾತರ ಮತ್ತು ದೈಹಿಕ ವಿಕಲಚೇತನರ ಅರ್ಹ ಫಲಾನುಭವಿಗಳಿಗೆ ವೈಯಕ್ತಿಕ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು ಜಗಳೂರು ಪಟ್ಟಣ ಪಂಚಾಯಿತಿಯಲ್ಲಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಇದೇ ದಿನಾಂಕ 23 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಿ.ಲೋಕ್ಯಾನಾಯ್ಕ ತಿಳಿಸಿದ್ದಾರೆ.

## ಮ್ಯಾಜಿಸ್ಟ್ರೇಟರಿಂದ ಲೈಂಗಿಕ ಶೋಷಣೆ ಆರೋಪ : ತನಿಖಾ ಸಮಿತಿ ರಚನೆ

ಅಗರ್ತಲ, ಫೆ. 18 – ತ್ರಿಪುರಾ ನ್ಯಾಯಾಲಯವೊಂದರ ಮ್ಯಾಜಿಸ್ಟ್ರೇಟರ ಕೋಣೆಯಲ್ಲಿ ಲೈಂಗಿಕ ಶೋಷಣೆ ಮಾಡಲಾಗಿತ್ತು ಎಂದು ಅತ್ಯಾಚಾರ ಸಂತ್ರಸ್ತೆಯೊಬ್ಬರು ಆರೋಪಿಸಿದ್ದಾರೆ.

ಅತ್ಯಾಚಾರ ಕುರಿತ ಹೇಳಿಕೆ ದಾಖಲಿಸಲು ಫೆಬ್ರವರಿ 16ರಂದು ಕಮಲ್ಪುರದಲ್ಲಿರುವ ಪ್ರಥಮ ದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರ ಕೋಣೆಗೆ ತೆರಳಿದ್ದೆ. ಆಗ ಲೈಂಗಿಕವಾಗಿ ಪೀಡಿಸಲಾಗಿದೆ ಎಂದು ಮಹಿಳೆ ಆರೋಪಿಸಿದ್ದರು.

ಈ ಬಗ್ಗೆ ಕಮಲ್ಪುರದ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಎದುರು ದೂರು ದಾಖಲಿಸಿರುವ ಮಹಿಳೆ, ಹೇಳಿಕೆ ದಾಖಲಿಸಲು ತೆರಳಿದಾಗ ನ್ಯಾಯಾಧೀಶ ನನ್ನ ಮೈ ಮುಟ್ಟಿದರು. ಆಗ ನಾನು ಛೇಂಬರ್‌ನಿಂದ ಹೊರಗೆ ಓಡಿ ಬಂದೆ. ಈ ಬಗ್ಗೆ ವಕೀಲರಿಗೆ ಹಾಗೂ ನನ್ನ ಪತಿಗೆ ತಿಳಿಸಿದೆ ಎಂದು ಹೇಳಿದ್ದಾರೆ.

ಮಹಿಳೆಯ ಪತಿ ಸಹ ಕಮಲ್ಪುರ ವಕೀಲರ ಒಕ್ಕೂಟದ ಬಳಿ ಪ್ರತ್ಯೇಕ ದೂರು ದಾಖಲಿಸಿದ್ದಾರೆ. ಈ ದೂರು ದಾಖಲಿಸಿಕೊಂಡಿರುವ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಗೌತಮ್ ಸರ್ಕಾರ್, ತನಿಖೆಗಾಗಿ ಮೂವರು ಸದಸ್ಯರ ಸಮಿತಿಯನ್ನು ರಚಿಸಿದ್ದಾರೆ.

### ಶ್ರೀ ಶಾಂತವೀರ ಶಿಲ್ಪಕಲಾ ಮಾಲೀಕರಾದ ಆರ್. ನಟರಾಜ್ ನಿಧನ



ದಾವಣಗೆರೆ ರಾಜೀವ್‌ಗಾಂಧಿ ಬಡಾವಣೆ ವಾಸಿ

**ಶ್ರೀ ಶಾಂತವೀರ ಶಿಲ್ಪಕಲಾ ಮಾಲೀಕರಾದ**

**ಆರ್. ನಟರಾಜ್**

ಇವರು ದಿನಾಂಕ 18.02.2024ರ ಭಾನುವಾರ ಸಂಜೆ 5ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 53 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 19.02.2024ರ ಸೋಮವಾರ ಮಧ್ಯಾಹ್ನ 12 ಕ್ಕೆ ನಗರದ ಬೂದಾಳ್ ರಸ್ತೆಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ,**

**ಹರ್ಷವರ್ಧನ್, ಇಂಜಿನಿಯರ್, ದಾವಣಗೆರೆ,**

**ಮೊ : 8892626323**

# ಸಕಲ ಜೀವರಾಶಿಗೂ ಸೂರ್ಯ ಆರೋಗ್ಯದಾತ



ದಾವಣಗೆರೆ, ಫೆ.18- ಆರೋಗ್ಯಂ ಭಾಸ್ಕರಾದಿಚ್ಛೇತ್ ಎಂಬಂತೆ ನಮ್ಮೆಲ್ಲರ ಆರೋಗ್ಯದ ಮೂಲಪುರುಷ ಸೂರ್ಯ ನಾಗಿದ್ದಾನೆ. ಸೂರ್ಯ ಸಕಲ ಜೀವರಾಶಿಗೂ ಆರೋಗ್ಯದಾತ ಎಂದು ಯೋಗ ತಜ್ಞ ರಾಘವೇಂದ್ರ ಗುರೂಜಿ ಅಭಿಪ್ರಾಯಪಟ್ಟರು.

ನಗರದ ಆದರ್ಶ ಯೋಗ ಪ್ರತಿಷ್ಠಾನಂ ಶ್ರೀ ಮಹಾಮ್ಮಯಿ ವಿಶ್ವ ಯೋಗ ಮಂದಿರ ಹಾಗೂ ಯೋಗ ಚಿಕಿತ್ಸಾ ಕೇಂದ್ರದಲ್ಲಿ ರಥಸಪ್ತಮಿ ಪ್ರಯುಕ್ತ ಹಮ್ಮಿಕೊಳ್ಳ ಲಾಗಿದ್ದ ಸಾಮೂಹಿಕ 108 ಸೂರ್ಯ ನಮಸ್ಕಾರ ಯೋಗಯಜ್ಞ ಕಾರ್ಯಕ್ರಮ ದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಮಾಘ ಮಾಸ, ಶುಕ್ಲ ಪಕ್ಷದ ಸಪ್ತಮಿಯಂದು ದೇಶಾದ್ಯಂತ ರಥಸಪ್ತಮಿ ಹಬ್ಬವನ್ನು ಆಚರಿಸಲಾಗು ವುದು. ಸೂರ್ಯ ನಮಗೆ ಪ್ರತ್ಯಕ್ಷವಾಗಿ ಕಾಣುವ ದೈವ ಸ್ವರೂಪಿ, ವಿಗ್ರಹ ಆರಾಧನೆ ಬಳಕೆಗೆ ಬರುವ ಮೊದಲಿನಿಂದಲೂ ಸೂರ್ಯಾರಾಧನೆಗೆ ಹೆಚ್ಚು ಪ್ರಾಶಸ್ತ್ಯ ಇತ್ತು. ಆಹಾರಕ್ಕಾಗಿ ರೋಗ ನಿವಾರಣೆಗಾಗಿ ಸೂರ್ಯೋಪಾಸನೆ ಮಾಡಬೇಕೆಂದು ಸ್ಕಂದ, ವರಾಹ ಪುರಾಣಗಳಲ್ಲಿ ಹೇಳಲಾಗಿದೆ. ಸದೃಢ ದೇಹ, ಆರೋಗ್ಯ ಸ್ವಾಸ್ಥ್ಯವನ್ನು ಬಯಸುವವರು ಸೂರ್ಯನ ಆರಾಧನೆಯನ್ನು ಮಾಡಿದರೆ ಪೂರ್ಣಫಲ ಸಿಗುವುದು ನಿಶ್ಚಿತ. ಸೂರ್ಯೋಪಾಸನೆಯನ್ನು ಪ್ರಮುಖವಾಗಿ ಭಾರತ, ಮಧ್ಯ ಆಫ್ರಿಕಾ, ಈಜಿಪ್ಟ್, ಗ್ರೀಸ್ ಹಾಗೂ ಮಧ್ಯ ಏಷ್ಯಾಗಳಲ್ಲಿ ಆಚರಿಸಲಾಗುತ್ತದೆ.


ಯೋಗಾಭ್ಯಾಸದಲ್ಲಿ ಮೊದಲ ಪ್ರಾಶಸ್ತ್ಯ ಸೂರ್ಯ ನಮಸ್ಕಾರಕ್ಕೆ ಇದೆ. ಕಾರಣ ಮನಸ್ಸು, ದೇಹ ಮತ್ತು ಉಸಿರಾಟ ವ್ಯವಸ್ಥೆಗಳಿಗೆ ವಿಶೇಷ ಪರಿಣಾಮ ಒಟ್ಟಾಗಿ ಲಭಿಸುವುದು. ಭೂಮಿಯಲ್ಲಿನ ಸಕಲ ಜೀವರಾಶಿಗಳ ಚಟುವಟಿಕೆಗಳು ಸೂರ್ಯನಿಂದ ನಡೆಯುತ್ತದೆ. ಸೂರ್ಯನಿಲ್ಲದೆ ಜೀವನದ ಅಸ್ತಿತ್ವವಿರಲು ಸಾಧ್ಯವಿಲ್ಲ. ಈ ದಿನ ಯಾರು ಶ್ರದ್ಧಾ ಭಕ್ತಿಯಿಂದ 108 ಸೂರ್ಯ ನಮಸ್ಕಾರವನ್ನು ಮಾಡುತ್ತಾರೋ ಅವರಿಗೆ ಸದೃಢ ದೇಹ, ಆರೋಗ್ಯವಂತ ಮನಸ್ಸು, ಲವಲವಿಕೆ, ತೇಜಸ್ಸು ಲಭಿಸಿ ದೀರ್ಘಾಯುಷಿಗಳಾಗಿ ಬಾಳುತ್ತಾರೆ ಎಂದು ರಥ ಸಪ್ತಮಿಯ ವಿಶೇಷತೆಯನ್ನು ತಿಳಿಸಿದರು.

ಪುರೋಹಿತ ಅಂತರವಳ್ಳಿ ಮುರಳೀಧರ ಆಚಾರ್ ಅವರ ಮಾರ್ಗದರ್ಶನದಲ್ಲಿ ಸೂರ್ಯ ಯಜ್ಞ ಪೂಜೆಯನ್ನು ಅಭಿಯಂತರ ಚೇತನ್ ಮತ್ತು ಶ್ರೀಮತಿ ಶ್ವೇತಾ ಒಡೆಯರ್ ದಂಪತಿ ಸರ್ವಪೂಜೆ ಕೈಂಕರ್ಯವನ್ನು ನಡೆಸಿಕೊಟ್ಟರು.

ವಿಶೇಷ ಹೂವಿನ ಅಲಂಕಾರ ಸೇವೆಯನ್ನು ಸಗಟು ಔಷಧಿ ವ್ಯಾಪಾರಿ ಸಂದೀಪ್ ಒಡೋನಿ ಕುಟುಂಬದವರು, ಅಂಚೆ ಇಲಾಖೆಯ ಶ್ರೀಮತಿ ವೇದಾವತಿ ಡಿ.ಎಂ.ಎಸ್., ನಿವೃತ್ತ ತಹಶೀಲ್ದಾರ್ ವಿಶ್ವನಾಥಯ್ಯ ಕೆ.ಎಂ., ಅಭಿಯಂತರ ಲಕ್ಷ್ಮಣ್ ಹೆಚ್.ಎನ್. ಫಲಸೇವೆಯನ್ನು, ಪ್ರಸಾದ ಸೇವೆಯನ್ನು ಜಿಲ್ಲಾಧಿಕಾರಿ ಕಛೇರಿ ಸಿಬ್ಬಂದಿ ಹೆಚ್. ಸಂತೋಷ್ ಮಾಡಿದರು. ರಂಗೋಲಿ ಸೇವೆ ಶ್ರೀಮತಿ ಗೌರಮ್ಮ ಮುಖೇಶ್‌ದೇವ್, ಪೃಥ್ವಿದೇವ್ ಇನ್ನಿತರರು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

ಕಾರ್ಯಕ್ರಮದಲ್ಲಿ ಯೋಗ ಶಿಕ್ಷಕ ವೀರಭದ್ರಯ್ಯಸ್ವಾಮಿ ಮತ್ತು ಅವರ ಶಿಷ್ಯ ವರ್ಗ, ಜೀವ ವಿಮಾ ನಿಗಮದ ಎ.ಆರ್. ಶೇಷಾದ್ರಿ, ಉದ್ಯಮಿ ಆಶಾ ಪ್ರದೀಪ್, ಮೀಸಲು ಆರಕ್ಷಕ ಚಂದ್ರ, ಮಹಾಂತೇಶ್ ಮುಂತಾದವರು ಭಾಗವಹಿಸಿದ್ದರು.

# ಮಾನವೀಯತೆ ಮೆರೆದ ಶಾಸಕ ಕೆ.ಎಸ್. ಬಸವಂತಪ್ಪ



ದಾವಣಗೆರೆ, ಫೆ. 18 - ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಮಹಿಳೆಯನ್ನು ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ತಮ್ಮ ಕಾರಿನಲ್ಲಿಯೇ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಕೊಡಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ತಾಲ್ಲೂಕಿನ ಹದಡಿ ಮತ್ತು ಆರನೇ ಕಲ್ಲು ಮಧ್ಯೆ ಬಸ್ ಅಪಘಾತದಲ್ಲಿ ಕುಕ್ಕುವಾಡ ಗ್ರಾಮದ ಹಾಲಮ್ಮ (55) ಗಂಭೀರವಾಗಿ ಗಾಯಗೊಂಡಿದ್ದು, ಸಕಾಲದಲ್ಲಿ ಆಂಬ್ಯುಲೆನ್ಸ್, ಯಾವುದೇ ವಾಹನಗಳು ಬಾರದೆ ರಸ್ತೆಯಲ್ಲಿಯೇ ನರಳಾಡುತ್ತಿದ್ದರು.

ಇದೇ ಸಮಯಕ್ಕೆ ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ಕಾರಿಗನೂರು ಗ್ರಾಮದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ತೆರಳುತ್ತಿರುವಾಗ ದಾರಿ ಮಧ್ಯೆ ಗಾಯಗೊಂಡು ನರಳುತ್ತಿದ್ದ ಮಹಿಳೆಯನ್ನು ಕಂಡ ಶಾಸಕ ಬಸವಂತಪ್ಪ, ಕೂಡಲೇ ತಮ್ಮ ಕಾರಿನಲ್ಲಿಯೇ ಎಸ್.ಎಸ್. ಹೈಟೆಕ್ ಆಸ್ಪತ್ರೆಗೆ ದಾಖಲಿಸಿದರು. ಮಹಿಳೆಯ ಕುಟುಂಬ ಸದಸ್ಯರಿಗೆ ವೈಯಕ್ತಿಕ ಧನ ಸಹಾಯ ಮಾಡಿ ಮಾನವೀಯತೆ ಮೆರೆದಿದ್ದಾರೆ.

ಕುಕ್ಕುವಾಡ ಗ್ರಾಮದಿಂದ ದಾವಣಗೆರೆಯ ಸಂಬಂಧಿಕರೊಬ್ಬರ ಮನೆಯಲ್ಲಿ ತೊಟ್ಟಿಲು ಶಾಸ್ತ್ರ ಕಾರ್ಯಕ್ರಮಕ್ಕೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ನಲ್ಲಿ ಬರುವಾಗ ಹದಡಿ ಮತ್ತು ಆರನೇ ಕಲ್ಲು ಮಧ್ಯೆ ಚಾಲಕ ಬ್ರೇಕ್ ಹಾಕಿದ ಸಂದರ್ಭದಲ್ಲಿ ಬಾಗಿಲ ಬಳಿ ನಿಂತಿದ್ದ ಆ ಮಹಿಳೆ ಕೆಳಗೆ ಬಿದ್ದು ಈ ಘಟನೆ ನಡೆದಿದೆ ಎಂದು ಹೇಳಲಾಗಿದ್ದು, ತಲೆಗೆ ಬಲವಾದ ಪೆಟ್ಟು ಬಿದ್ದಿದ್ದು, ಕೈಕಾಲುಗಳು ತರಚಿವೆ. ಈ ಕುರಿತು ಹದಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಪಾಕ್‌ನಿಂದ ನಿಯಂತ್ರಣ ರೇಖೆ ಬಳಿ ಹೆಚ್ಚಿನ ಟೆಲಿಕಾಂ ಟವರ್**
ಜಮ್ಮು : ಉಗ್ರರಿಗೆ ನೆರವಾಗಲು ಮತ್ತು ನುಸುಳುವಿಕೆ ಹೆಚ್ಚಿಸಲು ಪಾಕಿಸ್ತಾನವು ನಿಯಂತ್ರಣ ರೇಖೆಯ ಬಳಿ ಟೆಲಿಕಾಂ ಟವರ್‌ಗಳ ಸಂಖ್ಯೆ ಹೆಚ್ಚಿಸುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ನಿರುದ್ಯೋಗಿಗಳಿಗೆ ಡಬಲ್ ಹೊಡೆತವಾಗಿದೆ : ರಾಹುಲ್ ಗಾಂಧಿ**
ನವದೆಹಲಿ : ಉತ್ತರ ಪ್ರದೇಶದ ಸಮಾವೇಶದಲ್ಲಿ ನಿರುದ್ಯೋಗದ ವಿಷಯ ಪ್ರಸ್ತಾಪಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಡಬಲ್ ಇಂಜಿನ್ ಸರ್ಕಾರದಿಂದ ನಿರುದ್ಯೋಗಿಗಳಿಗೆ ಡಬಲ್ ಹೊಡೆತವಾಗಿದೆ ಎಂದಿದ್ದಾರೆ.

**ಮೋದಿ ಮತ್ತೆ ಪ್ರಧಾನಿ ಮಾಡಲು ದೇಶ ನಿರ್ಧರಿಸಿಯಾಗಿದೆ : ಷಾ**
ನವದೆಹಲಿ : ನರೇಂದ್ರ ಮೋದಿ ಅವರನ್ನು ಮೂರನೇ ಬಾರಿ ಪ್ರಧಾನ ಮಂತ್ರಿ ಮಾಡಲು ದೇಶ ನಿರ್ಧರಿಸಿದೆ ಎಂದು ಹೇಳಿರುವ ಬಿಜೆಪಿ ನಾಯಕ ಹಾಗೂ ಕೇಂದ್ರ ಸಚಿವ ಅಮಿತ್ ಷಾ, ಪ್ರತಿಪಕ್ಷಗಳ ಕೂಟವಾದ ಐ.ಎನ್.ಡಿ.ಐ.ಎ. ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತಕ್ಕೆ ಆದ್ಯತೆ ನೀಡುತ್ತಿದೆ ಎಂದಿದ್ದಾರೆ.

**ಸಿಎಎ ಕುರಿತ ಕಳವಳ ನಿವಾರಿಸಲಾಗಿದೆ : ಸಂಗ್ಮಾ**
ಶಿಲ್ಲಾಂಗ್ : ಪೌರತ್ವ ತಿದ್ದುಪಡಿ ಕಾಯ್ದೆ (ಸಿ.ಎ.ಎ.) ಕುರಿತು ಮೇಘಾಲಯ ಹೊಂದಿದ್ದ ಕಳವಳಗಳನ್ನು ನಿವಾರಿಸಲಾಗಿದೆ. ರಾಜ್ಯದ ಬಹುತೇಕ ಭಾಗ ಆರನೇ ಪರಿಚ್ಛೇದದಲ್ಲಿ ಬರಲಿದ್ದು, ಈ ಕಾಯ್ದೆಯಿಂದ ವಿನಾಯಿತಿ ಪಡೆದಿದೆ ಎಂದು ಮುಖ್ಯಮಂತ್ರಿ ಕೊನ್‌ರಾಡ್ ಸಂಗ್ಮಾ ಹೇಳಿದ್ದಾರೆ.

**ಕೇಂದ್ರದಿಂದ ಆಧಾರ್ ಕಾರ್ಡ್‌ಗಳ ನಿಷ್ಕ್ರಿಯ : ಮಮತಾ ಆರೋಪ**
ಸುರಿ (ಪಶ್ಚಿಮ ಬಂಗಾಳ) : ಕೇಂದ್ರ ಸರ್ಕಾರ ಪಶ್ಚಿಮ ಬಂಗಾಳದವರ ಆಧಾರ್ ಕಾರ್ಡ್‌ಗಳನ್ನು ನಿಷ್ಕ್ರಿಯಗೊಳಿಸುತ್ತಿದೆ. ಜನರು ಹಲವಾರು ಸಾಮಾಜಿಕ ಸೌಲಭ್ಯಗಳನ್ನು ಪಡೆಯುವುದನ್ನು ತಡೆಯಲು ಈ ರೀತಿ ಮಾಡಲಾಗುತ್ತಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

**ರಿಗ್ಗಿಂಗ್ ಆರೋಪದ ನ್ಯಾಯಿಕ ತನಿಖೆಗೆ ಇಮ್ರಾನ್ ಖಾನ್ ಒತ್ತಾಯ**
ಇಸ್ಲಾಮಾಬಾದ್ : ಪಾಕಿಸ್ತಾನದಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ರಿಗ್ಗಿಂಗ್ ನಡೆದಿದೆ ಎಂಬ ಆರೋಪಗಳ ನ್ಯಾಯಿಕ ತನಿಖೆ ನಡೆಸಬೇಕು ಎಂದು ಜೈಲಿನಲ್ಲಿರುವ ಮಾಜಿ ಪ್ರಧಾನ ಮಂತ್ರಿ ಇಮ್ರಾನ್ ಖಾನ್ ಒತ್ತಾಯಿಸಿದ್ದಾರೆ. ರಿಗ್ಗಿಂಗ್‌ನಲ್ಲಿ ಚುನಾವಣಾ ಆಯೋಗದ ಹಾಗೂ ನ್ಯಾಯಾಂಗದ ಉನ್ನತರು ಭಾಗಿಯಾಗಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ಆರೋಪಿಸಿದ್ದರು.

**ನವಾಲ್ನಿ ಶ್ರದ್ಧಾಂಜಲಿಗೆ ತೆರಳಿದ್ದ 400ಕ್ಕೂ ಹೆಚ್ಚು ಜನರ ಬಂಧನ**
ಮಾಸ್ಕೋ : ಜೈಲಿನಲ್ಲಿ ಮೃತಪಟ್ಟಿದ್ದ ರಷ್ಯಾದ ಅಲೆಕ್ಸೀ ನವಾಲ್ನಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲು ತೆರಳಿದ್ದ 400ಕ್ಕೂ ಹೆಚ್ಚು ಜನರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ನವಾಲ್ನಿ ಅವರು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಅವರ ಪ್ರಮುಖ ಟೀಕಾಕಾರರಾಗಿದ್ದರು.

# ಕೆಲವು ವಿದ್ಯಾರ್ಥಿ ಪರ ಕಾರ್ಯಕ್ರಮ, ಹಲವು ಬೇಡಿಕೆಗಳ ಕಡೆಗಣನೆ

## ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸಿ.ಇ.ಟಿ. ಹಾಗೂ ನೀಟ್ ತರಬೇತಿ ನೀಡುವ ನಿರ್ಧಾರಕ್ಕೆ ಎ.ಐ.ಡಿ.ಎಸ್.ಓ. ಸ್ವಾಗತ

ದಾವಣಗೆರೆ, ಫೆ. 18 - ರಾಜ್ಯದ ಸರ್ಕಾರಿ ಕಾಲೇಜುಗಳಲ್ಲಿನ ಮೂಲ ಸೌಲಭ್ಯಗಳಿಗಾಗಿ ಹೆಚ್ಚಿನ ಅನುದಾನ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸಿ.ಇ.ಟಿ. ಹಾಗೂ ನೀಟ್ ತರಬೇತಿ ನೀಡುವ ನಿರ್ಧಾರವನ್ನು ಎ.ಐ.ಡಿ.ಎಸ್.ಓ ಸ್ವಾಗತಿಸಿದೆ.

ಆದರೆ ಪ್ರತಿ ವರ್ಷ ಬಜೆಟ್ ನ ಶೇ. 30 ನ್ನು ಶಿಕ್ಷಣಕ್ಕೆ ನೀಡಬೇಕೆಂಬ ಜನಸಾಮಾನ್ಯರ, ವಿದ್ಯಾರ್ಥಿಗಳ ಒಕ್ಕೊರಲಿನ ಬೇಡಿಕೆಯನ್ನು ಕಡೆಗಣಿಸಿ ಶೇ 11.9 ಮಾತ್ರವೇ ನೀಡಿರುವುದು ನಿರಾಶಾದಾಯಕವಾಗಿದೆ ಎಂದು ರಾಜ್ಯ ಬಜೆಟ್ ಕುರಿತು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್‌ಕಾಮತ್ ಪ್ರತಿಕ್ರಿಯಿಸಿದ್ದಾರೆ.

ಸರ್ಕಾರಿ ಶಾಲಾ, ಕಾಲೇಜುಗಳನ್ನು ಅಭಿವೃದ್ಧಿ ಪಡಿಸಬೇಕೆಂಬ ಮಾತು ಬಜೆಟ್ ನಲ್ಲಿ ಕೇಳಿ ಬಂದರೂ, ಶುಲ್ಕ ಏರಿಕೆಯ ಮೇಲೆ ನಿರ್ಬಂಧ ಹೇರುವುದರ ಕುರಿತಾಗಿ ಯಾವ ಉಲ್ಲೇಖವೂ ಇಲ್ಲ. ಎನ್.ಇ.ಪಿ ಶಿಫಾರಸ್ಸಿನಂತೆ ರಾಜ್ಯದ ಹಲವು ಕಾಲೇಜುಗಳನ್ನು ಸ್ವ ಹಣಕಾಸು ಸಂಸ್ಥೆಗಳನ್ನಾಗಿ ಮಾಡಿ, ಅವುಗಳಲ್ಲಿನ ಶುಲ್ಕ ಕಳೆದ 2 ವರ್ಷಗಳಲ್ಲಿ 10 ಪಟ್ಟು ಹೆಚ್ಚಿಸಿರುವುದರ ಕುರಿತಾಗಿ ಸರ್ಕಾರದ ಗಮನಕ್ಕೆ ತಂದಿದ್ದರೂ ಸಹಿತ ಈ ಕುರಿತು ಕ್ರಮ ಕೈಗೊಳ್ಳದೇ ಇರುವುದು ರಾಜ್ಯ ಬಜೆಟ್ ವಿದ್ಯಾರ್ಥಿ ಪರವಾಗಿಲ್ಲ ಎಂಬುದನ್ನು ಸಾಬೀತುಪಡಿಸುತ್ತಿದೆ ಎಂದು ಹೇಳಿದ್ದಾರೆ.

ಸರ್ಕಾರವೇ ಹೇಳುವಂತೆ ಯು.ವಿ.ಸಿ.ಇ ಕಾಲೇಜಿಗೆ ಅವಶ್ಯಕವಿರುವುದು 500 ಕೋಟಿ. ಆ ಮೊತ್ತದ 100 ಕೋಟಿಯನ್ನು ಮಾತ್ರವೇ ನೀಡಿ, ಉಳಿದ ಮೊತ್ತವನ್ನು ಹಳೆಯ ವಿದ್ಯಾರ್ಥಿಗಳು ಹಾಗೂ ಕಾರ್ಪೊರೇಟ್ ಕಂಪನಿಗಳ ಸಹಾಯದಿಂದ ಪಡೆಯಬೇಕೆಂಬುದನ್ನು ಹೇಳುವುದರ ಮೂಲಕ ರಾಜ್ಯ ಸರ್ಕಾರ ಎನ್.ಇ.ಪಿ ಶಿಫಾರಸ್ಸುಗಳನ್ನು ಜಾರಿಗೊಳಿಸುತ್ತಿದೆಯೇ ಹೊರತಾಗಿ, ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಒತ್ತಾಸೆಗೆ ಯಾವ ಮನ್ನಣೆಯನ್ನೂ ನೀಡಿಲ್ಲ.

ಈ ಬಾರಿ ಮತ್ತೊಮ್ಮೆ ರಾಜ್ಯದ ಬಡ – ಗ್ರಾಮೀಣ ಭಾಗದ ಶಾಲಾ ಹಾಗೂ ಪದವಿ ವಿದ್ಯಾರ್ಥಿಗಳು ಉಚಿತ ಸೈಕಲ್ – ಉಚಿತ ಲ್ಯಾಪ್‌ಟಾಪ್ ಯೋಜನೆಗಳಿಂದ ವಂಚಿತರಾಗಿದ್ದಾರೆ. ಕಳೆದ 2 ವರ್ಷಗಳಿಂದ ಡಿ.ಬಿ.ಟಿ (ಡೈರೆಕ್ಟ್ ಬ್ಯಾಂಕ್ ಟ್ರಾನ್ಸಫರ್) ಜಾರಿ ತಂದಾಗಿನಿಂದಲೂ ಶಿಷ್ಯವೇತನ ಕೈಗೆ ಸಿಗದೇ ಪರದಾಡುತ್ತಿರುವ ವಿದ್ಯಾರ್ಥಿಗಳ ಅಹವಾಲಿಗೂ ರಾಜ್ಯ ಸರ್ಕಾರ ಕಿವಿಗೊಟ್ಟಿಲ್ಲ. ಅಂಗನವಾಡಿ ಮಕ್ಕಳಿಗೆ ಮೊಟ್ಟೆ ವಿತರಿಸಲು ಸರ್ಕಾರ ನೀಡುವ ಹಣ ಸಾಲುತ್ತಿಲ್ಲ ಎಂದು ಹಲವು ವರ್ಷಗಳಿಂದ ಬೇಡಿಕೆ ಇಟ್ಟರೂ, ಸರ್ಕಾರ ಶಾಶ್ವತ ಪರಿಹಾರ ನೀಡದಿರುವುದು ದುರಂತ.

ಸರ್ಕಾರ ಎಸ್.ಇ.ಪಿ ಸಮಿತಿಯ ಶಿಫಾರಸ್ಸುಗಳನ್ನು ಕಾರ್ಯರೂಪಕ್ಕೆ ತರುವ ಭರವಸೆ ನೀಡಿದೆ. ರಾಜ್ಯದಲ್ಲಿ ಎನ್.ಇ.ಪಿ ಯನ್ನು ಜಾರಿಗೆ ತಂದಾಗಿನಿಂದ ಉಂಟಾಗಿರುವ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ ಎನ್.ಇ.ಪಿ ಯ ಎಲ್ಲಾ ಶಿಫಾರಸ್ಸುಗಳನ್ನು ವಾಪಸ್ಸು ಪಡೆಯಬೇಕೆಂದು ಒತ್ತಾಯಿಸಿದ್ದಾರೆ.

# ಅಹಂನಿಂದ ಸೋಹಂ ಎನ್ನುವುದೇ ನಾಯಕತ್ವ



ದಾವಣಗೆರೆ, ಫೆ. 18 - ವೈಯಕ್ತಿಕ ಸ್ವಾರ್ಥದ ಬದಲು ಸಮಾಜಕ್ಕೆ ಕೊಡುಗೆ ನೀಡುವತ್ತ ಚಿಂತನೆಯನ್ನು ಬದಲಿಸಿ ಕೊಳ್ಳುವುದು ನಾಯಕತ್ವದ ಪ್ರಮುಖ ಗುಣ ಎಂದು ಮಾಜಿ ಶಾಸಕ ಮಹಿಮಾ ಪಟೇಲ್ ಅಭಿಪ್ರಾಯ ಪಟ್ಟಿದ್ದಾರೆ.

ನಗರದ ಜಿ.ಎಂ.ಐ.ಟಿ. ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 'ಭವಿಷ್ಯಕ್ಕಾಗಿ ನಾಯಕತ್ವದ ಗುಣ' ಎಂಬ ವಿಷಯದ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

'ಅಹಂನಿಂದ ಸೋಹಂ' ಎಂಬುದರ ಕಡೆ ನಾವು ನಡೆಯಬೇಕಿದೆ. ಸಮಾಜಕ್ಕೆ ಕೊಡುಗೆ ನೀಡುವ ಸಲುವಾಗಿ ನಮ್ಮ ಆಲೋಚನೆಗಳನ್ನು ಬದಲಿಸಿಕೊಳ್ಳಬೇಕಿದೆ. ಇದು ನಾಯಕತ್ವಕ್ಕೆ ಅಗತ್ಯ ಪ್ರಮುಖ ಗುಣ ಎಂದು ಹೇಳಿದರು.

ಪ್ರತಿ ವ್ಯಕ್ತಿಯ ಬೆಳವಣಿಗೆಗೆ ಹಣ ಬೇಕು. ಆದರೆ, ಕೇವಲ ಆದಾಯದಿಂದಷ್ಟೇ ಜೀವನ ಸಂತೃಪ್ತವಾಗದು. ಆದಾಯ, ಆರೋಗ್ಯ ಹಾಗೂ ಆನಂದ ಮೂರೂ ಬೇಕಿದೆ ಎಂದು ತಿಳಿಸಿದರು.

ಉದ್ಯಮಗಳನ್ನು ಮುನ್ನಡೆಸುವವರು ಹಣ ಮಾಡುವ ಯಂತ್ರವಾಗ ಬಾರದು, ಅದೇ ರೀತಿ ಉದ್ಯೋಗಿಗಳು ದುಡಿಮೆಗೆ ಸೀಮಿತವಾಗ ಬಾರದು. ಮಾನವ ದೃಷ್ಟಿ ಯಿಂದ ಸಮಾಜಕ್ಕೆ ಕೊಡುಗೆ ನೀಡುವ ಬಗ್ಗೆ ಚಿಂತಿಸಬೇಕು ಎಂದು ಪಟೇಲ್ ಹೇಳಿದರು.

ಇನ್ನೋರ್ವ ಮುಖ್ಯ ಅತಿಥಿ ಕರುಣ ಜೀವ ಕಲ್ಯಾಣ ಟ್ರಸ್ಟ್‌ನ ಶಿವನಕೆರೆ ಬಸವಲಿಂಗಪ್ಪ ಮಾತನಾಡಿ, ನಾವಿಂದು ಆರ್ಥಿಕವಾಗಿ ಮುಂದುವರೆದಿದ್ದರೂ ಸಾಮಾಜಿಕವಾಗಿ ಹಿಂದುಳಿದಿದ್ದೇವೆ. ಇದರಿಂದಾಗಿ ವೃದ್ಧಾಶ್ರಮಗಳು ಹೆಚ್ಚಾಗುತ್ತಿವೆ ಎಂದರು. ಪ್ರೀತಿ, ಸಮಚಿತ್ತತೆ, ಏಕತೆ, ಎಚ್ಚರ ಹಾಗೂ ವಿವೇಕದಂತಹ ಗುಣಗಳನ್ನು ಹೊಂದಿದಾಗ ನಾಯಕತ್ವ ಬೆಳೆಸಿಕೊಳ್ಳಲು ಸಾಧ್ಯ ಎಂದವರು ತಿಳಿಸಿದರು. ಕ್ಲಾರಿಟಿ ಬ್ರಿಡ್ಜ್‌ನ ಸ್ಥಾಪಕಿ ಉಷಾ ಬಾಲಕೃಷ್ಣ ಮಾತನಾಡಿ, ತಂತ್ರಜ್ಞಾನ ವಲಯ ಬಹಳ ವೇಗವಾಗಿ ಬದಲಾಗುತ್ತಿದೆ. ತಂತ್ರಜ್ಞಾನ ವಲಯದ ಒಂದು ಹೆಜ್ಜೆ ಇಡೀ ಭವಿಷ್ಯವನ್ನು ಬದಲಿಸುತ್ತಿದೆ. ಬೃಹತ್ ಕಂಪನಿಗಳು ಒಂದು ತಪ್ಪು ಹೆಜ್ಜೆ ಇಟ್ಟು ಇಡೀ ಮಾರುಕಟ್ಟೆ ಕಳೆದುಕೊಂಡಿವೆ. ಈ ಹಿನ್ನೆಲೆಯಲ್ಲಿ ನಾಯಕತ್ವದ ಗುಣದಿಂದ ದೂರದೃಷ್ಟಿ ಹೊಂದುವುದು ಯಶಸ್ಸಿಗೆ ಅತ್ಯಗತ್ಯ ಎಂದರು.

ಜಿ.ಎಂ.ಐ.ಟಿ. ಪ್ರಾಂಶುಪಾಲ ಎಂ.ಬಿ. ಸಂಜಯ್ ಪಾಂಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಬಿ.ಎನ್. ವೀರಪ್ಪ, ಸಿ.ಎಸ್.ಇ. ಉಪನ್ಯಾಸಕರಾದ ಎಸ್.ಟಿ. ಮಾರುತಿ, ಬಿ.ಪಿ. ದೀಪು ಮತ್ತಿತರರು ಉಪಸ್ಥಿತರಿದ್ದರು. ಜಿ.ಜೆ. ಲಕ್ಷ್ಮಿ ಸಲೇರ್ ಪ್ರಾರ್ಥಿಸಿದರು. ಓ. ಸಿಂಚನ ಸ್ವಾಗತಿಸಿದರು. ಜಿ.ಬಿ. ರಕ್ಷಿತ ನಿರೂಪಿಸಿದರೆ, ಎಂ.ಓ. ಯಶಸ್ವಿನಿ ವಂದಿಸಿದರು.

# ಫೆ.22 ರಿಂದ ಲೋಕಿಕೆರೆಯಲ್ಲಿ ತ್ರಿಕೂಟಾಚಲ ಮಂದಿರ ಉದ್ಘಾಟನೆ

ದಾವಣಗೆರೆ, ಫೆ.18- ತ್ರಿಕೂಟಾಚಲ ಸೇವಾ ಟ್ರಸ್ಟ್ ವತಿಯಿಂದ ತಾಲ್ಲೂಕಿನ ಲೋಕಿಕೆರೆ ಬಳಿಯ ವಿಜಯಪುರದಲ್ಲಿ ತ್ರಿಕೂಟಾಚಲ ಮಂದಿರದ ಉದ್ಘಾಟನೆ ಹಾಗೂ ದೇವರುಗಳ ಪ್ರತಿಷ್ಠಾಪನಾ ಕಾರ್ಯವು ಇದೇ ದಿನಾಂಕ 22ರಿಂದ ಮಾರ್ಚ್ 1ರವರೆಗೆ ನಡೆಯಲಿದೆ ಎಂದು ಟ್ರಸ್ಟ್ ಸಂಸ್ಥಾಪಕ ಸೊಪ್ಪಿನ ತಿಪ್ಪಣ್ಣ ತಿಳಿಸಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರ, ಸುಮಾರು ಒಂದೂವರೆ ಎಕರೆ ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಈ ನೂತನ ದೇವಾಲಯದಲ್ಲಿ ತ್ರಿಕೂಟಾಚಲ ಮಂದಿರ, ಶ್ರೀ ಉಮಾ ಮಹೇಶ್ವರ ಸ್ವಾಮಿ, ಶ್ರೀ ವಿಜಯದುರ್ಗಾಪರಮೇಶ್ವರಿ, ಶ್ರೀ ಲಕ್ಷ್ಮೀವೆಂಕಟೇಶ್ವರ ಸ್ವಾಮಿ, ಶ್ರೀ ಮಹಾಗಣಪತಿ, ಶ್ರೀ ಆಂಜನೇಯ, ಶ್ರೀ ಸುಬ್ರಮಣ್ಯ ದೇವರುಗಳ ಪ್ರಾಣ ಪ್ರತಿಷ್ಠಾಪನೆ ನಡೆಯಲಿದೆ.

9 ದಿನಗಳ ಕಾಲ ಧಾರ್ಮಿಕ ವಿಧಿ ವಿಧಾನಗಳ ಮೂಲಕ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ನೇತೃತ್ವವನ್ನು ವೇದಮೂರ್ತಿ ರಾಜೇಶ ಭಟ್ಟರು ಹಾಗೂ ವಿಜಯ ಶ್ರೀಯಾಗ ಶಾಲಾ ಪುರೋಹಿತ ಶ್ರೀ ಸುಬ್ರಮಣ್ಯ ಸ್ವಾಮಿ ಅವರ ನೇತೃತ್ವದಲ್ಲಿ ಶಿವಪ್ರಸಾದ್ ಆನೇಕಲ್ಲು ಅವರ ಉಸ್ತುವಾರಿಯಲ್ಲಿ ನಡೆಯಲಿದೆ ಎಂದು ಹೇಳಿದರು.

ಮಾಹಿತಿಗಾಗಿ ಸೋಮಶೇಖರ್ (8310372678), ರವಿ ಎಸ್. (9900302061)ಗೆ ಸಂಪರ್ಕಿಸಬಹುದದಾಗಿದೆ. ಮಾರ್ಚ್ 1ರ ನಂತರ 48 ದಿನ ನಿರಂತರ ಮಂಡಲ ಪೂಜೆ ನಡೆಯಲಿದೆ ಎಂದವರು ಮಾಹಿತಿ ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಓಂಕಾರಪ್ಪ, ಶಿವಮೂರ್ತಿ, ಜೀನದತ್ತ ಉಪಸ್ಥಿತರಿದ್ದರು.

# ಜನ ಸಾಮಾನ್ಯರು ಬದುಕು ಕಟ್ಟಿಕೊಳ್ಳುವ ಬಜೆಟ್



ಸಿಎಂ ಸಿದ್ಧರಾಮ್ಯನವರು ಮಂಡಿಸಿದ ಬಜೆಟ್ ಜನಸಾಮಾನ್ಯರು ಬದುಕು ಕಟ್ಟಿಕೊಳ್ಳುವ ಬಜೆಟ್ ಆಗಿದೆ. ಗ್ಯಾರಂಟಿ ಯೋಜನೆಗಳ ಮಧ್ಯೆಯೂ ರೈತಾಪಿ ವರ್ಗ ಎಸ್ಸಿ, ಎಸ್.ಟಿ., ಹಿಂದುಳಿದ ವರ್ಗಗಳಿಗೆ ಮತ್ತು ವ್ಯಾಪಾರಸ್ಥರಿಗೆ ಉದ್ಯಮಿಗಳಿಗೆ, ವಿದ್ಯಾರ್ಥಿಗಳಿಗೆ, ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಆಸರೆಯಾಗುವಂಥ ಬಜೆಟ್ ಇದಾಗಿದೆ.

ಚುನಾವಣೆಗೋಸ್ಕರ ಜನರನ್ನು ಮರಳು ಮಾಡುವ ಇತರೆ ಸರ್ಕಾರಗಳಂತೆ ಢೋಂಗಿ ಬಜೆಟ್ ಆಗದೇ ತುಳಿತಕ್ಕೊಳಗಾದ ಜನರ ನಾಡಿಮಿಡಿತ ಅರಿತ ಮತ್ತು ಎಲ್ಲಾ ಕ್ಷೇತ್ರದ ಅಭಿವೃದ್ಧಿ ಮಂತ್ರದಂತೆ ಸರ್ವರಿಗೂ ಸಮ ಬಾಳು ಸರ್ವರಿಗೂ ಸಮಪಾಲು ಎನ್ನುವ ಅರ್ಥಕ್ಕೆ ಮೆರಗು ತಂದ ಬಜೆಟ್ ಇದಾಗಿದೆ.

**- ರವೀಂದ್ರಗೌಡ ಎಫ್. ಪಾಟೀಲ,**
ರೈತ ಮುಖಂಡರು, ರಾಣೇಬೆನ್ನೂರು

# ಜಾರ್ಖಂಡ್ : ಜಾತಿಗಣತಿಗೆ ಆದೇಶ

**(1ನೇ ಪುಟದಿಂದ)** ಎಲ್ಲವೂ ಯೋಜನೆಯಂತೆ ನಡೆದರೆ ಲೋಕಸಭಾ ಚುನಾವಣೆಯ ನಂತರ ಜಾತಿ ಸಮೀಕ್ಷೆ ಆರಂಭವಾಗಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಯಾರ ಜನಸಂಖ್ಯೆ ಹೆಚ್ಚಾಗಿರುತ್ತದೋ, ಅವರಿಗೆ ಹೆಚ್ಚಿನ ಪಾಲು ಎಂದು ಮುಖ್ಯಮಂತ್ರಿ ಸೊರೇನ್ ಅವರು ಇತ್ತೀಚೆಗೆ ಟ್ವೀಟ್ ಮಾಡಿದ್ದರು.

# ಪರೀಕ್ಷೆ ಭಯ ಬೇಡ: ಆದರ್ಶ ಗೋಖಲೆ

ದಾವಣಗೆರೆ, ಫೆ. 18- ಪರೀಕ್ಷೆ ಎಂದರೆ ಭಯಪಡಬಾರದು. ಹಬ್ಬದಂತೆ ಸಂಭ್ರಮಾಚರಣೆ ಮಾಡಬೇಕು ಎಂದು ಉಪನ್ಯಾಸಕರು, ವಾಗ್ಮಿಗಳಾದ ಆದರ್ಶ ಗೋಖಲೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಗರದ ಸೋಮೇಶ್ವರ ವಿದ್ಯಾಲಯದಲ್ಲಿ 'ಮಕ್ಕಳಲ್ಲಿ ಪರೀಕ್ಷೆ ಭಯ ಹೋಗಲಾಡಿಸಲು ಹಾಗೂ ಭವಿಷ್ಯದಲ್ಲಿ ಎದುರಾಗುವ ಸವಾಲುಗಳು, ಜವಾಬ್ದಾರಿಗಳ ನಿರ್ವಹಣೆ' ಕುರಿತು ಮಾತನಾಡಿದರು.

10 ನೇ ತರಗತಿ ವಿದ್ಯಾರ್ಥಿಗಳಿಗೆ ಆತ್ಮಸ್ಥೈರ್ಯ ಹಾಗೂ ಸಲಹೆ ನೀಡುವ ಉದ್ದೇಶದಿಂದ ಈ ಉಪನ್ಯಾಸ ಏರ್ಪಡಿಸಲಾಗಿದ್ದು, ವಿದ್ಯಾರ್ಥಿಗಳು ಸಂಭ್ರಮದಿಂದ ಪರೀಕ್ಷೆ ಬರೆಯಬೇಕು. ದಿನವೊಂದಕ್ಕೆ 6 ವಿಷಯಗಳಿಂದ 6 ಪ್ರಶ್ನೆಗಳನ್ನು 12 ಬಾರಿ ನಿರಂತರ ಅಧ್ಯಯನ ಮಾಡಬೇಕು. ಕ್ರಮಬದ್ಧ ವ್ಯಾಯಾಮ ಹಾಗೂ ಯೋಗದಿಂದ ಏಕಾಗ್ರತೆಯನ್ನು ರೂಢಿಸಿಕೊಳ್ಳಿ, ಕೀಳರಿಮೆಯನ್ನು ತೊರೆದು ಸ್ವ ನಂಬಿಕೆ ಬೆಳೆಸಿಕೊಳ್ಳುವಂತೆ ಸಲಹೆ ನೀಡಿದರು.

ತನ್ಮೂಲಕ ಪೋಷಕರ, ಶಿಕ್ಷಕರ, ದೇಶದ ಋಣ ಸಂದಾಯಕ್ಕೆ ಸನ್ನದ್ಧರಾಬೇಕು. ಪರೀಕ್ಷೆ ನಂತರವೂ ಭಾರತದ ಸನಾತನ ಧರ್ಮ, ಸಂಸ್ಕೃತಿ, ಪರಂಪರೆಯನ್ನು ಅಧ್ಯಯನ ಮಾಡಿ ಅವುಗಳನ್ನು ಮುನ್ನಡೆಸಿಕೊಂಡು ಹೋಗುವ ಸತ್ಪ್ರಜೆಗಳಾಗಿ ಎಂದು ವಿದ್ಯಾರ್ಥಿಗಳಿಗೆ ಹಿತ ನುಡಿದರು.

ಈ ವೇಳೆ ಪ್ರಾಚಾರ್ಯರಾದ ಪ್ರಭಾವತಿ, ಆಡಳಿತಾಧಿಕಾರಿ ಹರೀಶ್ ಬಾಬು, ಮುಖ್ಯೋಪಾಧ್ಯಾಯರಾದ ಗಾಯತ್ರಿ, ಪ್ರಕಾಶ್, ಶಾಲಾ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



# ಮನಸ್ಸಿನಲ್ಲಿ ವಿಶಾಲತೆ ಇದ್ದರೆ ಮಾತ್ರ ಸೌಹಾರ್ದತೆಯ ಬದುಕು ಸಾಧ್ಯ

## ಸಂಕ್ಲೀಪುರ : ಸಂಸ್ಮರಣೋತ್ಸವ, ಶಿವದೀಕ್ಷೆ ಕಾರ್ಯಕ್ರಮದಲ್ಲಿ ಆವರಗೊಳ್ಳ ಶ್ರೀಗಳ ಅಭಿಮತ



ಮಲೇಬೆನ್ನೂರು, ಫೆ. 18 - ಮನುಷ್ಯನ ಬದುಕನ್ನು ನಂದನವನವನ್ನಾಗಿ ಮಾಡುವ ನಿಟ್ಟಿನಲ್ಲಿ ಮಠ-ಮಾನ್ಯಗಳು ಶ್ರಮಿಸುತ್ತಿವೆ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸಂಕ್ಲೀಪುರ ಗ್ರಾಮದ ಪುರವರ್ಗ ಮಠದ ಲಿಂಗೈಕ್ಯ ಶ್ರೀ ದೊಡ್ಡ ವೀರೇಶ್ವರ ಶಿವಾಚಾರ್ಯ ಸ್ವಾಮೀಜಿ ಪುಣ್ಯ ಸಂಸ್ಮರಣೋತ್ಸವ ಮತ್ತು ಶಿವದೀಕ್ಷೆ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಮಠ-ದೇವಸ್ಥಾನಗಳು ಅವಿಭಕ್ತ ಕುಟುಂಬಗಳನ್ನು ಉಳಿಸಲು ಪ್ರೇರೇಪಿಸುತ್ತವೆ. ಆದರೆ ಮನುಷ್ಯ ತನ್ನ ಸ್ವಾರ್ಥ ಗುಣಗಳಿಂದಾಗಿ ಹೃದಯದಲ್ಲಿ ವೈಶಾಲ್ಯತೆಯನ್ನು ಕಳೆದುಕೊಂಡು ಸ್ವಾರ್ಥಿಯಾಗಿ ಬದುಕುತ್ತಿದ್ದಾನೆಂದು ಬೇಸರ ವ್ಯಕ್ತಪಡಿಸಿದರು.

ಸ್ವಾರ್ಥತನದಿಂದಾಗಿ ಇತ್ತೀಚೆಗೆ ಅವಿಭಕ್ತ ಕುಟುಂಬಗಳು ಕಣ್ಮರೆಯಾಗುತ್ತಿವೆ ಎಂದ ಶ್ರೀಗಳು, ಮನಸ್ಸಿನಲ್ಲಿ ವಿಶಾಲತೆ ಇದ್ದರೆ ಮಾತ್ರ ಸೌಹಾರ್ದತೆಯ ಬದುಕು ಸಾಧ್ಯ ಎಂದು ಜನರನ್ನು ಎಚ್ಚರಿಸಿದರು.

ಮೌಲ್ಯ-ಶಕ್ತಿ ಇದ್ದ ಕಾಲದಲ್ಲಿ ಜನರಲ್ಲಿ ಶಕ್ತಿ-ಭಕ್ತಿ ಇತ್ತು. ಈಗ ಆಧುನೀಕರಣದ ನೆಪದಲ್ಲಿ ಶಕ್ತಿ-ಭಕ್ತಿ-ಮೌಲ್ಯ-ಪ್ರೀತಿಯನ್ನು ಕಳೆದುಕೊಳ್ಳುತ್ತಿದ್ದಾರೆ.

ಮೊಬೈಲ್ ಬಂದ ಮೇಲೆ ಸಂಬಂಧಿಕರ, ಗೆಳೆಯರ ಭೇಟಿ ಕಡಿಮೆಯಾಗಿ, ಕುಳಿತು ಕಷ್ಟ-ಸುಖ ಮಾತನಾಡುವುದನ್ನು ನಾವು ಕಾಣುತ್ತಿಲ್ಲ ಎಂದ ಶ್ರೀಗಳು, ಇಲ್ಲಿನ ಲಿಂಗೈಕ್ಯ ಶ್ರೀಗಳು ಭಕ್ತರ ಹೃದಯದಲ್ಲಿ ನೆಲೆಸಿರುವ ಕಾರಣ, ಇಲ್ಲಿ ಇಷ್ಟೊಂದು ಜನ ಸೇರಿ ಅವರನ್ನು ಸ್ಮರಿಸುವ ಕೆಲಸ ಮಾಡುತ್ತಿದ್ದೀರಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಾಮಘಟ್ಟದ ಉಚ್ಚಂಗಿದುರ್ಗ ಕಟ್ಟಿಮನಿ ರಾಜ ಗುರುಗಳಾದ ಶ್ರೀ ರೇವಣಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಭಕ್ತರ ಭಕ್ತಿಯ ಮುಂದೆ ಎಲ್ಲವೂ ಶೂನ್ಯ ಎಂಬುದಕ್ಕೆ ಈ ಕಾರ್ಯಕ್ರಮ ಸಾಕ್ಷಿಯಾಗಿದೆ ಎಂದರು.

# ಓದುಗರಿದ್ದಾರೆ ಆದರೆ ಸ್ವರೂಪ ಬದಲಾಗಿದೆ

## 'ಒಬ್ರು ಸುದ್ದ್ಯಾಕೆ ಒಬ್ರು ಗದ್ಲ್ಯಾಕೆ' ಬಿಡುಗಡೆ ಕಾರ್ಯಕ್ರಮದಲ್ಲಿ ಸಾಹಿತಿ ಜಿ.ಪಿ. ಬಸವರಾಜು



ದಾವಣಗೆರೆ, ಫೆ. 18 - ಓದುಗರಿಲ್ಲ ಎಂದು ಲೇಖಕರು ಕೊರಗುತ್ತಾರೆ. ಓದುಗರಿದ್ದಾರೆ, ಆದರೆ ಓದುಗರ ಸ್ವರೂಪ ಬದಲಾಗಿದೆ ಎಂದು ಸಾಹಿತಿ ಜಿ.ಪಿ. ಬಸವರಾಜು ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ನಿನ್ನೆ ಕತೆಗಾರ್ತಿ ಬಿ.ಟಿ. ಜಾಹ್ನವಿ ಅವರ ಸಮಗ್ರ ಕಥಾ ಸಂಕಲನ 'ಒಬ್ರು ಸುದ್ದ್ಯಾಕೆ ಒಬ್ರು ಗದ್ಲ್ಯಾಕೆ' ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಪ್ರಕಾಶನಗಳಲ್ಲಿ ಪುಸ್ತಕಗಳನ್ನು ಕೊಂಡು ಓದುವವರ ಸಂಖ್ಯೆ ಕಡಿಮೆಯಾಗಿರಬಹುದು. ಆದರೆ ಪ್ರಸ್ತುತ ದಿನಗಳಲ್ಲಿ ಡಿಜಿಟಲ್ ಮಾಧ್ಯಮದಲ್ಲಿ ಓದುವ ಓದುಗರೂ ಇದ್ದಾರೆ ಎಂದರು.

ಇಂದಿಗೂ ಕುವೆಂಪು, ತೇಜಸ್ವಿ, ಅನಂತ ಮೂರ್ತಿ, ಲಂಕೇಶ್ ಅವರ ಪುಸ್ತಕಗಳನ್ನು ಜನರು ಓದುತ್ತಿದ್ದಾರೆ. ಹಾಗೆಂದ ಮಾತ್ರಕ್ಕೆ ಅವರೆಲ್ಲಾ ಹಳೆಯ ತಲೆಮಾರಿನವರು ಎಂದಲ್ಲ, ಇಂದಿನ ಪೀಳಿಗೆಯವರೂ ಹೌದು. ಆದ್ದರಿಂದ ಓದುಗರಿಲ್ಲ ಎಂದು ಭಾವಿಸಬಾರದು ಎಂದು ತಿಳಿಸಿದರು.

ಇಂದು ಬರೆಯುವವರ ಸಂಖ್ಯೆ ಹೆಚ್ಚಾಗಿದೆ. ದಮನಿತರು, ಶೋಷಿತರು, ಅಲಕ್ಷಿತ ಸಮುದಾಯಗಳೆಲ್ಲವೂ ಅಕ್ಷರಸ್ಥರಾಗು ತ್ತಿರುವುದರಿಂದ ಎಲ್ಲರೂ ಬರೆಯಲಾರಂಭಿಸಿದ್ದಾರೆ. ಇಂತಹ ಮುಖ್ಯವಾಹಿನಿಗೆ ಬಾರದ ಸಮುದಾಯಗಳು ಬರೆಯುತ್ತಿದ್ದರೆ ನಮ್ಮ ಗ್ರಹಿಕೆಯೂ ಬದಲಾಗುತ್ತದೆ. ಭಾಷೆಯ ಚೆಲುವೂ ಹೆಚ್ಚುತ್ತದೆ ಎಂದು ಹೇಳಿದರು.

ಸಣ್ಣ ಸಣ್ಣ ಸಮುದಾಯಗಳಿಗೆ ಅವರದ್ದೇ ಆದ ಸಾಂಸ್ಕೃತಿಕ ಸಾವಿರಾರು ವರ್ಷಗಳ ಆಯುಷ್ಯ, ಪರಂಪರೆ, ಮೌಲ್ಯ, ಜೀವನಾನುಭವ ಇರುತ್ತದೆ. ಅದರ ಬಗ್ಗೆ ಅವರೆಲ್ಲಾ ಬರೆಯುವ ಅಗತ್ಯವಿದೆ. ಅಂತಹ ಬರಹಗಳನ್ನು ಸ್ವಾಗತಿಸಬೇಕಿದೆ ಎಂದರು.

ಲೇಖಕಿ ಬಿ.ಟಿ. ಜಾಹ್ನವಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, 1996ರಲ್ಲಿ ಮೊದಲ ಕಥಾ ಸಂಕಲನ ಪ್ರಕಟವಾಗಿತ್ತು. ಅಂದಿನಿಂದಲೂ ಕೃತಿ ಬಿಡುಗಡೆ ಸಂಬಂಧ ಸಾಕಷ್ಟು ಅಡೆ-ತಡೆಗಳು ಉಂಟಾಗಿದ್ದವು. ಒಂದು ಹಂತದಲ್ಲಿ ಪ್ರಕಾಶಕರ ವಿರುದ್ಧ ನ್ಯಾಯಾಲಯಕ್ಕೂ ಹೋಗಿ, ನಂತರ ಕೇಸು ವಾಪಾಸ್ ಪಡೆದೆ. ಈ ವೇಳೆ ಬರವಣಿಗೆ ಮೇಲೆ ಜಿಗುಪ್ಸೆ ಉಂಟಾಗಿತ್ತು.

ಓದು ಹಾಗೂ ಬರವಣಿಗೆಯಿಂದ ದೂರವಾಗಬೇಕು ಎಂದುಕೊಂಡಾಗಲೇ ಪ್ರಶಸ್ತಿಗಳು ನನ್ನನ್ನು ಹುಡುಕಿಕೊಂಡು ಬಂದವು. ನನ್ನ ಕಥೆಗಳಿಗೆ ಮನ್ನಣೆ ದೊರೆಯಿತು. ಸ್ನೇಹಿತರು, ಹಿತೈಷಿಗಳ ಒತ್ತಾಸೆ, ಸಹಕಾರದಿಂದ ಇದೀಗ ಸಮಗ್ರ ಕಥಾ ಸಂಕಲನ ಬಿಡುಗಡೆಯಾಗುತ್ತಿರುವುದು ಖುಷಿ ತಂದಿದೆ ಎಂದರು.

ಇದೇ ಸಂದರ್ಭದಲ್ಲಿ ಕೆ.ವಿ. ಅಕ್ಷರ ಹೆಗ್ಗೋಡು ಮಾರ್ಗದರ್ಶನದಲ್ಲಿ ವಿದ್ಯಾ ಅಕ್ಷರ ಹಾಗೂ ವಾಣಿ ಸತೀಶ್ 'ದೂಪ್ದಳ್ಳಿ ಸೆಕ್ಸಿ ದುರುಗ' ರಂಗ ಪ್ರಸ್ತುತಿ ಪಡಿಸಿದರು.

ಮಾನವ ಬಂಧುತ್ವ ವೇದಿಕೆ ಸಂಚಾಲಕ ಪ್ರೊ.ಎ.ಬಿ. ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಲೇಖಕ ಡಾ.ರವಿಕುಮಾರ ನೀಹ ಪುಸ್ತಕ ಕುರಿತು ಮಾತನಾಡಿದರು. ಸಾಹಿತಿ ಸೌಮ್ಯ ಕೋಡೂರು, ಕೌದಿ ಪ್ರಕಾಶನದ ಡಾ.ಮಮತ ಉಪಸ್ಥಿತರಿದ್ದರು. ಪುನೀತ್ ಅರಸ್ ಸ್ವಾಗತಿಸಿದರು. ಡಾ.ಮುರುಗೇಶ್ ಬಾಬು ಪ್ರಾರ್ಥಿಸಿದರು.

### ದಾವಣಗೆರೆ ರಾಜಧಾನಿಯಾಗಬೇಕಿತ್ತು

ದಾವಣಗೆರೆಗೆ ಕರ್ನಾಟಕದ ರಾಜಧಾನಿಯಾಗುವ ಅರ್ಹತೆ ಇದೆ. ಬೇರೆ ಯಾವ ಭಾಷೆಯ ಪ್ರಭಾವಕ್ಕೂ ಒಳಗಾಗದೆ ಅಚ್ಚ ಕನ್ನಡ ಮಾತನಾಡುವವರೇ ಇಲ್ಲಿ ಹೆಚ್ಚಾಗಿದ್ದಾರೆ ಎಂದು ಸಾಹಿತಿ ಜಿ.ಪಿ. ಬಸವರಾಜು ಅಭಿಪ್ರಾಯಿಸಿದರು.

ದಾವಣಗೆರೆಯನ್ನು ರಾಜ್ಯದ ರಾಜಧಾನಿಯನ್ನಾಗಿ ಮಾಡಲು ರಾಜಕೀಯ ಒತ್ತಡ ತರುವಲ್ಲಿ ರಾಜಕೀಯ ಇಚ್ಛಾ ಶಕ್ತಿಯ ಕೊರತೆ ಇದೆ ಎಂಬುದು ನನ್ನ ಭಾವನೆ ಎಂದ ಅವರು, ಈಗಲಾದರೂ ಎಚ್ಚೆತ್ತುಕೊಂಡರೆ ರಾಜಧಾನಿಯಾಗುವ ಸಾಧ್ಯತೆ ಇದೆ ಎಂದರು.

# ಮುತ್ತಿಗಿ ಗ್ರಾಮದಲ್ಲಿ ಇಂದು ಹಾಲಸ್ವಾಮಿ ಜಾತ್ರಾ ಮಹೋತ್ಸವ

ಹರಪನಹಳ್ಳಿ ತಾಲ್ಲೂಕಿನ ಮುತ್ತಿಗಿ ಗ್ರಾಮದಲ್ಲಿ ಶ್ರೀ ಗುರು ಹಾಲಸ್ವಾಮಿ ಜಾತ್ರಾ ಮಹೋತ್ಸವವು ಇಂದು ಮತ್ತು ನಾಳೆ ಜರುಗಲಿದೆ.

ಇಂದು ರಾತ್ರಿ 10.30.ಕ್ಕೆ ಶ್ರೀ ಸದ್ಗುರು ಶಿವಯೋಗಿ ಅಜ್ಜಯ್ಯ ಹಾಲಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಮುಳ್ಳುಗದ್ದಿಗೆ ಕಾರ್ಯಕ್ರಮ ಜರುಗಲಿದೆ.

ನಾಳೆ ಮಂಗಳವಾರ ಬೆಳಿಗ್ಗೆ 4 ಗಂಟೆಗೆ ರುದ್ರಾಭಿಷೇಕ ಜಂಗಮ ವಟುಗಳಿಗೆ ಶಿವದೀಕ್ಷೆ ಕಾರ್ಯಕ್ರಮ. ಬೆಳಿಗ್ಗೆ 11.30.ಕ್ಕೆ ಸಾಮೂಹಿಕ ವಿವಾಹಗಳು ಹಾಗೂ ಶ್ರೀ ಗುರು ಹಾಲಸ್ವಾಮಿಯ ಮಹಾ ರಥೋತ್ಸವ ಮತ್ತು ಧರ್ಮಸಭೆ ಜರುಗಲಿದೆ.

ರಾಮಘಟ್ಟದ ಪುರವರ್ಗ ಮಠದ ಷ. ಬ್ರ. ರೇವಣಸಿದ್ದ ಶಿವಾಚಾರ್ಯ ಸ್ವಾಮೀಜಿ, ಆವರಗೊಳ್ಳದ ಪುರವರ್ಗ ಹಿರೇಮಠದ ಷ. ಬ್ರ. ಓಂಕಾರ ಶಿವಾಚಾರ್ಯ ಸ್ವಾಮೀಜಿ, ನಂದಿಪುರದ ಡಾ. ಮಹೇಶ್ವರ ಸ್ವಾಮೀಜಿ, ಬೆಣ್ಣಿಹಳ್ಳಿ ಹಿರೇಮಠದ ಶ್ರೀ ಪಂಚಾಕ್ಷರ ಶಿವಾಚಾರ್ಯ ಸ್ವಾಮೀಜಿ, ಕೊಟ್ಟೂರು ಚಾನುಕೋಟಿಮಠದ ಡಾ. ಸಿದ್ದಲಿಂಗ ಶಿವಾಚಾರ್ಯ ಅವರು ಧರ್ಮ ಸಭೆಯ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

ಮುಸ್ಟೂರು ಓಂಕಾರೇಶ್ವರ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ. ಹರಪನಹಳ್ಳಿ ತೆಗ್ಗಿನ ಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಭಾಗವಹಿಸಲಿದ್ದಾರೆ. ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

# ಲೇಬರ್ ಕಾಲೋನಿಯಲ್ಲಿ ಇಂದು ಶ್ರೀ ಕರಿಬಸವೇಶ್ವರ ಸ್ವಾಮಿ ದೇವಸ್ಥಾನ ಉದ್ಘಾಟನೆ

ಲೇಬರ್ ಕಾಲೋನಿ, ಕೆಎಸ್ಆರ್ಟಿಸಿ ಬಸ್ ಸ್ಟ್ಯಾಂಡ್ ರಸ್ತೆ, 6ನೇ ಕ್ರಾಸ್‌ನಲ್ಲಿ ನಿರ್ಮಿಸಲಾಗಿರುವ ಶ್ರೀಗುರು ಕರಿಬಸವೇಶ್ವರ ಸ್ವಾಮಿ ನವ ದೇವಸ್ಥಾನದ ಉದ್ಘಾಟನೆ ಮತ್ತು ವಿಗ್ರಹದ ಮರು ಪ್ರತಿಷ್ಠಾಪನೆ ಪೂಜಾ ಕಾರ್ಯಕ್ರಮವನ್ನು ಇಂದು ಹಮ್ಮಿಕೊಳ್ಳಲಾಗಿದೆ. ಲಿಂಗದಹಳ್ಳಿ ಹಿರೇಮಠದ ಶ್ರೀ ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ದೇವಸ್ಥಾನವನ್ನು 1965ರಲ್ಲಿ ಸ್ಥಾಪಿಸಿ ಸೇವಾ ಕಾರ್ಯವನ್ನು ನಾಗಪ್ಪಜ್ಜ ಪಾಳ್ಯ ಇವರ ಪುತ್ರ ಪಿ.ಎನ್.ಲೋಕೇಶಪ್ಪ, ಶ್ರೀಮತಿ ನಾಗಮ್ಮ ಮತ್ತು ಬಂಧುಗಳು ನೆರವೇರಿಸಿಕೊಂಡು ಬರುತ್ತಿದ್ದಾರೆ.

ಈ ಕಾರ್ಯಕ್ರಮಕ್ಕೆ ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್.ಮಲ್ಲಿಕಾರ್ಜುನ್, ಸಂಸದ ಜಿ.ಎಂ.ಸಿದ್ದೇಶ್ವರ, ಸಿವಿಲ್ ಎಂಜಿನಿಯರ್ ಎಸ್.ರಾಜು ಸಾರಥಿ, ಮಹಾನಗರ ಪಾಲಿಕೆ ಸದಸ್ಯ ಜೆ. ಎನ್.ಶ್ರೀನಿವಾಸ್, ಕಾಂಗ್ರೆಸ್ ಮುಖಂಡ ಹುಲ್ಲುಮನಿ ಗಣೇಶ್ ಮತ್ತಿತರರು ಆಗಮಿಸಲಿದ್ದಾರೆ.

# ಅಂಬಿಗರ ಚೌಡಯ್ಯ, ಮಡಿವಾಳ ಮಾಚಿದೇವರ ಜಯಂತಿ



ದಾವಣಗೆರೆ, ಫೆ. 18 - ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದಾವಣಗೆರೆ ತಾಲ್ಲೂಕು ಘಟಕ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜು ಅರಸಾಪುರ ಇವರುಗಳ ಸಂಯುಕ್ತಾ ಶ್ರಯದಲ್ಲಿ ನಡೆದ ಶರಣರಾದ ಅಂಬಿಗರ ಚೌಡಯ್ಯ ಮತ್ತು ಮಡಿವಾಳ ಮಾಚಿದೇವ ಜಯಂತಿಯನ್ನು ಕಾಲೇಜಿನ ಪ್ರಾಚಾರ್ಯ ಕೆ.ಎಚ್. ಮಂಜುನಾಥ ರೆಡ್ಡಿ ಅವರು ಉದ್ಘಾಟಿಸಿ ಮಾತನಾಡಿದರು.

ಶರಣರ ವಿಚಾರಗಳನ್ನು ವಿದ್ಯಾರ್ಥಿ ಗಳು ಜೀವನದಲ್ಲಿ ಅಳವಡಿಸಿಕೊಳ್ಳ ಬೇಕು ಎಂದು ಹೇಳಿದರು. ದತ್ತಿ ಉಪನ್ಯಾಸದ ಅನುಭಾವ ನುಡಿಯ ಅಡಿಯಲ್ಲಿ ವಿಶ್ರಾಂತ ಶಿಕ್ಷಣಾಧಿಕಾರಿಗಳಾದ ಭರಮಪ್ಪ ಮೈಸೂರ್ ಅವರು 'ವಚನ ಸಾಹಿತ್ಯದಲ್ಲಿ ವೈಚಾರಿಕತೆ' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು.

ಆಧುನಿಕ ಯುಗದಲ್ಲಿ ಯುವ ಸಮುದಾಯ ಎದುರಿಸುತ್ತಿರುವ ಮನೋಭಾವಗಳಿಗೆ ವಚನ ಸಾಹಿತ್ಯದ ಅರಿವು ಸಂಜೀವಿನಿಯಾಗಬಲ್ಲದು, ಜಾತಿ ಮತ್ತು ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಕೆಲ ಬೆಳವಣಿಗೆಗಳು ಯುವ ಜನರನ್ನು ವೈದಿಕತೆಯ ವಿಷದ ಕುಣಿಕೆಗೆ ಆಹಾರವಾಗಿ ಪರಿಣಮಿಸಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ, ತಾಲ್ಲೂಕು ಶರಣ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಎಸ್.ಬಿ. ರುದ್ರಗೌಡ ಪ್ರಸ್ತುತ ದೇಶದಲ್ಲಿ ನಡೆಯುತ್ತಿರುವ ಜಾತಿ ಕಲಹಗಳಿಗೆ ವಚನ ಸಾಹಿತ್ಯದಲ್ಲಿ ಮದ್ದಿದೆ ಎಂದರು. ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ವಚನಗಳನ್ನು ಅಳವಡಿಸಿಕೊಳ್ಳುವ ಮೂಲಕ ಈ ದೇಶದ ಸತ್ಪ್ರಜೆಗಳಾಗಬೇಕೆಂದರು.

ಈ ಸಂದರ್ಭದಲ್ಲಿ ದತ್ತಿ ದಾನಿಗಳಾದ ಕಲ್ಲಿಹಾಳ್ ಶಿವಲಿಂಗಮ್ಮ , ಶಾನಭೋಗ ಹಾಲಯ್ಯ ಹಾಗೂ ದತ್ತಿ ನೀಡಿದ ನಿರಂಜನ ಇವರುಗಳನ್ನು ಸ್ಮರಿಸಲಾಯಿತು. ಜಿಲ್ಲಾ ಕದಳಿ ವೇದಿಕೆಯ ಅಧ್ಯಕ್ಷರಾದ ಗಾಯತ್ರಿ ವಸ್ತದ್, ನಗರ ಘಟಕದ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿರಿಗೆರೆ ಪರಮೇಶ್ವರಪ್ಪ ಉಪಸ್ಥಿತರಿದ್ದರು.

ಶಿಕ್ಷಕಿ ಪಾಟೀಲ್ ವನಜಾಕ್ಷಿ ವಚನ ಪ್ರಾರ್ಥನೆ ಮಾಡಿದರು. ಉಪನ್ಯಾಸಕರಾದ ಜ್ಞಾನೇಶ್ವರಿ ಸ್ವಾಗತಿಸಿದರು. ಶಿಕ್ಷಕ ಎಂ. ನಾಗರಾಜ್ ಕಾರ್ಯಕ್ರಮ ನಿರ್ವಹಿಸಿ, ವಂದಿಸಿದರು. ಕಾರ್ಯಕ್ರಮದಲ್ಲಿ ಕ.ಸಾ.ಪ. ಪದಾಧಿಕಾರಿಗಳಾದ ಆರ್.ಸಿದ್ದೇಶಪ್ಪ, ಬಿ.ಟಿ. ಪ್ರಕಾಶ್, ಬಿ.ಎಂ. ವಿಶ್ವೇಶ್ವರಯ್ಯ, ಕಲಿವೀರ ಕಳ್ಳಿಮನಿ, ಕೆ.ಸಿ.ನಾಗರಾಜ್, ಪ್ರಕಾಶ್ ಕಡ್ಲೆಬಾಳು ಮತ್ತಿತರರು ಉಪಸ್ಥಿತರಿದ್ದರು.

ಜನತಾವಾಣಿ

ಸೋಮವಾರ, ಫೆಬ್ರವರಿ 19, 2024

## ಲಿಟ್ಲ್ ಚಾಂಪ್ಸ್ ಶಾಲೆಯಲ್ಲಿ ಕಲಾ ಮತ್ತು ವಿಜ್ಞಾನ ವಸ್ತು ಪ್ರದರ್ಶನ : ವಿಜೇತ ಮಕ್ಕಳಿಗೆ ಪ್ರಶಸ್ತಿ ವಿತರಣೆ



ದಾವಣಗೆರೆ, ಫೆ. 18 - ಇಲ್ಲಿನ ಡಿಸಿಎಂ ಟೌನ್‌ಶಿಪ್‌ನಲ್ಲಿ ರುವ ಲಿಟ್ಲ್ ಚಾಂಪ್ಸ್ ಶಾಲೆಯಲ್ಲಿ ಏರ್ಪಡಿಸಿದ್ದ ಮಕ್ಕಳ ಕಲಾ ಮತ್ತು ವಿಜ್ಞಾನ ವಸ್ತು ಪ್ರದರ್ಶನದ ವಿಜೇತ ಮಕ್ಕಳಿಗೆ ಪ್ರಶಸ್ತಿ ವಿತರಿಸಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ವಿಜಯ ಕುಮಾರ್, ಕಿರಣ್‌ಕುಮಾರ್, ನಿರ್ದೇಶಕರುಗಳಾದ ಶ್ರೀಮತಿ ಸಹನ ವಿಜಯಕುಮಾರ್, ಮುಖ್ಯೋ ಪಾಧ್ಯಾಯರಾದ ಉದಯಕುಮಾರ್, ಬೋಧಕರಾದ ಲೀನಾ ಶಾಮರಾಜ್, ಹೇಮಾವತಿ, ಶಾರದಾ ಕಣ್ಣಾಳ್, ಶಶಿಕಲಾ, ಸೌಮ್ಯ, ಆರೋಗ್ಯ ಮೇರಿ ಸುಧಾ, ರಮಾ, ಶಿಲ್ಪಾ ಕಂಠಿ, ಶ್ವೇತಾ, ಅಶ್ವಿನಿ, ಶ್ರೀಮತಿ ಸ್ನೇಹ ಕಿರಣ್‌ಕುಮಾರ್, ನಾಗವೇಣಿ, ವಿಜಯಲಕ್ಷ್ಮಿ, ಕಾವ್ಯ, ಶೋಭಾ ಹುಲ್ಮನಿ, ಆಶಾ,ಗಂಗಾ, ಲಾವಣ್ಯ, ಭಾಗ್ಯಲಕ್ಷ್ಮಿ, ಆಕಾಶ್, ಅನುರಾಜ್, ಮಹೇಶ್, ಶೋಭಾ, ವೀಣಾ, ಆರ್. ವೀಣಾ, ಸಿಬ್ಬಂದಿ ವರ್ಗದವರು, ಶಾಲಾ ಪೋಷಕರು ಉಪಸ್ಥಿತರಿದ್ದರು.

## ಹರಿಹರದಲ್ಲಿ ಹಿರಿಯ ಪತ್ರಕರ್ತರಿಗೆ ಸನ್ಮಾನ



ಹರಿಹರ, ಫೆ. 18 - ನಗರದಲ್ಲಿ ಹಲವಾರು ದಶಕ ಗಳಿಂದ ಪತ್ರಿಕಾ ರಂಗದಲ್ಲಿ ಗಣನೀಯ ಸೇವೆ ಸಲ್ಲಿಸಿದ 60 ವರ್ಷ ಮೇಲ್ಪಟ್ಟ ಹಿರಿಯ ಪತ್ರಕರ್ತರಾದ ಜಿ. ಕೆ. ಶಂಕ್ರಪ್ಪ, ಬಿ. ಎಂ. ಚಂದ್ರಶೇಖರ್, ಸುಬ್ರಹ್ಮಣ್ಯ ನಾಡಿಗೇರ, ಹೆಚ್. ಕೆ. ಕೊಟ್ರಪ್ಪ, ಇಬುಜರ್ ರೆಹಮಾನ್, ಜಿ. ನಂಜಪ್ಪ, ಎಂ. ಕೆ ರಾಮಶೆಟ್ಟಿ, ಬಿ. ಮುಗ್ದಂ ಸೇರಿದಂತೆ ಹಲವರನ್ನು ದಾವಣಗೆರೆ ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪ ಸಭಾಂಗಣದಲ್ಲಿ ನಡೆದ 38ನೇ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನದಲ್ಲಿ ಸನ್ಮಾನಿಸಲಾಯಿತು.

ಪ್ರಶಸ್ತಿ ಪಡೆದ ಹಿರಿಯ ಪತ್ರಕರ್ತರಿಗೆ ಹರಿಹರ ನಗರದ ಪತ್ರಕರ್ತರಾದ ಶಾಂಭವಿ, ಡಿ.ಜಿ. ನಾಗರಾಜ್, ಎಂ. ಚಿದಾನಂದ್ ಕಂಚಿಕೇರಿ, ಶೇಖರಗೌಡ, ಹೆಚ್.ಸಿ. ಕೀರ್ತಿಕುಮಾರ್, ಜಿಗಳಿ ಪ್ರಕಾಶ್, ಸದಾನಂದ, ದೇವರಾಜ್, ಪೂಜಾರ್ ಮಂಜುನಾಥ್, ಚಂದ್ರಶೇಖರ್, ಜಿ. ಮಂಜುನಾಥ್, ಇರ್ಫಾನ್, ಕೃಷ್ಣ ಪಿ. ರಾಜೊಳ್ಳಿ, ಸುಧಾಕರ, ಜಿ. ಎಸ್. ಕುಮಾರ, ರಾಜನಹಳ್ಳಿ ಮಂಜುನಾಥ್, ವಿಶ್ವನಾಥ, ಸುರೇಶ್ ಕುಣೆಬೆಳಕೆರೆ, ಸೋಮಶೇಖರ್ ಸೇರಿದಂತೆ ಇತರರು ಅಭಿನಂದನೆ ತಿಳಿಸಿದ್ದಾರೆ.

## ಟೆಸ್ಟ್‌ನಲ್ಲಿ ಭಾರತಕ್ಕೆ 434 ರನ್‌ಗಳ ದಾಖಲೆ ಗೆಲುವು

**(1ನೇ ಪುಟದಿಂದ)** ಐದು ಪಂದ್ಯಗಳ ಸರಣಿಯಲ್ಲಿ ಭಾರತ ಈಗ 2-1ರ ಮುನ್ನಡೆ ಹೊಂದಿದೆ. ರನ್‌ಗಳ ಲೆಕ್ಕದಲ್ಲಿ ಇದು ಭಾರತದ ಅತಿ ದೊಡ್ಡ ಗೆಲುವಾಗಿದೆ. ಈ ಹಿಂದೆ 2021ರಲ್ಲಿ ನ್ಯೂಜಿಲ್ಯಾಂಡ್ ವಿರುದ್ಧ ಭಾರತ 372 ರನ್‌ಗಳ ಗೆಲುವು ಸಾಧಿಸಿತ್ತು. ಜೈಸ್ವಾಲ್ ಅವರು 236 ಎಸೆತಗಳಲ್ಲಿ 214 ರನ್ ಗಳಿಸಿದ್ದರು. ಇದರಿಂದಾಗಿ ಭಾರತ ಎರಡನೇ ಇನ್ನಿಂಗ್ಸ್‌ನಲ್ಲಿ ನಾಲ್ಕು ವಿಕೆಟ್ ನಷ್ಟಕ್ಕೆ 430 ರನ್ ಗಳಿಸಿ ಇನ್ನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ನಂತರ ಜಡೇಜಾ 41 ರನ್‌ಗಳಿಗೆ ಐದು ವಿಕೆಟ್ ಗಳಿಸುವ ಮೂಲಕ ಇಂಗ್ಲೆಂಡ್ ಕುಸಿತಕ್ಕೆ ಕಾರಣವಾದರು.

## ಮಲೇಬೆನ್ನೂರಿನಲ್ಲಿ ಗ್ರಾಮ ಚಲೋ ಅಭಿಯಾನಕ್ಕೆ ಚಾಲನೆ



ಮಲೇಬೆನ್ನೂರು, ಫೆ. 18-ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷವನ್ನು ಬಲಪಡಿಸುವ ದೃಷ್ಟಿಯಿಂದ ಪ್ರತಿ ಗ್ರಾಮದಲ್ಲೂ ವಿಕಸಿತ ಭಾರತ ಗ್ರಾಮ ಚಲೋ ವಿಶೇಷ ಅಭಿಯಾನವನ್ನು ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರದ ಸಾಧನೆಗಳ ಕರ ಪತ್ರವನ್ನು ಶನಿವಾರ ಮಲೇಬೆನ್ನೂರಿನಲ್ಲಿ ಶಾಸಕ ಬಿ.ಪಿ. ಹರೀಶ್ ಅವರು ಮನೆ ಮನೆಗೆ ಹಂಚುವುದರ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಮಾಜಿ ಸದಸ್ಯ ಆದಾಪುರ ವೀರಭದ್ರಪ್ಪ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಹರಿಹರ ತಾ. ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಐರಣಿ ಅಣ್ಣಪ್ಪ, ತಾ.ಗ್ರಾ. ಬಿಜೆಪಿ ಪ್ರಧಾನ ಕಾರ್ಯದರ್ಶಿ ಆದಾಪುರ ವೀರೇಶ್, ಅಭಿಯಾನದ ಸಂಚಾಲಕರಾದ ಮಹೇಂದ್ರ ಹೆಬ್ಬಾಳ್, ಪುರಸಭೆ ಸದಸ್ಯರಾದ ಗೌಡ್ರ ಮಂಜುನಾಥ್, ಬೆಣ್ಣೆಹಳ್ಳಿ ಸಿದ್ದೇಶ್, ಬಿ. ಮಂಜುನಾಥ್, ಪಿ.ಆರ್. ರಾಜು, ಓ.ಜಿ. ಕುಮಾರ್, ಜಿಗಳೇರ ಹಾಲೇಶಪ್ಪ, ಎ.ಕೆ. ಲೋಕೇಶ್, ಭೋವಿ ಮಂಜಣ್ಣ, ಬಟ್ಟೆ ಅಂಗಡಿ ವಿಶ್ವ, ಕಜ್ಜರಿ ಹರೀಶ್, ಆನಂದಾಚಾರ್, ಹಾಲಿವಾಣದ ಮೋಹನ್, ಕೊಮಾರನಹಳ್ಳಿ ಸುನೀಲ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

# ವೃದ್ಧಾಪ್ಯದ ಹೆದರಿಕೆ ಹೆಚ್ಚಿಸುತ್ತಿರುವ ಆಧುನಿಕ ಸಮಾಜ...

ಮನುಕುಲದ ಇತಿಹಾಸದಲ್ಲಿ ಮೊದಲ ಬಾರಿಗೆ ವೃದ್ಧಾಪ್ಯವನ್ನು ವಿಶೇಷ ಎಂದು ಪರಿಗಣಿಸದ ಸ್ಥಿತಿ ಬರುತ್ತಿದೆ. ಮೊದಲು ವೃದ್ಧಾಪ್ಯ ಎಂಬುದು ಅಪರೂಪದ ಸ್ಥಿತಿಯಾಗಿತ್ತು. ಐಷಾರಾಮಿ ವಿಷಯವಾಗಿತ್ತು. ವೃದ್ಧಾಪ್ಯ ತಲುಪುವವರು ಕೆಲವೇ ಸಂಖ್ಯೆಯಲ್ಲಿದ್ದರು.

ಆದರೆ, ಈಗ ಜಾಗತಿಕವಾಗಿ 65 ದಾಟುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆ. ಶೇ.79ರಷ್ಟು ಮಹಿಳೆಯರು ಹಾಗೂ ಶೇ.70ರಷ್ಟು ಪುರುಷರು 65ರ ಗಡಿ ದಾಟುತ್ತಿದ್ದಾರೆ.

ಇಷ್ಟು ದೀರ್ಘಕಾಲ ಬದುಕಿದರೂ ಸಹ, ಈಗಿನ ಪೀಳಿಗೆಯ ಹಲವರು ವೃದ್ಧಾಪ್ಯವನ್ನು ಅಹಿತಕರ ಹಾಗೂ ಹೆದರಿಕೆ ತರುವಂಥದ್ದು ಎಂದು ಭಾವಿಸುತ್ತಾರೆ.

ಆದರೆ, ವೃದ್ಧಾಪ್ಯ ಹೇಗಿರುತ್ತದೆ ಎಂಬುದು ತಿಳಿಯದೇ ಇರುವುದೇ ವೃದ್ಧರಾಗುವುದಕ್ಕೆ ಹೆದರಲು ಮೂಲ ಕಾರಣ ಎಂದು ಯೂನಿವರ್ಸಿಟಿ ಆಫ್ ಲಿವರ್‌ಪೂಲ್‌ನ ವೃದ್ಧಾಪ್ಯ ಕುರಿತ ಕೇಂದ್ರದ ಉಪ ನಿರ್ದೇಶಕ ಚಾವೋ ಫಾಂಗ್ ಹಾಗೂ ಬರ್ತ್ ವಿಶ್ವವಿದ್ಯಾಲಯದ ಸಾವು - ಸಮಾಜ ಕೇಂದ್ರದ ಅಲಸ್ಟೇರ್ ಕಾಮಿರಿ ಅಭಿಪ್ರಾಯ ಪಡುತ್ತಾರೆ.

ಸಮಾಜ ಈಗ ಯುವ ಪೀಳಿಗೆ ಹಾಗೂ ಸಾಮರ್ಥ್ಯಗಳ ಕಡೆ ಹೆಚ್ಚು ಗಮನ ಹರಿಸುತ್ತಿದೆ. ಇದರಿಂದಾಗಿ ದುರ್ಬಲ ರಾಗಲು ಯಾರೂ ಬಯಸುತ್ತಿಲ್ಲ. ವೃದ್ಧಾಪ್ಯ ತಡೆಯುವುದು ಹೇಗೆ ಎಂಬ ವಿಚಾರಗಳೇ ಎಲ್ಲೆಡೆ ಕೇಳಿ ಬರುತ್ತಿವೆ. ಹೀಗಾಗಿ ವೃದ್ಧರಾಗುವುದು ಇಷ್ಟವಿಲ್ಲದ ವಿಷಯವಾಗಿದೆ.

ಪಾಶ್ಚಾತ್ಯ ದೇಶಗಳ ಸಾಕಷ್ಟು ಜನರು ವೃದ್ಧರಾಗುತ್ತಿದ್ದೇವೆ ಎಂಬ ಯೋಚನೆಯ ಕಾರಣದಿಂದಾಗಿ ಅನಾರೋಗ್ಯ ಪೀಡಿತರಾಗುತ್ತಿದ್ದಾರೆ. ವೃದ್ಧಾಪ್ಯಕ್ಕೆ ಹೆದರುವ ಹಲವರು ಆರೋಗ್ಯದ ಬಗ್ಗೆ ಅತಿಯಾದ ಕಾಳಜಿ ಹಾಗೂ ಸಾವಿನ ಕುರಿತ ಚಿಂತೆಯಿಂದ ಬಳಲುತ್ತಿದ್ದಾರೆ. ವೃದ್ಧಾಪ್ಯದ ಸಂಕೇತಗಳನ್ನು ಮುಚ್ಚಿಡಲು ಚಡಪಡಿಸುತ್ತಿದ್ದಾರೆ.



ವೃದ್ಧರಾಗುವುದು ಸಾಮಾನ್ಯ ಪ್ರಕ್ರಿಯೆ ಎಂದು ಭಾವಿಸಿದಾಗ, ಅದರೊಂದಿಗೆ ಬರುವ ಚಿಂತೆಗಳೂ ದೂರವಾಗುತ್ತವೆ. ಜೀವನದ ವಿವಿಧ ಹಂತಗಳ ಬದಲಾವಣೆಗಳನ್ನು ಸಹಜವಾಗಿ ಹಾಗೂ ಸಕಾರಾತ್ಮಕವಾಗಿ ಸ್ವೀಕರಿಸಲು ಸಾಧ್ಯವಾಗುತ್ತದೆ.

ಸಾಕಷ್ಟು ಬಾರಿ ನಾವು ವಯಸ್ಸಾಗುವುದನ್ನು ತಡೆ ಯುವ ಮಾತುಗಳನ್ನು ಕೇಳುತ್ತಿದ್ದೇವೆ. ಅಮೆರಿಕದ 45 ವರ್ಷದ ಉದ್ಯಮಿ ಬ್ರಾನ್ ಜಾನ್ಸನ್ ಅವರು ಮತ್ತೆ 18 ವರ್ಷದ ದೇಹ ಪಡೆಯಲು ಪ್ರತಿ ವರ್ಷ ಲಕ್ಷಾಂತರ ಡಾಲರ್ ಖರ್ಚು ಮಾಡುತ್ತಿದ್ದಾರೆ.

ವಯಸ್ಸಿನ ದಿಕ್ಕನ್ನು ಉಲ್ಟಾ ಮಾಡುವುದು ಹೊಸ ವಿಷಯವೇನೂ ಅಲ್ಲ. ಜೈವಿಕ ಔಷಧಗಳ ವಲಯ ಮುಂದುವರೆಯುತ್ತಿರುವಂತೆ, ಈ ಬಗ್ಗೆ ಆಸಕ್ತಿ ಹೆಚ್ಚಾಗುತ್ತಿದೆ.

ಜೀವಕೋಶಗಳ ಉತ್ಪಾದನೆಯಲ್ಲಿ ಬದಲಾವಣೆ ತರುವ ಮೂಲಕ ಜೀವನದ ಅವಧಿ ಹೆಚ್ಚಿಸಬಹುದು ಎಂದು 2019ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದ ವಂಶವಾಹಿ ಉಪನ್ಯಾಸಕ ಡೇವಿಡ್ ಸಿಂಕ್ಲೇರ್ ಪ್ರತಿಪಾದಿಸಿದ್ದರು. ಡಿ.ಎನ್.ಎ.ದಲ್ಲಿ ಬದಲಾವಣೆ ತರುವ ಮೂಲಕ ವೃದ್ಧಾಪ್ಯ ಸಂಬಂಧದ ಹಾನಿಯನ್ನು ತಡೆಯಬಹುದು. ವಯಸ್ಸನ್ನು ಹಿಮ್ಮುಖವಾಗಿಸಲೂ ಸಾಧ್ಯ ಎಂದಿದ್ದರು. ಈ ಎಲ್ಲ ಹೊಸ ಸಾಧ್ಯತೆಗಳು ವೃದ್ಧಾಪ್ಯದ ಭೀತಿಯನ್ನು ಹೆಚ್ಚಿಸಲು ಕಾರಣವಾಗುತ್ತಿವೆ.

ಆದರೆ, ವೃದ್ಧಾಪ್ಯದ ಕುರಿತು ಈ ಹಿಂದೆ ಜನ ಅಷ್ಟೊಂದು ಹೆದರುತ್ತಿರಲಿಲ್ಲ. ಸಾಕಷ್ಟು ಸಮಾಜಗಳಲ್ಲಿ ವೃದ್ಧರನ್ನು ಜ್ಞಾನಿ ಹಾಗೂ ಪ್ರಮುಖರೆಂದು ಭಾವಿಸಲಾಗುತ್ತಿತ್ತು. ಈಗಲೂ ಕೆಲ ಸಮಾಜಗಳು ಅದೇ ರೀತಿ ಇವೆ. ಆದರೆ, 18ನೇ ಶತಮಾನದ ಕೈಗಾರಿಕಾ ಕ್ರಾಂತಿಯ ನಂತರ ಸಮಾಜವು ವೃದ್ಧರಿಗೆ ಆದ್ಯತೆ ನೀಡುವುದರ ಕಡೆಯಿಂದ ಉತ್ಪಾದಕತೆಗೆ ಆದ್ಯತೆ ನೀಡುವತ್ತ ಗಮನ ಹರಿಸಿತು. ವೃದ್ಧಾಪ್ಯ ಎಂಬುದು ಅನುತ್ಪಾದಕ ಹಂತ ಎಂಬ ಭಾವನೆ ಮೂಡಲು ಆರಂಭಿಸಿತು.

20ನೇ ಶತಮಾನದ ಆರಂಭದ ನಂತರ ಜಾಗತಿಕವಾಗಿ ಪಿಂಚಣಿ ವ್ಯವಸ್ಥೆಗಳು ಬಲವಾಗುತ್ತಾ ಬಂದಿವೆ. ಆದರೆ, ಸಾಮಾಜಿಕ ಹಾಗೂ ಆರೋಗ್ಯ ಬೇಡಿಕೆಗಳು ಹೆಚ್ಚಾಗುತ್ತಾ ಸಾಗಿದವು. ಮಾಧ್ಯಮ ಗಳು ವೃದ್ಧಾಪ್ಯವನ್ನು ಸಮಾಜಕ್ಕೆ ಹೊರೆ ಎಂದು ಬಿಂಬಿಸಲು ಆರಂಭಿಸಿದವು.

ಇದೆಲ್ಲದರ ಕಾರಣದಿಂದ ವೃದ್ಧರಾಗುವುದು ಎಂದರೆ ಆರೋಗ್ಯದ ಅಪಾಯಗಳ ನಿರ್ವಹಣೆ ಹಾಗೂ ಯುವ ಪೀಳಿಗೆಯ ಅವಲಂಬಿತರು ಎಂಬ ಭಾವನೆ ಬಲವಾಗತೊಡಗಿತು. ಪಾಶ್ಚಾತ್ಯ ದೇಶಗಳಲ್ಲಿ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚಾಗಲು ಆರಂಭಿಸಿತು. ವೃದ್ಧರು ಯುವ ಪೀಳಿಗೆಯಿಂದ ದೂರವಾಗುವ ಪದ್ಧತಿ ಆರಂಭವಾಯಿತು.

ವೃದ್ಧಾಪ್ಯ ಪ್ರಕ್ರಿಯೆಯ ಬಗ್ಗೆ ಜನರು ಹೆದರುತ್ತಿಲ್ಲ. ಆದರೆ, ವೃದ್ಧಾಪ್ಯದಿಂದಾಗಿ ನಾವು ಇದುವರೆಗೂ ಗೊತ್ತಿರದ ಹಾದಿಯಲ್ಲಿ ಸಾಗಬೇಕಾಗುತ್ತದೆ ಎಂದೇ ಅಮೆರಿಕದ ಸಾಕಷ್ಟು ಜನರು ಹೆದರುತ್ತಿದ್ದಾರೆ. ವೃದ್ಧರು ಹಾಗೂ ಯುವಕರು ಪ್ರತ್ಯೇಕ ಜೀವನ ಬದುಕುತ್ತಿರುವುದೇ ಇದಕ್ಕೆ ಕಾರಣ.

ವಿಭಕ್ತ ಕುಟುಂಬಗಳು ಹಾಗೂ ಸಾಂಪ್ರದಾಯಿಕ ಮೌಲ್ಯಗಳು ಮರೆಯಾಗುತ್ತಿರುವುದರಿಂದ ಯುವ ಪೀಳಿಗೆಯು ವೃದ್ಧರನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಮಕ್ಕಳು ಹಾಗೂ ಯುವಕರಿಂದ ಪ್ರತ್ಯೇಕವಾದ ವೃದ್ಧರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗುತ್ತಿದೆ.

ಮನುಷ್ಯ ವೃದ್ಧಾಪ್ಯದಲ್ಲಷ್ಟೇ ಅಲ್ಲದೇ, ಪ್ರತಿ ಹಂತದಲ್ಲೂ ಬದಲಾಗುತ್ತಾನೆ. ಬಾಲ್ಯದಿಂದ ಹದಿ ಹರೆಯ, ನಂತರ ಯೌವ್ವನ, ಮಧ್ಯ ವಯಸ್ಸು ಎಲ್ಲವೂ ಬದಲಾವಣೆ ತರುತ್ತದೆ. ಈ ಬದಲಾವಣೆ ಒಂದಲ್ಲಾ ಒಂದು ರೀತಿಯ ಹೆದರಿಕೆ ಹಾಗೂ ಕಳವಳ ತರುವುದು ಸಹಜ.

ಆದರೆ, ವೃದ್ಧಾಪ್ಯ ಸಮಸ್ಯಾತ್ಮಕ ಎಂದು ಭಾವಿಸುವ ಬದಲು ಅದು ಜೀವನದ ಒಂದು ಅವಿಭಾಜ್ಯ ಅಂಗ ಎಂಬುದನ್ನು ಪರಿಗಣಿಸ ಬೇಕಿದೆ. ವೃದ್ಧರಾಗುವುದು ಸಾಮಾನ್ಯ, ಅದರೊಂದಿಗೆ ಬರುವ ಉದ್ವಿಗ್ನತೆಗಳೂ ಸಾಮಾನ್ಯ.

ವೃದ್ಧರಾಗುವುದು ಸಾಮಾನ್ಯ ಪ್ರಕ್ರಿಯೆ ಎಂದು ಭಾವಿಸಿದಾಗ, ಅದರೊಂದಿಗೆ ಬರುವ ಚಿಂತೆಗಳೂ ದೂರವಾಗುತ್ತವೆ. ಜೀವನದ ವಿವಿಧ ಹಂತಗಳ ಬದಲಾವಣೆಗಳನ್ನು ಸಹಜವಾಗಿ ಹಾಗೂ ಸಕಾರಾತ್ಮಕವಾಗಿ ಸ್ವೀಕರಿಸಲು ಸಾಧ್ಯವಾಗುತ್ತದೆ. ಇದು ನಮ್ಮ ಜೀವನ ಹಾಗೂ ನಮ್ಮ ಸುತ್ತಲಿನವರ ಜೀವನ ಶ್ರೀಮಂತಗೊಳಿಸುತ್ತದೆ.

## ವಿಕಸಿತ ಭಾರತಕ್ಕೆ ಬಿಜೆಪಿ ಗೆಲುವು

**(1ನೇ ಪುಟದಿಂದ)** ಎಂದು ಟೀಕಿಸಿದರು. ಐದು ಅರಬ್ ದೇಶಗಳು ಪ್ರಧಾನಿ ಮೋದಿ ಅವರಿಗೆ ಅತ್ಯುನ್ನತ ಗೌರವ ಪ್ರದಾನ ಮಾಡಿವೆ. ಭಾರತ ಈಗ ಸಣ್ಣ ಯೋಚನೆ ಹಾಗೂ ಕನಸುಗಳ ಬಗ್ಗೆ ಯೋಚಿಸುವುದಿಲ್ಲ. ಭಾರತ ಈಗ ದೊಡ್ಡ ಕನಸುಗಳನ್ನು ಕಾಣುತ್ತಿದೆ ಹಾಗೂ ದೊಡ್ಡ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದೆ. 2047ರ ವೇಳೆಗೆ ವಿಕಸಿತ ಭಾರತವಾಗುವ ಗುರಿ ಹೊಂದಿದೆ ಎಂದೂ ಮೋದಿ ಹೇಳಿದರು.

ಈ ದಿಸೆಯಲ್ಲಿ ಮುಂದಿನ ಐದು ವರ್ಷಗಳು ಪ್ರಮುಖವಾಗಿವೆ. ವಿಕಸಿತ ಭಾರತದ ಕಡೆ ದೊಡ್ಡ ಹೆಜ್ಜೆ ಇಡಬೇಕಿದೆ. ಬಿಜೆಪಿ ಬಲಿಷ್ಠ ಜನಾದೇಶದೊಂದಿಗೆ ಅಧಿಕಾರಕ್ಕೆ ಬರುವುದು ಈ ದಿಸೆಯಲ್ಲಿ ಮೊದಲ ದೊಡ್ಡ ಅಗತ್ಯವಾಗಿದೆ ಎಂದೂ ಅವರು ತಿಳಿಸಿದರು.

ಕಾಂಗ್ರೆಸ್ ಪಕ್ಷದಲ್ಲೀಗ ತೀವ್ರ ಒಡಕಿದೆ. ಈ ಒಡಕು ಸೈದ್ಧಾಂತಿಕವಲ್ಲ. ಸಾಧ್ಯವಿರುವ ಎಲ್ಲಾ ಮಾರ್ಗಗಳ ಮೂಲಕ ತನ್ನ ತೇಜೋವಧೆ ಮಾಡಬೇಕು ಎಂದು ಕಾಂಗ್ರೆಸ್‌ನ ಒಂದು ವರ್ಗ ಬಯಸುತ್ತಿದೆ. ಇನ್ನೊಂದು ವರ್ಗ ಇಂತಹ ದಾರಿ ಬಯಸುತ್ತಿಲ್ಲ ಎಂದು ಮೋದಿ ಹೇಳಿದರು.

ಮೋದಿಯ ನಿಂದನೆ ಹಾಗೂ ಸುಳ್ಳು ಆರೋಪ ಮಾಡುವುದು ಈಗ ಕಾಂಗ್ರೆಸ್ ನಾಯಕರ ಒಂದಂಶದ ಕಾರ್ಯಕ್ರಮವಾಗಿದೆ ಎಂದೂ ಆರೋಪಿಸಿದರು.

## 'ವಿನೂತನ ಸ್ತ್ರೀ ಸೂಪರ್ ಜೋಡಿಗಳು' ಕಾರ್ಯಕ್ರಮ

ದಾವಣಗೆರೆ, ಫೆ. 18- ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ವಿನೂತನ ಮಹಿಳಾ ಸಮಾಜದ ವತಿಯಿಂದ 'ವಿನೂತನ ಸ್ತ್ರೀ ಸೂಪರ್ ಜೋಡಿಗಳು' ಎಂಬ ಸ್ಪರ್ಧೆ ಯನ್ನು ಹಮ್ಮಿಕೊಂಡಿದ್ದೇವೆ. 50 ವರ್ಷದ ಒಳಗಿನವರಿಗೆ ಹಾಗೂ 50 ವರ್ಷದ ಮೇಲ್ಪಟ್ಟವರಿಗೆ ಎಂದು ಎರಡು ಭಾಗವಾಗಿ ತಂಡ ವಿಭಜಿಸಲಾಗಿದೆ.

ಬರುವ ಮಾರ್ಚ್ 12 ರಂದು ಮಂಗಳವಾರ ಬೆಳಿಗ್ಗೆ 11 ಗಂಟೆಗೆ ವಿನಾಯಕ ದೇವಸ್ಥಾನದ ಆವರಣದಲ್ಲಿ ಈ ಸ್ಪರ್ಧೆ ನಡೆಯಲಿದೆ. ವಿವರಕ್ಕೆ 9663823664, 9886177445ಕ್ಕೆ ಸಂಪರ್ಕಿಸಬಹುದಾಗಿದೆ ಎಂದು ವಿನೂತನ ಮಹಿಳಾ ಸಮಾಜದ ಅಧ್ಯಕ್ಷರಾದ ರೇಖಾ ಓಂಕಾರಪ್ಪ ತಿಳಿಸಿದ್ದಾರೆ.



## ಡಾ.ರಾಜ್‌ರಂತಹ ನಟನನ್ನು ಕಲಾ ಜಗತ್ತಿಗೆ ನೀಡಿದ್ದೇ ರಂಗಭೂಮಿ

### 'ಸತಿ ಸಂಸಾರದ ಜ್ಯೋತಿ' ನಾಟಕ ಉದ್ಘಾಟನೆಯಲ್ಲಿ ಡಿವೈಎಸ್ಪಿ ಗಿರೀಶ್ ಭೋಜಣ್ಣನವರ

ರಾಣೇಬೆನ್ನೂರು, ಫೆ. 18- ರಂಗಭೂಮಿ ಕಲಾ ಪ್ರತಿಭೆಗಳನ್ನು ಹುಟ್ಟುಹಾಕುವ ಒಂದು ವಿಶ್ವವಿದ್ಯಾಲಯವಿದ್ದಂತೆ, ನಿಜವಾದ ಕಲೆ ಅರಳುವುದೇ ರಂಗಭೂಮಿಯಿಂದ. ಡಾ. ರಾಜಕುಮಾರ್ ಅಂತಹ ಮಹಾನ್ ನಟನನ್ನು ಚಲನಚಿತ್ರ ಜಗತ್ತಿಗೆ ನೀಡಿದ್ದೇ ರಂಗಭೂಮಿ ಎಂದು ಡಿವೈಎಸ್ಪಿ ಗಿರೀಶ್ ಭೋಜಣ್ಣನವರ ಹೇಳಿದರು.

ತಾಲ್ಲೂಕಿನ ಹೊಸ ಮುಷ್ಟೂರು ಗ್ರಾಮದ ಶ್ರೀ ಚೌಡೇಶ್ವರಿ ಜಾತ್ರೆ ಪ್ರಯುಕ್ತ ದಾವಣಗೆರೆಯ ಹಿರಿಯ ರಂಗಭೂಮಿ ನಟಿ ಶ್ರೀಮತಿ ಭಾರತಿ ನೇತೃತ್ವದ ವಸಂತ ಕಲಾ ನಾಟ್ಯ ಸಂಘದವರು ಪ್ರದರ್ಶಿಸಿದ 'ಸತಿ ಸಂಸಾರದ ಜ್ಯೋತಿ' ಎಂಬ ನಾಟಕ ಪ್ರದರ್ಶನದ ಉದ್ಘಾಟನೆಯನ್ನು ನೆರವೇರಿಸಿ ಅವರು ಮಾತನಾಡಿದರು.

ಇತ್ತೀಚೆಗೆ ಟಿ.ವಿ ಧಾರಾವಾಹಿ ಮತ್ತು ಸಿನಿಮಾ ಜಗತ್ತಿನ ಹಾವಳಿಯಿಂದ ರಂಗಭೂಮಿಯ ಕಲೆ ನಶಿಸುತ್ತಿದೆ, ಇದರಿಂದ ವೃತ್ತಿ ನಿರತ ಮತ್ತು ರಂಗಭೂಮಿಯನ್ನೇ ನಂಬಿದ ಕಲಾವಿದರ ಬದುಕು ಬರಡಾಗುತ್ತಿದೆ. ಸರ್ಕಾರಗಳು ಈ ಕಲಾವಿದರಿಗೆ ಆಸರೆಯಾಗುವಂತಹ, ರಂಗಕಲೆ ಉಳಿಯುವಂತಹ ಹೊಸ ಹೊಸ ಯೋಜನೆಗಳನ್ನು ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆಯ ಮುಖಾಂತರ ಜಾರಿಗೆ ತರಬೇಕೆಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಗೋಲ್ಡನ್ ಹ್ಯಾಚರೀಸ್ ಪ್ರೈ.ಲಿ.ನ ಜನರಲ್ ಮ್ಯಾನೇಜರ್ ಎನ್. ಲೋಕೇಶ್ ಮಾತನಾಡಿ, ಜಾತ್ರೆಗಳು ಮಾನವ ಸಂಬಂಧಗಳನ್ನು ಬಲಿಷ್ಠಗೊಳಿಸಿ ಗ್ರಾಮೀಣ ಸೊಗಸು, ಸಂಸ್ಕಾರ, ಸಂಪ್ರದಾಯಗಳನ್ನು ವೃದ್ಧಿಗೊಳಿಸುತ್ತವೆ. ಎಂದರು.

ಇದೇ ಸಂದರ್ಭದಲ್ಲಿ ಗೋಲ್ಡನ್ ಹ್ಯಾಚರೀಸ್ ಕಂಪನಿ ಎಚ್.ಆರ್.ಡಿ. ಭೀಮಪ್ಪ ಮತ್ತು ಗಣ್ಯ ವರ್ತಕ ಸಂತೋಷ ಪಿ. ಬಗಾಡೆಯವರ ಜನ್ಮ ದಿನವನ್ನು ಇದೇ ರಂಗಸಜ್ಜಿಕೆಯಲ್ಲಿ ಕೇಕ್ ಕಟ್ ಮಾಡುವ ಮೂಲಕ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಲ್ಯಾಂಡ್ ಟ್ರಿಬ್ಯೂನಲ್ ಕಮಿಟಿ ನಾಮ ನಿರ್ದೇಶಿತ ಸದಸ್ಯ ಷಣ್ಮುಖಗೌಡ, ಸಣ್ಣ ಹನುಮನಗೌಡ್ರ, ಚಂದ್ರಣ್ಣ ಹೆಚ್.ಬೇಡರ, ಶಿದ್ದನಗೌಡ ಗೋವಿಂದಗೌಡ್ರ, ಈರಣ್ಣ ಹಲಗೇರಿ, ಬಸವರಾಜ ಕೊಂಗಿಯವರ, ಗುರಣ್ಣ ಉಪ್ಪಿನ, ಸಂಗೀತ ನಿರ್ದೇಶಕ ಬಸವಣ್ಣೆಪ್ಪ ಡಿ. ದೇವರಮನಿ, ಹರಿಹರಗೌಡ ಪಾಟೀಲ, ಪ್ರಶಾಂತರಡ್ಡಿ ಯರೇಕುಪ್ಪಿ, ಬಸವರಾಜ ಯಲ್ಲಕ್ಕನವರ, ಚಳಗೇರಿ ಟೋಲ್ ಪ್ಲಾಜಾದ ಮ್ಯಾನೇಜರ್ ಹನಮಂತಪ್ಪ ಸಿ. ವೈ. ಮುಂತಾದವರು ಆಗಮಿಸಿದ್ದರು.

ಇದೇ ಸಂದರ್ಭದಲ್ಲಿ ಡಿ.ವೈ.ಎಸ್.ಪಿ ಗಿರೀಶ್ ಭೋಜಣ್ಣನವರು 'ಕರ್ಣ' ಕನ್ನಡ ಚಲನಚಿತ್ರದ 'ಆ ಕರ್ಣನಂತೆ ನೀ ದಾನಿಯಾದೆ' ಎಂಬ ಹಾಡನ್ನು ಹಾಡಿ ನೆರೆದ ಜನತೆಯ ಹೃದಯ ಸ್ಪರ್ಶಿಸಿದರು.

ಅಧ್ಯಕ್ಷತೆಯನ್ನು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ವಹಿಸಿದ್ದರು. ಕನ್ನಡ ಪ್ರಾಧ್ಯಾಪಕ ಶ್ರೀನಿವಾಸ ನಲವಾಗಲ ಕಾರ್ಯಕ್ರಮ ನೆರವೇರಿಸಿಕೊಟ್ಟರು.


**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ Part time ಆಫೀಸ್ ವರ್ಕ್ ಮತ್ತು ಡ್ರೈವರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಮಯ : ಸಂಜೆ 7.30 ರಿಂದ ರಾತ್ರಿ 11
ಮೊ. 97385-23711

**ಸೈಟು ಮಾರಾಟಕ್ಕಿದೆ**
ಕುಂದುವಾಡದ ತುಂಗಭದ್ರಾ ಬಡಾವಣೆಯಲ್ಲಿ ಉತ್ತರ ಮುಖವುಳ್ಳ 20×30 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಆಸಕ್ತಿಯುಳ್ಳವರು ಮಾತ್ರ ಸಂಪರ್ಕಿಸಿ :
97416 84666, 82177 98233

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ
50x80 (2400 ರೂ. ಅಡಿಗೆ)
ಕಿರಣ್ ಭೂಸ್ನೂರ್ : 98440 63409
ನೇರವಾಗಿ ರಿಜಿಸ್ಟರ್ ಪಾರ್ಟಿ ಯಿಂದ ವ್ಯಾಪಾರ

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 East, 50x80 West, Rate - 2800/- 30x40 East, 30x40 North, 30x50 West, 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಮಾರಾಟಕ್ಕೆ ಇದೆ**
ಮಹಾಲಕ್ಷ್ಮಿ ಬಡಾವಣೆಯಲ್ಲಿ 30x50ರಲ್ಲಿ ಪಶ್ಚಿಮ ದಿಕ್ಕಿನಲ್ಲಿ 2 ಬೆಡ್ ರೂಂನ ಹೊಸ ಮನೆ ಮಾರಾಟಕ್ಕೆ ಇದೆ.
98448 82366

**ಬೇಕಾಗಿದ್ದಾರೆ**
ಪಾರ್ಟ್ ಟೈಮ್ ಕೆಲಸಕ್ಕೆ (ಕೇವಲ ಆರು ಗಂಟೆ ಕೆಲಸ ಮಧ್ಯಾಹ್ನ 12 ರಿಂದ ಸಂಜೆ 6 ರವರೆಗೆ) ಸೇಲ್ಸ್ ಗರ್ಲ್ಸ್, ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ.
ಮೆಟ್ರಿಕ್ಸ್ ಹೋಂ ಅಪ್ಲೈಯನ್ಸಸ್
ಚೌಕಿಪೇಟೆ, ಜೈನ್ ದೇವಸ್ಥಾನದ ಹತ್ತಿರ, ದಾವಣಗೆರೆ.
9164291800

ಶ್ರೀ ದುರ್ಗಮ್ಮದೇವಿ ಪ್ರಸನ್ನ
**ಟಗರು ಮಾರಾಟಕ್ಕಿವೆ**
ನೇರ ರೈತರಿಂದ ಮಾರಾಟ 2 ಹಲ್ಲು, 4ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ 30x60, 30x60 North ಅಕ್ಕ-ಪಕ್ಕ, 30x45, 30x45 South ಅಕ್ಕ-ಪಕ್ಕ, 40x40 South, 30x50 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 40x60 ಪೂರ್ವ, 40x60 ಉತ್ತರ, 40x50 ಪೂರ್ವ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಪಶ್ಚಿಮ, ಸರಸ್ವತಿ ಬಡಾವಣೆಯಲ್ಲಿ 40x60 ಉತ್ತರ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**WANTED**
Banking Sector Job Openings (Female Only)
Qualification : Any Degree.
90715 55081
Interview Time - 11AM

**ಸಾಲ ಸೌಲಭ್ಯ**
ಎಲ್ಲಾ ರೀತಿಯ ಬಿಸಿನೆಸ್ ಮಾಡುವವರಿಗೆ ಸಬ್ಸಿಡಿ ಲೋನ್ ದೊರೆಯುತ್ತದೆ ಹಾಗೂ ಎಲ್ಲಾ ತರಹದ ಸಾಲ ಸೌಲಭ್ಯಗಳಿಗಾಗಿ ಸಂಪರ್ಕಿಸಿ :
74060 09827, 74831 53461
81233 86742

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಲೇಔಟ್ 30x40 (ಪಶ್ಚಿಮ) 40 ಅಡಿ ರಸ್ತೆ ನೂತನ ಕಾಲೇಜು ಹಿಂಭಾಗ (LIC) ಕಾಲೋನಿ 25x40 (ಪಶ್ಚಿಮ) ವಿವೇಕಾನಂದ ಬಡಾವಣೆ 30x50 ಪಶ್ಚಿಮ. ಭೂಮಿಕಾ ನಗರ 30x40 (ಪೂರ್ವ) ಸರಸ್ವತಿ ನಗರ 45x50 (ಪಶ್ಚಿಮ-ದಕ್ಷಿಣ) ಕಾರ್ನರ್
95385 65909

**ಬೇಕಾಗಿದ್ದಾರೆ**
Non Veg ಹೋಟೆಲ್‌ನಲ್ಲಿ ಕೆಲಸ ಮಾಡಲು
ಅಡುಗೆ ಭಟ್ರು ಸಂಬಳ : 30000/-
ಸಪ್ಲೈಯರ್ ಸಂಬಳ : 12000/-.
ಸಂಪರ್ಕಿಸಿ : ಹೋಟೆಲ್ ವಿಷ್ಣುಪ್ರೇಮ
99022 49393

**ಬೇಕಾಗಿದ್ದಾರೆ**
ಲಾಂಡ್ರಿ ಬಿಸಿನೆಸ್‌ಗೆ ಸರ್ವೆ ಮಾಡಲು ಹುಡುಗರು ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನವನ್ನು ಹೊಂದಿರಬೇಕು. ಸಂಪರ್ಕಿಸಿ.
78297 71485, 81509 98213

**ಬೇಕಾಗಿದ್ದಾರೆ**
ಪದವಿವುಳ್ಳ ಅಭ್ಯರ್ಥಿ ಉತ್ತಮ ಸಂಭಾಷಣೆಗಾರರು ಹಾಗೂ ಅನುಭವಿ ಕಂಪ್ಯೂಟರ್ ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್, ಟೆಲಿ ಕಾಲಿಂಗ್ ಅಭ್ಯರ್ಥಿಗಳು ಬೇಕಾಗಿದ್ದಾರೆ. ಆಸಕ್ತರು ಈ ಕೂಡಲೇ ಸಂಪರ್ಕಿಸಿ :
ಎಂ.ಇ.ಎಸ್. ಪದವಿ ಪೂರ್ವ ಕಾಲೇಜ್, ಆಂಜನೇಯ ಬಡಾವಣೆ, 9ನೇ ತಿರುವು ದಾವಣಗೆರೆ
98804 36414, 98800 30171

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628


ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science
B.Sc.-Agriculture, B.Tech All branches, D.Pharma, B.Ed., PhD regular
B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸಂಜೀವಿನಿ ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರನ್ನು ನೋಡಿಕೊಳ್ಳಲು ಹೋಮ್ ನರ್ಸ್ (ಕೇರ್‌ಟೇಕರ್ಸ್) ಬೇಕಾಗಿದ್ದಲ್ಲಿ ಸಂಪರ್ಕಿಸಿ ಹಾಗೂ ವಯೋವೃದ್ಧರನ್ನು ನೋಡಿಕೊಳ್ಳಲು ಮಹಿಳೆಯರು ಮತ್ತು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 5th, 7th, 10th, PUC, GNM, ANM, ಉಚಿತ ಊಟ, ವಸತಿಯೊಂದಿಗೆ 15,000 ರಿಂದ 25,000 ರೂ.
ಫೋ. : 91486 83185

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಮನೆ ಮಾರಾಟಕ್ಕಿದೆ**
1828/A25,ಆಂಜನೇಯ ಬಡಾವಣೆ,18ನೇ ಕ್ರಾಸ್ ನಲ್ಲಿರುವ ಡುಪ್ಲೆಕ್ಸ್ (North Face), 1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ (East Face) ವಾಸ್ತು ಪ್ರಕಾರ ಎಲ್ಲಾ ಅನುಕೂಲವಿರುವ fully furnished, ಬೋರ್ ವೆಲ್ & ಕಾರ್ಪೋರೇಶನ್ ನೀರಿನ ವ್ಯವಸ್ಥೆ ಇರುವ ಮನೆ ಮಾರಾಟಕ್ಕೆ ಇದೆ.
9008432505 /9902432505

**ಕ್ರಯಪತ್ರ ಕಳೆದಿದೆ**
ದಾವಣಗೆರೆ ಸಿಟಿ ಕೆಟಿಜೆ ನಗರ, 3ನೇ ಮೇನ್, 13ನೇ ಕ್ರಾಸ್ # 545 ವಾಸಿ ಪಿ.ಎನ್. ಪುರುಷೋತ್ತಮ ರಾಜ ಹೆಸರಿನ ಜೆ.ಹೆಚ್. ಪಟೇಲ್ ಬಡಾವಣೆಯ 463ನೇ ಸಂಖ್ಯೆಯ ನಿವೇಶನದ ಕ್ರಯ ಪತ್ರ ಜೆರಾಕ್ಸ್ ಮಾಡಿಸಲು ಹೋದಾಗ ಕಳೆದಿದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಲು ಕೋರಲಾಗಿದೆ.
ಮೊ : 94484 22884

**ಸೈಟುಗಳು ಮಾರಾಟಕ್ಕಿವೆ**
30x50 ಸಿದ್ದಗಂಗಾ ಲೇಔಟ್, ಟಾಟಾ ಶೋ ರೂಮ್ ಹಿಂಭಾಗ (Opp Jain Temple) ಕಾಂಕ್ರೀಟ್ ರಸ್ತೆ, 120 ಅಡಿ ರಿಂಗ್ ರೋಡ್ ಹಿಂಭಾಗ, ಹತ್ತಿರದ ಪಿ.ಬಿ. ರಸ್ತೆಗೆ, ಆವರಗೆರೆ, ದಾವಣಗೆರೆ.
98452 95326

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗ-ಹುಡುಗಿಯರು ಬೇಕಾಗಿದ್ದಾರೆ.
ಶ್ರೀಧರ್ ಅಕ್ವೇರಿಯಂ
ಎಂಸಿಸಿ 'ಎ' ಬ್ಲಾಕ್, ಚರ್ಚ್ ರಸ್ತೆ, ದಾವಣಗೆರೆ.
63621 49155

**ಬೇಕಾಗಿದ್ದಾರೆ**
ಎಂಸಿಸಿ ಬಿ ಬ್ಲಾಕ್‌ನಲ್ಲಿ ಹೋಟೆಲ್ ಕ್ಲೀನಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ಸಮಯ : 9 ರಿಂದ ಸಂಜೆ 6 ರವರೆಗೆ
ಸಂಬಳ : 8000/-
70198 12207

**ಮನೆ ಮಾರಾಟಕ್ಕೆ ಇದೆ**
ಕರಿಯಮ್ಮನ ದೇವಸ್ಥಾನ ಹತ್ತಿರ 30x40 ಅಳತೆಯ 2 ಮಹಡಿಯ ಮನೆ ಮಾರಾಟಕ್ಕೆ ಇದೆ.
ವಿಳಾಸ : ನಿಟ್ಟುವಳ್ಳಿ ರಾಮನ ತೋಟ, 1ನೇ ಮೇನ್ 1ನೇ ಕ್ರಾಸ್.
98441 01178

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**FULL TIME JOB**
Share Market Dealer Telecaller & Social Media Management
Basic computer typing and Execution skills. Speaking Skills: English, Kannada and Hindi
Male preferred, Timing: 9 AM to 7 PM
Salary: 8 to 10k + Attractive Incentives
+91 7892 999 456
TRADERZ HUT

**SHOP FOR RENT**
Boys Hostel Road, Ist Floor Shop For Rent 7th Cross, 9th Main
82177 72482

**CRASH COURSE 2024-25**
Class 10 CBSE/State Maths & Science
49 Days (5 Hr per day)
Pi Academy,
Near by Laxmi Flour Mills
99642 29344

**ಸೈಟು ಮತ್ತು ಮಳಿಗೆ ಮಾರಾಟಕ್ಕಿದೆ**
ಪಿ.ಬಿ. ರಸ್ತೆ ರವಿ ಮಿಲ್ ಎದುರು ಮಹೀಂದ್ರ ಶೋ ರೂಂ ಹತ್ತಿರವಿರುವ ನಾಗಮ್ಮ ಕೇಶವಮೂರ್ತಿ ಲೇಔಟ್‌ನಲ್ಲಿ 25x100 ಚ.ಅಡಿ ಇರುವ Powerವುಳ್ಳ ಸುಸಜ್ಜಿತ ಸೈಟು ಮತ್ತು ಮಳಿಗೆ ಮಾರಾಟಕ್ಕಿವೆ. ಸಂಪರ್ಕಿಸಿ.
96114 82735, 63625 25571

**ಬೇಕಾಗಿದ್ದಾರೆ**
ಮನೆಯಲ್ಲಿ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ, ಆಸಕ್ತರು ಸಂಪರ್ಕಿಸಿ, ಭೇಟಿಯ ಸಮಯ : ಬೆಳಿಗ್ಗೆ 11.30 ರಿಂದ ಸಂಜೆ 5 ರವರೆಗೆ. ಸಂಪರ್ಕಿಸಿ :
08192 254736

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

# ನಗರದಲ್ಲಿ ನಾಳೆ ಜಿಲ್ಲಾಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆ

ದಾವಣಗೆರೆ, ಫೆ.18- ಸರ್ಕಾರ ಪ್ರಪ್ರಥಮ ಬಾರಿಗೆ ಯೋಗಾಸನ ಸ್ಪರ್ಧೆಗೆ ಅವಕಾಶ ನೀಡಿರುವ ಹಿನ್ನೆಲೆಯಲ್ಲಿ ನಾಡಿದ್ದು ದಿನಾಂಕ 20 ಮತ್ತು 21ರಂದು ನಡೆಯುವ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ 45 ವರ್ಷದೊಳಗಿನ ಹಾಗೂ 45 ವರ್ಷ ಮೇಲ್ಪಟ್ಟ ಪುರುಷರು, ಮಹಿಳೆಯರಿಗೆ ಯೋಗ ಸ್ಪರ್ಧೆ ನಡೆಯಲಿವೆ ಎಂದು ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ಎನ್. ವಾಸುದೇವ ರಾಯ್ಕರ್ ತಿಳಿಸಿದ್ದಾರೆ.

ಮೊನ್ನೆ ನಡೆದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಸರ್ಕಾರಿ ನೌಕರರ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಯೋಗಾಸನಕ್ಕೆ ಅವಕಾಶ ಮಾಡಿಕೊಡುವ ಮೂಲಕ ಯೋಗದ ವೃದ್ಧಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಸರ್ಕಾರದ ಕ್ರಮವನ್ನು ಜಿಲ್ಲಾ ಯೋಗ ಒಕ್ಕೂಟ ಸ್ವಾಗತಿಸುತ್ತದೆ ಎಂದು ಹೇಳಿದರು.

ದಿನಾಂಕ 20 ರಂದು ಮಂಗಳವಾರ ಬೆಳಗ್ಗೆ 10.30ಕ್ಕೆ ಜಿಲ್ಲಾ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಯ ಉದ್ಘಾಟನೆ ನಂತರ ಅದೇ ವೇದಿಕೆಯಲ್ಲಿ ಯೋಗ ಸ್ಪರ್ಧೆ ನಡೆಯಲಿವೆ.

ಜೂನ್ 21ರಂದು ರಾಜ್ಯ ಮಟ್ಟದ ಯೋಗ ದಿನವನ್ನು ದಾವಣಗೆರೆಯಲ್ಲೇ ನಡೆಸಿಕೊಡಬೇಕು ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಮಾಡಿಕೊಂಡಿರುವ ಮನವಿಗೆ ಪೂರಕವಾಗಿ ಸ್ಪಂದಿಸಿದ್ದಾರೆ ಎಂದು ಹೇಳಿದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ವೀರೇಶ್ ಎಸ್. ಒಡೇನಪುರ ಮಾತನಾಡಿ, ದಿನಾಂಕ 20 ಮತ್ತು 21ರಂದು ನಡೆಯುವ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಸರ್ಕಾರ ಮೊದಲ ಬಾರಿಗೆ ಯೋಗ ಮತ್ತು ಖೋ ಖೋ ಗೆ ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಎರಡೂ ಸ್ಪರ್ಧೆಗಳನ್ನು ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಸಂಘದ ಕಾರ್ಯದರ್ಶಿ ಎಸ್. ಗುರುಮೂರ್ತಿ, ಡಾ. ಯು. ಸಿದ್ದೇಶ್, ಬಾದಾಮಿ ಜಯಣ್ಣ, ಪರಶುರಾಮ್, ಪ್ರಕಾಶ್ ಉತ್ತಂಗಿ, ರಾಜು ಬದ್ವಿ, ತೀರ್ಥರಾಜ್ ಹೋಲೂರು, ನಿರಂಜನ್ ಅಣಬೂರುಮಠ ಮತ್ತಿತರರಿದ್ದರು.

## ಪೊಲೀಸ್ ಕಾನ್ಸ್ ಟೇಬಲ್ ಹುದ್ದೆಗಳಿಗೆ ಲಿಖಿತ ಪರೀಕ್ಷೆ

ದಾವಣಗೆರೆ, ಫೆ. 18 - ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ನಾಗರಿಕ ಸೇವಾ ಪೊಲೀಸ್ ಕಾನ್‌ಸ್ಟೇಬಲ್ (ಪುರುಷ ಮತ್ತು ಮಹಿಳಾ) ಮತ್ತು (ತೃತೀಯ ಲಿಂಗ ಪುರುಷ, ಮತ್ತು ಮಹಿಳಾ) ಹಾಗೂ ಸೇವಾನಿರತ ಮತ್ತು ಬ್ಯಾಕ್‌ಲಾಗ್-1137 ಹುದ್ದೆಗಳಿಗೆ ಲಿಖಿತ ಪರೀಕ್ಷೆಯನ್ನು ಇದೇ ದಿನಾಂಕ 25 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 12.30 ರವರೆಗೆ ನಡೆಸಲಾಗುವುದು ಎಂದು ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್ ತಿಳಿಸಿದ್ದಾರೆ.

# ಸ್ವಚ್ಛತೆ ಕಾಪಾಡುವವರ ಶ್ರೇಯೋಭಿವೃದ್ಧಿ ಆಗಬೇಕು

## ಸಫಾಯಿ ಕರ್ಮಚಾರಿಗಳ ಸೌಲಭ್ಯಗಳ ಕುರಿತ ಕಾರ್ಯಾಗಾರದಲ್ಲಿ ಜಿಲ್ಲಾಧಿಕಾರಿ ಡಾ. ಎಂ.ವಿ ವೆಂಕಟೇಶ್ ಆಶಯ



ದಾವಣಗೆರೆ, ಫೆ. 18- ಸ್ವಚ್ಛತೆ ಕಾಪಾಡುವಲ್ಲಿ ಸಫಾಯಿ ಕರ್ಮಚಾರಿಗಳ ಶ್ರಮದ ಬೆವರಿದೆ. ಹಾಗಾಗಿ ಅವರ ಶ್ರೇಯೋಭಿವೃದ್ಧಿ ಆಗಬೇಕು. ಅದಕ್ಕಾಗಿ ಸರ್ಕಾರ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿನ ತುಂಗಭದ್ರಾ ಸಭಾಂಗಣದಲ್ಲಿ ಸಮಾಜ ಕಲ್ಯಾಣ ಇಲಾಖೆ, ರಾಷ್ಟ್ರೀಯ ಸಫಾಯಿ ಕರ್ಮಚಾರಿ ಹಣಕಾಸು ಮತ್ತು ಅಭಿವೃದ್ದಿ ನಿಗಮ ಹಾಗೂ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ದಿ ನಿಗಮ ಹಾಗೂ ಮಹಾನಗರ ಪಾಲಿಕೆ ಇವರ ಸಹಯೋಗದಲ್ಲಿ ಸಫಾಯಿ ಕರ್ಮಚಾರಿಗಳಿಗೆ ಇರುವ ಯೋಜನೆಗಳು ಹಾಗೂ ಸೌಲಭ್ಯಗಳ ಕುರಿತ ಕಾರ್ಯಾಗಾರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸೈನಿಕರು ಹೊರಗಿನ ಶತ್ರುಗಳಿಂದ ದೇಶ ರಕ್ಷಣೆ ಮಾಡುವರು. ಅದೇ ರೀತಿ ದೇಶದೊಳಗಿನ ಅನೈರ್ಮಲ್ಯತೆಯನ್ನು ಹೋಗಲಾಡಿಸುವ ಕೆಲಸವನ್ನು ಸಫಾಯಿ ಕರ್ಮಚಾರಿಗಳು ಮಾಡುತ್ತಾರೆ. ಇಂತಹ ಕಾರ್ಮಿಕರಿಗೆ ಸರ್ಕಾರದಿಂದ ರೂಪಿಸಿರುವ ಯೋಜನೆಗಳನ್ನು ತಲುಪಿಸುವ ಮೂಲಕ ಇವರ ಶ್ರೇಯೋಭಿವೃದ್ದಿ ಮಾಡಬೇಕಾಗಿದೆ ಎಂದರು.

ರಾಷ್ಟ್ರೀಯ ಸಫಾಯಿ ಕರ್ಮಚಾರಿ ಹಣಕಾಸು ಮತ್ತು ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ದಿ ನಿಗಮದಿಂದ ಸಿಗುವ ಸೌಲಭ್ಯಗಳ ಕುರಿತು ಮಾಹಿತಿ ನೀಡುವ ಮೂಲಕ ಯೋಜನೆಗಳ ಸದುಪಯೋಗ ಮಾಡಿಕೊಳ್ಳಲು ಏರ್ಪಡಿಸಲಾಗಿರುವ ಈ ಕಾರ್ಯಾಗಾರ ಅತ್ಯುತ್ತಮವಾಗಿದ್ದು, ಇದನ್ನು ಸದ್ಬಳಕೆ ಮಾಡಿಕೊಳ್ಳಲು ಕಿವಿಮಾತು ಹೇಳಿದರು.

ಸಫಾಯಿ ಕರ್ಮಚಾರಿಗಳಿಗೆ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ದಿ ನಿಗಮದಿಂದ ಸ್ವಯಂ ಉದ್ಯೋಗ ಯೋಜನೆಯಡಿ ಒಂದು ಲಕ್ಷದವರೆಗೆ ಶೇ. 50 ಸಹಾಯಧನದಡಿ ನೇರ ಸಾಲ, ಉದ್ಯಮ ಶೀಲತಾ ಯೋಜನೆಯಡಿ ರೂ.2 ಲಕ್ಷದವರೆಗೆ ಸಹಾಯಧನದಡಿ ಬ್ಯಾಂಕಿನ ಮೂಲಕ ಸಾಲ, ಸರಕು ಸಾಗಾಣಿಕೆ ವಾಹನ ಖರೀದಿಗೆ ರೂ.3.50 ಲಕ್ಷ ಸಹಾಯಧನದಡಿ ಬ್ಯಾಂಕಿನ ಮೂಲಕ ಸಾಲ, ಮೈಕ್ರೋ ಕ್ರೆಡಿಟ್ ಯೋಜನೆಯಡಿ ಮಹಿಳಾ ಸ್ವಸಹಾಯ ಸಂಘಗಳ ಆರ್ಥಿಕ ಚಟುವಟಿಕೆಗಳಿಗಾಗಿ ಪ್ರತಿ ಸದಸ್ಯರಿಗೆ ರೂ.25 ಸಾವಿರದವರೆಗೆ, ಇದರಲ್ಲಿ ರೂ.15 ಸಾವಿರ ಸಹಾಯಧನ ಹಾಗೂ ರೂ.10 ಸಾವಿರ ಬೀಜಧನವಾಗಿ ನೀಡಲಾಗುತ್ತದೆ.

ಭೂ ಒಡೆತನ ಯೋಜನೆಯಡಿ ವಾಸಸ್ಥಳದಿಂದ 10 ಕಿ.ಮಿ.ಒಳಗೆ 2 ಎಕರೆ ಖುಷ್ಕಿ ಅಥವಾ 1 ಎಕರೆ ನೀರಾವರಿ ಭೂಮಿ ನೀಡುವ ಯೋಜನೆ ಇದಾಗಿದೆ. ಪೌರ ಕಾರ್ಮಿಕ, ಸಫಾಯಿ ಕರ್ಮಚಾರಿ ಮಕ್ಕಳಿಗೆ ಶಿಶುಪಾಲನಾ ಕೇಂದ್ರ ಸ್ಥಾಪನೆಯಡಿ ಪೌರ ಕಾರ್ಮಿಕರು ಕೆಲಸಕ್ಕೆ ತೆರಳುವುದರಿಂದ ಅವರ 6 ತಿಂಗಳ ಮಕ್ಕಳಿಂದ 6 ವರ್ಷದವರೆಗೆ ಮಕ್ಕಳ ಲಾಲನೆ, ಪಾಲನೆ ಮಾಡಲು 50 ಮಕ್ಕಳಿಗೆ ಒಂದು ಘಟಕವಾಗಿ ಶಿಶುಪಾಲನಾ ಘಟಕ ತೆರೆಯಲಾಗು ತ್ತದೆ. ಅರಿವು ಜಾಗೃತಿ, ಕೌಶಲ್ಯಾಭಿವೃದ್ದಿ ತರಬೇತಿ ನೀಡಲಾಗುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ನಾಗರಾಜ್ ಯೋಜನೆಗಳ ವಿವರ ನೀಡಿದರು.

ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಅಭಿವೃದ್ದಿ ನಿಗಮದ ಬಸವರಾಜ್, ಲೀಡ್ ಬ್ಯಾಂಕ್ ಮ್ಯಾನೇಜರ್ ಪ್ರಕಾಶ್, ನಗರಾಭಿವೃದ್ದಿ ಕೋಶದ ಯೋಜನಾ ನಿರ್ದೇಶಕ ಮಹಂತೇಶ್, ರಾಷ್ಟ್ರೀಯ ಸಫಾಯಿ ಕರ್ಮಚಾರಿ ಹಣಕಾಸು ಮತ್ತು ಅಭಿವೃದ್ದಿ ನಿಗಮದ ಸಹಾಯಕ ಪ್ರಧಾನ ವ್ಯವಸ್ಥಾಪಕ ಕೃಷ್ಣಕುಮಾರ್ ಭಾಗವತ್ ಇನ್ನಿತರರು ಉಪಸ್ಥಿತರಿದ್ದರು.

## ಹರಿಹರ: ವಿಪತ್ತು ಮುಂಜಾಗ್ರತಾ ಕಾರ್ಯಗಳ ಅಣಕು ಪ್ರದರ್ಶನ



ಹರಿಹರ, ಫೆ.18- ಇಲ್ಲಿನ ಮರಿಯಾ ನಿವಾಸ ಶಾಲೆಯಲ್ಲಿ ರಾಷ್ಟ್ರೀಯ ವಿಪತ್ತು ಸ್ಪಂದನ ಪಡೆಯ ರಕ್ಷಣಾ ಸಿಬ್ಬಂದಿಗಳು ತುರ್ತು ವಿಪತ್ತು ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕಾರ್ಯಗಳ ಕುರಿತು ಅಣಕು ಪ್ರದರ್ಶನವನ್ನು ನೀಡಿದರು.

ಜಿಲ್ಲಾ ಆಡಳಿತ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ವತಿಯಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಟೀಮ್ ಕಮಾಂಡರ್ ಐಎನ್‌ಎಸ್‌ಪಿ ಅಜಯ್ ಕುಮಾರ್ ಮತ್ತು ಕಮಾಂಡರ್ ಎಎಸ್‌ಐ ಸೋಂಭೀರ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ, ಮೇಜರ್ ಶ್ರೀಕಾಂತ್, ಸಿಪಾಯಿ ದೇವರಾಜ್, ಅರ್ಜುನ್ ಎಸ್. ಕೆ., ಪ್ರದೀಪ್ ಕುಮಾರ್, ಅಲ್ಬಿನ್, ವಿಜಯ್, ಯು, ನವೀನ್‌ಕೃಷ್ಣ ದಾಸ್ ಹಾಗೂ ಸತೀಶ್ ಮತ್ತು ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಫಾದರ್ ಜಾರ್ಜ್ ಮತ್ತು ಕೆ.ಬಿ. ರಾಜಶೇಖರ್ ಕಾಳಿದಾಸ ಶಾಲೆಯ ಕಾರ್ಯದರ್ಶಿ ಪ್ರೀತಿ, ಸಿಆರ್‌ಪಿ ಶ್ರೀಮತಿ ರೂಪ, ಹಾಗೂ ಬಿಆರ್‌ಪಿ ಮಂಜುನಾಥ ಆಡಿನ, ಸಿಆರ್‌ಪಿ ಬಸವರಾಜಯ್ಯ, ಬಿಆರ್‌ಪಿ ವೀರಪ್ಪ, ಶ್ರೀಮತಿ ರತ್ನ, ಲಕ್ಷ್ಮಣ್ ಮತ್ತಿತರರು ಉಪಸ್ಥಿತರಿದ್ದರು.

ಸ್ಕೌಟ್ ಮಾಸ್ಟರ್ ಪರಮೇಶ್ವರಪ್ಪ ಮತ್ತು ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಪ್ರಭಾಕರ್, ಶ್ರೀಮತಿ ಅಶ್ವಿನಿ ಕಾರ್ಯಕ್ರಮವನ್ನು ಸಂಘಟಿಸಿದ್ದರು.

## ವಾಹನಗಳ ನಂಬರ್ ಪ್ಲೇಟ್ ಮೊತ್ತ ಕಡಿತಕ್ಕೆ ಹರಿಹರ ವಿಕರವೇ ಮನವಿ



ಹರಿಹರ, ಫೆ. 18- ಹೆಚ್.ಎಸ್.ಆರ್.ಪಿ. ವಾಹನಗಳ ನಂಬರ್ ಪ್ಲೇಟ್ ಮೊತ್ತವನ್ನು ಕಡಿಮೆಗೊಳಿಸುವಂತೆ ಆಗ್ರಹಿಸಿ, ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ತಹಶೀಲ್ದಾರ್ ಶಶಿಧರಯ್ಯನವರಿಗೆ ಮನವಿ ಸಲ್ಲಿಸಿದರು. ಈ ವೇಳೆ ಮಾತನಾಡಿದ ಮುಖಂಡರು, ನಂಬರ್ ಪ್ಲೇಟ್ ಅಳವಡಿಸುವ ದಿನಾಂಕ ಮುಂದೂಡಿರುವುದು ಸ್ವಾಗತಾರ್ಹ. ಆದರೆ ನಂಬರ್ ಪ್ಲೇಟ್‌ನ ವೆಚ್ಚವು ದುಬಾರಿಯಾಗಿರುತ್ತದೆ. ಇದರಿಂದಾಗಿ ಕೂಲಿ ಮಾಡಿಕೊಂಡು ಜೀವನ ನಿರ್ವಹಣೆ ಮಾಡುವವರಿಗೆ, ರೈತರಿಗೆ ದುಪ್ಪಟ್ಟು ದರವನ್ನು ಭರಿಸುವ ಶಕ್ತಿ ಇರುವುದಿಲ್ಲ. ಆದ್ದರಿಂದ ಶೇ 75 ರಷ್ಟು ಕಡಿಮೆ ಮಾಡುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ವಿಶ್ವ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಉಪಾಧ್ಯಕ್ಷ ನಾಗರಾಜ್ ಭಂಡಾರಿ, ತಾಲ್ಲೂಕು ಗೌರವ ಅಧ್ಯಕ್ಷ ಜಿ.ವಿ. ಪ್ರವೀಣ್, ಅಧ್ಯಕ್ಷ ರಾಹುಲ್ ಮೆಹರ್ವಾಡೆ, ಗಣೇಶ ಐ.ಬಿ., ನಿಂಗರಾಜ್ ಡಿವಿಜಿ. ಗಣೇಶ ಎಂ. ಉಮೇಶ್ ಎ.ವಿ. ಹರೀಶ್ ಹಿಂಡಿ, ಸವೀರ್ ಕಚವಿ ಇತರರು ಹಾಜರಿದ್ದರು.

## 7ನೇ ವೇತನ ಸರ್ಕಾರದಿಂದ ನೌಕರರ ಮೂಗಿನ ಮೇಲೆ ತುಪ್ಪ



ಸರ್ಕಾರಿ ನೌಕರರು ಮತ್ತು ನಿವೃತ್ತ ನೌಕರರಿಗೆ ಅನ್ವಯವಾಗುವ ಏಳನೇ ವೇತನ ಆಯೋಗವನ್ನು ರಚಿಸಿ ವರ್ಷವೇ ಕಳೆದು ಹೋಗಿದೆ.

ಆದರೆ ವರದಿಯನ್ನು ಪಡೆದು ಕಾಲ ಕಾಲಕ್ಕೆ ನೌಕರರಿಗೆ ನೀಡಬೇಕಾದ ವೇತನ ಮತ್ತು ಇತರೆ ಭತ್ಯಗಳನ್ನು ಪರಿಷ್ಕರಿಸಿ ನೀಡುವುದು ಸರ್ಕಾರದ ಕರ್ತವ್ಯವಾಗಿದೆ. ಸರ್ಕಾರ ವರದಿಯನ್ನು ತ್ವರಿತವಾಗಿ ಪಡೆಯದೇ ಆಯೋಗದ ಅವಧಿಯನ್ನು ವಿಸ್ತರಿಸುತ್ತಾ ಹೋಗುತ್ತಿದೆ. ಮೇಲಾಗಿ ನಿನ್ನೆ ಮಂಡಿಸಿದ 2024-25ನೇ ಆಯವ್ಯಯದಲ್ಲಿ ಗಟ್ಟಿಯಾದ ಭರವಸೆಯನ್ನು ನೀಡಿರುವುದಿಲ್ಲ ಮತ್ತು ಇದಕ್ಕೆ ಸಂಬಂಧಿಸಿದಂತೆ ಯಾವುದೇ ಹಣವನ್ನು ಕಾಯ್ದಿರಿಸಿರುವುದಿಲ್ಲ.

ಇದನ್ನೆಲ್ಲ ಗಮನಿಸಿದರೆ ನೌಕರರಿಗೆ 7ನೇ ವೇತನದ ಬಗ್ಗೆ ಅನುಮಾನ ಮೂಡಿದೆ. ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಆಯೋಗದಿಂದ ವರದಿ ಪಡೆದು ಜಾರಿ ಬಗ್ಗೆ ಪರಿಶೀಲಿಸುವುದಾಗಿ ಮಾತ್ರ ಸಣ್ಣ ಭರವಸೆ ನೀಡಿರುವುದು ನೌಕರರ ಮೂಗಿನ ಮೇಲೆ ತುಪ್ಪ ಇಟ್ಟಂತಾಗಿದೆ.

**- ಎಸ್ ಹಾಲೇಶಪ್ಪ**, ನಿ.ಪೂ. ಜಿಲ್ಲಾಧ್ಯಕ್ಷ, ಸರ್ಕಾರಿ ನೌಕರರ ಸಂಘ, ದಾವಣಗೆರೆ

## ರಾಣೇಬೆನ್ನೂರಿನಲ್ಲಿ ಇಂದು ಬಂಜಾರ ಸಮಾಜದ ಪ್ರತಿಭಟನಾ ಮೆರವಣಿಗೆ

ರಾಣೇಬೆನ್ನೂರು, ಫೆ.18- ರಾಜ್ಯದ ಪರಿಶಿಷ್ಟ ಜಾತಿಗಳ ಸ್ಥಿತಿಗತಿ, ಸರ್ಕಾರದ ಸೌಲಭ್ಯಗಳ ಹಂಚಿಕೆ ಮತ್ತು ವಿತರಣೆಯಲ್ಲಿನ ತಾರತಮ್ಯ ಕುರಿತ ಅಧ್ಯಯನದಿಂದ ಬಂಜಾರ, ಭೋವಿ, ಕೊರಮ, ಕೊರಚ, ಅಲೆಮಾರಿ ಸಮುದಾಯದ ಜನರಿಗೆ ತೀವ್ರ ಅನ್ಯಾಯವಾಗುವ ರೀತಿಯಲ್ಲಿದ್ದು, ಸದರಿ ವರದಿಯನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡಬಾರದು ಎಂದು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿ ಇಲ್ಲಿನ ಬಂಜಾರ ಸಮಾಜ ಮನವಿ ಸಲ್ಲಿಸಲಿದೆ ಎಂದು ಕಾಂಗ್ರೆಸ್ ಮುಖಂಡ ಬೀರಪ್ಪ ಲಮಾಣಿ ತಿಳಿಸಿದ್ದಾರೆ.

ಅವಾಸ್ತವಿಕ, ಅಸ್ಪಷ್ಟ ಹಾಗೂ ಅಸಂವಿಧಾನಿಕ ಅಂಶಗಳಿಂದ ಕೂಡಿದ ಈ ವರದಿ ಜಾರಿ ಮಾಡಿದರೆ ಜಾತಿ ಜಾತಿಗಳಲ್ಲಿ ಬಿನ್ನಾಭಿಪ್ರಾಯ ಮೂಡಲಿದ್ದು, ಇದನ್ನು ತಿರಸ್ಕರಿಸಬೇಕೆಂದು ನಾಳೆ ದಿನಾಂಕ 19ರ ಸೋಮವಾರ ಸೇವಾಲಾಲ್ ದೇವಸ್ಥಾನದಿಂದ ಮೆರವಣಿಗೆ ಮೂಲಕ ತೆರಳಿ ತಹಶಿಲ್ದಾರರಿಗೆ ಮನವಿ ಸಲ್ಲಿಸುವುದಾಗಿ ತಿಳಿಸಿದ ಬೀರಪ್ಪ, ಜೊತೆಗೆ ಅಧ್ಯಕ್ಷ ಮಾಯಪ್ಪ ಲಮಾಣಿ, ಚಂದ್ರು ಲಮಾಣಿ, ರಮೇಶ ನಾಯ್ಕ, ಡಾಕೇಶ ಲಮಾಣಿ ಮತ್ತಿತರಿದ್ದರು.



## ನಗರದ ಶ್ರೀ ರಾಘುವೇಂದ್ರ ಸ್ವಾಮಿ ಮಠದಲ್ಲಿ ಮಧ್ವ ರಥೋತ್ಸವ

ದಾವಣಗೆರೆ, ಫೆ. 18- ನಗರದ ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮಧ್ವ ನವಮಿ ಪ್ರಯುಕ್ತ ನೈರ್ಮಲ್ಯ ವಿಸರ್ಜನೆ, ಪಂಚಾಮೃತ ಅಭಿಷೇಕ ಹಾಗೂ ವಿಶೇಷ ಪೂಜಾ ಕಾರ್ಯಕ್ರಮಗಳು ನಿನ್ನೆ ನಡೆದವು. ಪಂಡಿತ್ ಪುರಂದರಚಾರ್ ಹಯಗ್ರೀವ್ ಅವರಿಂದ ಮಧ್ವನವಮಿ ಪ್ರಯುಕ್ತ ಉಪನ್ಯಾಸ ನೀಡಿದರು. ನೆರೆದಿದ್ದ ಭಕ್ತರಿಗೆ ಫಲ, ಮಂತ್ರಾಕ್ಷತೆ ನೀಡಿದರು. ಬಡಾವಣೆಯ ಪ್ರಮುಖ ರಸ್ತೆಗಳಲ್ಲಿ ರಥೋತ್ಸವ. ನಂತರ ತೀರ್ಥಪ್ರಸಾದ ವ್ಯವಸ್ಥೆಯನ್ನು ಶ್ರದ್ಧಾ ಭಕ್ತಿಯಿಂದ ನೆರವೇರಿಸಲಾಯಿತು.

ರಾಯರ ಮಠದ ವ್ಯವಸ್ಥಾಪಕ ತೀರ್ಥಣ್ಣನವರು, ರಾಮ್ ಗೋಪಾಲ್, ಶ್ಯಾಮ್, ಮುರುಳಿಧರ್, ರಾಮಚಂದ್ರರಾವ್, ಅಡುಗೆ ಗೋಪಿನಾಥ, ಭರಮಸಾಗರದ ಬಿ.ಜಿ. ಅನಂತಪದ್ಮನಾಭರಾವ್, ವೆಂಕಟೇಶ್ ನವರತ್ನ, ಅಶೋಕ್, ನಾಗಣ್ಣ, ಭಜನಾ ಮಂಡಳಿಯವರು ಮತ್ತಿತರರಿದ್ದರು.

## 20 ಕ್ಷೇತ್ರಗಳಲ್ಲಿ ಗೆಲುವು ಖಚಿತ : ಸಿಎಂ

ಮಂಡ್ಯ, ಫೆ. 18 - ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಕನಿಷ್ಠ 20 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವುದು ಖಚಿತ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆ ಎದುರಿಸಲು ನಾವು ಸಿದ್ಧರಾಗಿದ್ದೇವೆ. ಬಿಜೆಪಿ ಮುಖಂಡರು ಬರೀ ಬುರುಡೆ ಬಿಡುತ್ತಿದ್ದಾರೆ. ಬಿಜೆಪಿಯ ಸುಳ್ಳುಗಳನ್ನು ಜನ ನಂಬು ವುದಿಲ್ಲ. ಜನ ಈ ಬಾರಿ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದ ಮಾಡುತ್ತಾರೆಂದು ವಿಶ್ವಾಸ ವ್ಯಕ್ತಪಡಿಸಿದರು.



ದಾವಣಗೆರೆ, ಫೆ.18 - ಗದಗ ಜೆ.ಎನ್ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ನಡೆದ ಕಲಾವಿದ ಡಾ. ಜೆಟ್ಟಣ್ಣನವರ್ ರವರ ಪ್ರಾತ್ಯಕ್ಷಿಕೆ ಕಾರ್ಯಕ್ರಮದಲ್ಲಿ ನಗರದ ಕಲಾವಿದ ಮಹಲಿಂಗಪ್ಪ

## ಎಸ್.ಜೆ.ಎಂ. ಪಬ್ಲಿಕ್ ಶಾಲೆಯಲ್ಲಿ 19ನೇ ವರ್ಷದ ವಾರ್ಷಿಕೋತ್ಸವ



ದಾವಣಗೆರೆ, ಫೆ. 18- ಇಲ್ಲಿನ ನಿಟುವಳ್ಳಿಯ ಎಸ್.ಜೆ.ಎಂ. ಪಬ್ಲಿಕ್ ಶಾಲೆಯ 19ನೇ ವರ್ಷದ ವಾರ್ಷಿಕೋತ್ಸವ 'ಜ್ಞಾನ ಕಾರಂಜಿ - 2024' ಕಾರ್ಯಕ್ರಮವು ಶ್ರೀ ಶಿವಯೋಗ ಮಂದಿರದಲ್ಲಿ ಕಳೆದ ವಾರ ನಡೆಯಿತು.

ಶ್ರೀ ಬಸವ ಪ್ರಭು ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಶ್ರೀನಿವಾಸ್ ಕಾರ್ಯಕ್ರಮ ಉದ್ಘಾಟಿಸಿದರು.

ಸಂಸ್ಥೆಯ ಕಾರ್ಯದರ್ಶಿ ಡಿ. ಮಹೇಶ್ವರಪ್ಪ ಅಧ್ಯಕ್ಷತೆ ವಹಿಸಿದ್ದರು. ಮಹಾಂತೇಶ್ ವಿ. ಒಣರೊಟ್ಟಿ ಬಹುಮಾನ ವಿತರಣೆ ಮಾಡಿದರು. ಮುಖ್ಯ ಅತಿಥಿಗಳಾಗಿ ಸಿ.ಆರ್.ಪಿ. ಭರತ್, ಇ.ಎಂ. ಮಂಜುನಾಥ ಹಾಗೂ ರಾಜು ದೊಡ್ಮನಿ ಉಪಸ್ಥಿತರಿದ್ದರು.

ಶ್ರೀಮತಿ ಉಮಾವತಿ ಪ್ರಾರ್ಥಿಸಿದರು. ಶಾಂತಕುಮಾರ್ ನಿರೂಪಿಸಿದರು. ಕೆ.ಎಸ್. ಕೊಟ್ರೇಶ್ ಸ್ವಾಗತಿಸಿದರು. ಹಿರಿಯ ಶಿಕ್ಷಕಿ ಶ್ರೀಮತಿ ಕಮಲ, ಸಂಸ್ಥೆಯ ಅಧ್ಯಕ್ಷರಾದ ಪುಷ್ಪಾ ಮಹೇಶ್ವರಪ್ಪ, ಮಲ್ಲಿಕಾರ್ಜುನ ದೊಡ್ಮನಿ ಉಪಸ್ಥಿತರಿದ್ದರು.

## ಮಹಿಳೆ ಕೊಲೆಗೈದು ದರೋಡೆ ಮಾಡಿದ್ದ ಆರೋಪಿಗೆ ಜೀವಾವಧಿ ಶಿಕ್ಷೆ


ದಾವಣಗೆರೆ, ಫೆ.18- ಮಹಿಳೆಯನ್ನು ಕೊಲೆ ಮಾಡಿ ಆಕೆಯ ಮೈ ಮೇಲಿದ್ದ ಒಡವೆಗಳನ್ನು ದರೋಡೆ ಮಾಡಿದ್ದ ಆರೋಪಿಗೆ ಇಲ್ಲಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ 35 ಸಾವಿರ ರೂ. ದಂಡ ವಿಧಿಸಿದೆ.

ಕಕ್ಕರಗೊಳ್ಳದ ಕರಿಬಸಪ್ಪ ಎಂಬಾತ ದರೋಡೆ ಮಾಡುವ ಉದ್ದೇಶದಿಂದ ತಮ್ಮ ತಾಯಿ ಕೊಲೆ ಮಾಡಿರುವ ಬಗ್ಗೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ತನಿಖೆ ನಡೆಸಿದ ಪೊಲೀಸರು ಆರೋಪಿ ರೇವಣಸಿದ್ದಪ್ಪ ಎಂಬುವವನನ್ನು ವಿಚಾರಣೆಗೆ ಒಳಪಡಿಸಿದಾಗ ಈತ ಮೃತೆ ಗೌರಮ್ಮನವರಿಗೆ 11.80 ಲಕ್ಷ ರೂ. ಹಣ ಸಾಲ ವಾಪಸ್ ಕೊಡಬೇಕಾಗಿದ್ದರಿಂದ ಹಾಗೂ ಗೌರಮ್ಮನವರು ಹಣ ವಾಪಸ್ ಕೊಡು ಎಂದು ಪೀಡಿಸುತ್ತಿದ್ದರಿಂದ 2021ರ ಜುಲೈ 18ರಂದು ರಾತ್ರಿ ಕೊಲೆ ಮಾಡಿ ಮೃತಳ ಮೈಮೇಲಿದ್ದ ಒಡವೆ ದರೋಡೆ ಮಾಡಿದ್ದಾಗಿ ತನಿಖೆಯಿಂದ ದೃಢಪಟ್ಟಿತ್ತು.

ತನಿಖಾಧಿಕಾರಿ ಲಿಂಗನಗೌಡ ನೆಗಳೂರು ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಪ್ರವೀಣ್ ಕುಮಾರ್ ಅವರು ಆರೋಪ ಸಾಬೀತಾಗಿದ್ದರಿಂದ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಪಿರ್ಯಾದಿ ಪರ ಸರ್ಕಾರಿ ವಕೀಲರಾದ ಜಯ್ಯಪ್ಪ ನ್ಯಾಯ ಮಂಡನೆ ಮಾಡಿದ್ದರು.

# ಬಸವಣ್ಣ ಸಾರ್ವಕಾಲಿಕ ಕ್ರಾಂತಿ ಪುರುಷ



### ಜಿಲ್ಲಾ ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ

ದಾವಣಗೆರೆ, ಫೆ. 18 - 12ನೇ ಶತಮಾನದ ಕ್ರಾಂತಿ ಪುರುಷ, ಸಮಾಜ ಸುಧಾರಕ, ವಚನಗಳ ಮೂಲಕ ಜನರಲ್ಲಿ ಜ್ಞಾನದ ದೀವಿಗೆ ಬೆಳಗಿಸಿದ ಮಹಾನ್ ಮಾನವತಾವಾದಿ, ಅಸಂಖ್ಯಾತ ವಚನಗಳ ಮೂಲಕ ಸಾಹಿತ್ಯ ಲೋಕಕ್ಕೆ ಅನುಪಮ ಕೊಡುಗೆ ನೀಡಿರುವ ಬಸವಣ್ಣ, ಸಾರ್ವಕಾಲಿಕ ಕ್ರಾಂತಿ ಪುರುಷ ಹಾಗೂ ಸಮಸ್ತ ವಿಶ್ವಕ್ಕೆ ಸಾಂಸ್ಕೃತಿಕ ರಾಯಭಾರಿಯಾಗಿದ್ದಾರೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ಬಣ್ಣಿಸಿದರು.

ಅವರಿಂದು ಕರ್ನಾಟಕ ಸರ್ಕಾರದ ಆದೇಶದ ಅನುಸಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ರಾಷ್ಟ್ರಕವಿ ಕುವೆಂಪು ಕನ್ನಡ ಭವನದಲ್ಲಿ ಬಸವಣ್ಣನವರ ಭಾವಚಿತ್ರ ಅನಾವರಣಗೊಳಿಸಿ ಮಾತನಾಡಿದರು.

ಇವನಾರವ,ಇವನಾರವ ಎಂದೆನಿಸದೇ ಇವ ನಮ್ಮವ ಇವ ನಮ್ಮವ ಎಂದೆನಿಸು ಎನ್ನುವ ಬಸವಣ್ಣನವರ ಸಮ ಸಮಾಜದ ನಿರ್ಮಾಣದ ಕನಸಿನ ಸಂದೇಶದ ಅನುಸಾರವಾಗಿ ಕನ್ನಡ ಸಾಹಿತ್ಯ ಪರಿಷತ್ತು ಪ್ರತಿಯೊಬ್ಬ ಕನ್ನಡಿಗನನ್ನು ಅಪ್ಪಿಕೊಂಡು ಕಾರ್ಯ ನಿರ್ವಹಿಸುತ್ತಿದೆ. ಮೇಲ್ವರ್ಗದ ಸಂಪ್ರದಾಯಿಗಳ ವಿರೋಧವನ್ನು ಲೆಕ್ಕಿಸದೇ 12ನೇ ಶತಮಾನದಲ್ಲಿ ಅವರು ಸಾರಿದ ತತ್ವಗಳು, ಚಿಂತನೆಗಳು, ವಚನಗಳು ಇಂದಿಗೂ ಪ್ರಸ್ತುತವಾಗಿವೆ ಮತ್ತು ಆದರ್ಶ ಪ್ರಾಯವಾಗಿವೆ. ಜಾತಿ ರಹಿತವಾದ, ವರ್ಗ ರಹಿತವಾದ, ಮೌಢ್ಯ ರಹಿತವಾದ, ಶೋಷಣೆ ರಹಿತವಾದ ಸಮ-ಸಮಾಜ ನಿರ್ಮಾಣದ ಕನಸುಗಳನ್ನು ಹೊತ್ತಿದ್ದ ಬಸವಣ್ಣ, ವಚನಗಳ ಮೂಲಕ ವಿಶ್ವ ಸಾಹಿತ್ಯಿಕ ಲೋಕಕ್ಕೆ ನೀಡಿರುವ ಕೊಡುಗೆ ಅನನ್ಯವಾದುದು. ಹಾಗಾಗಿ ಕರ್ನಾಟಕ ರಾಜ್ಯ ಸರ್ಕಾರವು ಅವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವುದು ಅತ್ಯಂತ ಸೂಕ್ತವಾದ ನಿರ್ಧಾರವಾಗಿದೆ ಎಂದು ವಾಮದೇವಪ್ಪ ರಾಜ್ಯ ಸರಕಾರವನ್ನು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಬಿ.ದಿಳ್ಯಪ್ಪ, ರೇವಣಸಿದ್ದಪ್ಪ ಅಂಗಡಿ, ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ, ಸಂಘಟನಾ ಕಾರ್ಯದರ್ಶಿಗಳಾದ ಸಿ.ಜಿ. ಜಗದೀಶ್, ಜಿಗಳಿ ಪ್ರಕಾಶ್, ತಾಲ್ಲೂಕು ಅಧ್ಯಕ್ಷರುಗಳಾದ ಡಿ.ಎಂ. ಮಂಜುನಾಥಯ್ಯ, ಮಧುಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯರಾದ ಎನ್.ಎಸ್. ರಾಜು, ಪ್ರಸಾದ್ ಬಂಗೇರ, ಜ್ಯೋತಿ ಉಪಾಧ್ಯಾಯ, ಮಲ್ಲಮ್ಮ, ರುದ್ರಾಕ್ಷಿ ಬಾಯಿ, ಸತ್ಯಭಾಮ ಮಂಜುನಾಥ್, ಬಿ.ಎಂ. ಭೈರೇಶ್ವರ, ರಿಯಾಜ್ ಅಹಮದ್ ಮತ್ತಿತರರು ಉಪಸ್ಥಿತರಿದ್ದರು.

## ಹೊನ್ನಾಳಿ : ಇಂದಿನಿಂದ ದಿಂಡಿ ಮಹೋತ್ಸವ

ದೊಡ್ಡಪೇಟೆ ಪಾಂಡುರಂಗ ದೇವಸ್ಥಾನದಲ್ಲಿ ನಾಮದೇವ ಸಿಂಪಿ ಸಮಾಜದಿಂದ ಇಂದಿನಿಂದ ಮೂರು ದಿನಗಳ ಕಾಲ 106 ನೇ ದಿಂಡಿ ಮಹೋತ್ಸವ ಜರುಗಲಿದೆ. ಇಂದು ಸಂಜೆ 6 ಗಂಟೆಗೆ ಪ್ರತಿಭಾ ಪುರಸ್ಕಾರ ಸಮಾರಂಭ, ಸಮಾಜದ ಅಧ್ಯಕ್ಷ ಶ್ರೀಹರಿ ಹೋವಳೆ ಅಧ್ಯಕ್ಷತೆ ವಹಿಸುವರು.

ನಾಳೆ ಮಂಗಳವಾರ ಏಕಾದಶಿಯ ದಿನದಂದು ಬೆಳಿಗ್ಗೆ ಪಂಚಾಮೃತ ಅಭಿಷೇಕ, ಮಧ್ಯಾಹ್ನ ಪ್ರವಚನ, ನಾಮಜಪ, ಸಂಜೆ ಕೀರ್ತನೆ, ಮಹಿಳಾ ಮಂಡಳಿಯಿಂದ ಭಜನೆ ರಾತ್ರಿ 10 ಗಂಟೆಗೆ ಶಿರಸಿಯ ರವಿ ಮುರೂರ್ ಅವರಿಂದ ಸಂತವಾಣಿ ನಂತರ ಅಖಂಡ ಜಾಗರಣೆ ಕಾರ್ಯಕ್ರಮ ನಡೆಯಲಿದೆ.

ನಾಡಿದ್ದು ಬುಧವಾರ ಬೆಳಿಗ್ಗೆ ಜ್ಞಾನೇಶ್ವರಿ ಪಾರಾಯಣದ ಸಾಂಗತಾ ಕಾರ್ಯಕ್ರಮ, 8 ಗಂಟೆಗೆ ವಿಠಲ ರುಖುಮಾಯಿ ರಥೋತ್ಸವ ರಾಜಬೀದಿ ಗಳಲ್ಲಿ ಮೆರವಣಿಗೆ ಜರುಗಲಿದೆ.

## ಹರಿಹರದಲ್ಲಿ ಇಂದು ಅಪ್ರೆಂಟಿಸ್ ಮೇಳ

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಿಂದ ಡಿಪ್ಲೋಮಾ, ಐಟಿಐ ಪಾಸಾದವರಿಗೆ ಜಿಲ್ಲಾ ಮಟ್ಟದ ರಾಷ್ಟ್ರೀಯ ಅಪ್ರೆಂಟಿಸ್ ಮೇಳವು ಇಂದು ನಡೆಯಲಿದೆ. ಈ ಶಿಶಿಕ್ಷು ಮೇಳದಲ್ಲಿ ಜಿಲ್ಲೆಯ ಐ.ಟಿ.ಐ, ಡಿಪ್ಲೋಮಾ ಪಾಸ್ ಆದ ನಿರುದ್ಯೋಗಿ ಯುವಕ, ಯುವತಿಯರು ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳು ಸಹ ಭಾಗವಹಿಸಬಹುದು. ಸಂಪರ್ಕಿಸಿ ಮೊ. 9480085001, 9945049894, 9743104863.

# ಕನಿಷ್ಠ ಬೆಂಬಲ ಬೆಲೆ ಕಾಯ್ದೆಗೆ ಆಗ್ರಹ

## ನಲ್ಲೂರಿನಿಂದ ಇಂದು ಬೃಹತ್ ಪಾದಯಾತ್ರೆ, 22ರಂದು ಡಿಸಿ ಕಚೇರಿಗೆ ಮುತ್ತಿಗೆ

ದಾವಣಗೆರೆ, ಫೆ.18- ಭತ್ತದ ಬೆಲೆ ಕುಸಿತದಿಂದ ರೈತರು ಹಾಗೂ ಮಾರಾಟಗಾರರು ಕಂಗಾಲಾಗಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕನಿಷ್ಠ ಬೆಂಬಲ ಬೆಲೆ ಕಾಯ್ದೆ ರೂಪಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಆಗ್ರಹಿಸಿದ್ದಾರೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಬಡವರಿಗೆ ಉಚಿತವಾಗಿ ಅಕ್ಕಿ ನೀಡುವ ಹಾಗೂ ಕೇಂದ್ರ ಸರ್ಕಾರ 29 ರೂ. ಗಳಂತೆ ಅಕ್ಕಿ ವಿತರಣೆ ಮಾಡುತ್ತಿರುವುದರಿಂದ ರಾಜ್ಯದಲ್ಲಿ ಭತ್ತದ ದರ ದಿಢೀರ್ ಕುಸಿತ ಕಂಡಿದೆ.

ಈಗಾಗಲೇ ರೈತರಿಂದ ಭತ್ತ ಖರೀದಿಸಿರುವ ಖರೀದಿದಾರರು, ಆರ್ಥಿಕ ಸಂಕಷ್ಟದಿಂದ ಹಣ ನೀಡಲು ಮುಂದಾಗುತ್ತಿಲ್ಲ. ಇದರಿಂದಾಗಿ ಭತ್ತ ಮಾರಾಟ ಮಾಡಿರುವ ರೈತರೂ ಸಂಕಷ್ಟದಲ್ಲಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ರಾಜ್ಯ ಹಾಗೂ ಕೇಂದ್ರ ಸರ್ಕಾರ ಉಚಿತ ಹಾಗೂ ಕಡಿಮೆ ದರದಲ್ಲಿ ಅಕ್ಕಿ ವಿತರಿಸಲು ನಮ್ಮ ಅಭ್ಯಂತರವಿಲ್ಲ. ಆದರೆ ಇದಕ್ಕೂ ಮೊದಲು ರೈತರ ಬೆಳೆಗೆ ಈ ನಿರ್ಧಾರ ಅನುಕೂಲವೇ ಎಂದು ಗಮನದಲ್ಲಿಟ್ಟುಕೊಂಡು ಘೋಷಣೆ ಮಾಡಬೇಕು ಎಂದರು.

ಕೇಂದ್ರ ಸರ್ಕಾರ ಭತ್ತಕ್ಕೆ 2180 ರೂ. ಬೆಂಬಲ ಬೆಲೆ ಘೋಷಣೆ ಮಾಡಿದೆ. ಇದಕ್ಕೆ ಕನಿಷ್ಠ ಬೆಂಬಲ ಬೆಲೆ ಜಾರಿಗೊಳಿಸಬೇಕು. ಬೆಂಬಲ ಬೆಲೆಗಿಂತ ಕಡಿಮೆ ದರಕ್ಕೆ ಖರೀದಿಸಿದವರ ಪರವಾನಗಿ ರದ್ದು ಹಾಗೂ ದಂಡ ವಿಧಿಸುವ ಕಾಯ್ದೆ ಜಾರಿಯಾಗಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಬಗರ್ ಹುಕ್ಕುಂ ಅರ್ಜಿಗಳನ್ನು ಶೀಘ್ರ ಇತ್ಯರ್ಥಗೊಳಿಸಿ ಹಕ್ಕುಪತ್ರ ನೀಡಬೇಕು. ಫಾರಂ ನಂ.57ರಲ್ಲಿನ ಅಂಶಗಳು ಮಾರಕವಾಗಿದ್ದು, ಅವುಗಳನ್ನು ಕೈ ಬಿಡಬೇಕು ಎಂದು ಒತ್ತಾಯಿಸಿದರು.

ಚನ್ನಗಿರಿ ತಾಲ್ಲೂಕಿನಲ್ಲಿ ಎಪಿಎಂ ಮಿಲ್‌ಗೆ ಲೀಸ್‌ಗೆ ಭೂಮಿ ನೀಡಲಾಗಿದ್ದು, ಲೀಸ್ ಅವಧಿ ಈಗಾಗಲೇ ಮುಗಿದಿದ್ದು, ಮತ್ತೆ ಲೀಸ್ ಮುಂದುವರೆಸದೆ, ಈ ಭೂಮಿಯಲ್ಲಿ ಸಾಗುವಳಿ ಮಾಡುತ್ತಿದ್ದ ರೈತರಿಗೆ ಬಗರ್ ಹುಕ್ಕುಂ ಹಕ್ಕುಪತ್ರ ನೀಡಬೇಕು ಎಂದರು.

ಜಗಳೂರು ತಾಲ್ಲೂಕಿನಲ್ಲಿ 80ಕ್ಕೂ ಹೆಚ್ಚು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಜಿಲ್ಲಾಡಳಿತ ಬೋರ್‌ವೆಲ್‌ಗಳನ್ನು ಕೊರೆದು, ನೀರು ವಿತರಣೆಗೆ ಮುಂದಾಗಬೇಕು. ದನಕರುಗಳಿಗಾಗಿ ಗೋಶಾಲೆ ಆರಂಭಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರ ಅಕ್ರಮ-ಸಕ್ರಮ ವಿದ್ಯುತ್ ಯೋಜನೆ ಮುಂದುವರೆಸಬೇಕು. ನಿವೇಶನ ರಹಿತ ಸಾವಿರಾರು ಕುಟುಂಬಗಳಿದ್ದು, ಜಿಲ್ಲಾ ಪಂಚಾಯ್ತಿಂದ ನಿವೇಶನ ನೀಡಬೇಕು ಎಂದು ಒತ್ತಾಯಿಸಿದರು.

ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಾಳೆ ದಿನಾಂಕ 19ರಂದು ಚನ್ನಗಿರಿ ತಾಲ್ಲೂಕು ನಲ್ಲೂರು ಗ್ರಾಮದಿಂದ ಬೃಹತ್ ಪಾದಯಾತ್ರೆ ಮೂಲಕ ಇದೇ ದಿನಾಂಕ 22ರಂದು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕೈದಾಳ್ ರವಿಕುಮಾರ್, ಯಲೋದಹಳ್ಳಿ ರವಿಕುಮಾರ್, ಯರವನಾಗತಿಹಳ್ಳಿ ಬಾಲಾಜಿ, ಅಸ್ತಾಫನಹಳ್ಳಿ ಗಂಡುಗಲಿ, ನಿಟುವಳ್ಳಿ ಪೂಜಾರ್ ಅಂಜಿನಪ್ಪ, ಕಲ್ಕುಂಟೆ ಬಸಣ್ಣ, ಕೋಗಲೂರು ಕುಮಾರ್, ಹೂವಿನಮಡು ನಾಗರಾಜ್, ಕೃಷ್ಣಮೂರ್ತಿ, ಹನುಮಂತ್, ಪೂಜಾರ್ ನಾಗಣ್ಣ ಇತರರಿದ್ದರು.

## ಬಸವ ಜಯಂತಿ ಪ್ರಾರಂಭಿಸಿ ದಾವಣಗೆರೆಗೆ ಕೀರ್ತಿ ನೀಡಿದ ಹರ್ಡೇಕರ್ ಮಂಜಪ್ಪ : ಬಸವಪ್ರಭು ಶ್ರೀ

ದಾವಣಗೆರೆ, ಫೆ. 18 - ಬಸವ ಜಯಂತಿಯನ್ನು ಪ್ರಾರಂಭಿಸಿ ದಾವಣಗೆರೆಗೆ ಹೊಸ ಕೀರ್ತಿಯನ್ನು ನೀಡಿದವರು ಹರ್ಡೇಕರ್ ಮಂಜಪ್ಪನವರು ಎಂದು ಮುರುಘಾ ಮಠದ ಉಸ್ತುವಾರಿಗಳಾದ ಶ್ರೀ ಬಸವಪ್ರಭು ಸ್ವಾಮೀಜಿ ಶ್ಲಾಘಿಸಿದರು.

ನಗರದ ಹರ್ಡೇಕರ್ ಮಂಜಪ್ಪನವರ ವೃತ್ತ ದಲ್ಲಿ ಏರ್ಪಡಿಸಿದ್ದ ಕರ್ನಾಟಕದ ಹರ್ಡೇಕರ್ ಮಂಜಪ್ಪನವರ 138 ನೇ ಜಯಂತಿ ಆಚರಣೆ ಯ ನಿಮಿತ್ತ ಅವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ನೇತೃತ್ವ ವಹಿಸಿಕೊಂಡು ಶ್ರೀಗಳು ಮಾತನಾಡಿದರು.

ಹರ್ಡೇಕರ್ ಮಂಜಪ್ಪನವರು ಒಬ್ಬ ವಿಭೂತಿ ಪುರುಷರು, ಹಣೆಯ ಮೇಲೆ ಬಸವ ಪ್ರಜ್ಞೆ, ಮೈಮೇಲೆ ಗಾಂಧಿ ಪ್ರಜ್ಞೆಗಳನ್ನು ಸಂಕೇತಿಸುವಂತೆ ವಿಭೂತಿ - ಖಾದಿಗಳ ಆದರ್ಶದ ಸಂಗಮ ವಾಗಿದ್ದಾರೆ. ಸಮಾನತೆಯ ಹರಿಕಾರ ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಪ್ರಾರಂಭಿಸುವ ಮೂಲಕ ದಾವಣಗೆರೆಗೆ ಹೊಸ ಕೀರ್ತಿ ಬಂದಿದೆ. ಇಲ್ಲಿಯವರೆಗೆ ಬೆಣ್ಣೆ ನಗರಿ, ವಿದ್ಯಾ ನಗರಿ ಎಂದು ಪ್ರಸಿದ್ಧಿ ಪಡೆದಿತ್ತು. ಈಗ ಬಸವ ಜಯಂತಿಯ ಗಂಗೋತ್ರಿ ನಗರಿ ಎಂದು ಖ್ಯಾತಿಯನ್ನು ಗಳಿಸಿದೆ. ಅದಕ್ಕೆ ಕಾರಣ ಹರ್ಡೇಕರ್ ಮಂಜಪ್ಪನವರು ಆಗಿದ್ದಾರೆ ಎಂದು ಸ್ಮರಿಸಿದರು.

ಸ್ವಾತಂತ್ರ್ಯದ ಚಳವಳಿಗಾಗಿ ಬಸವ ಜಯಂತಿಯನ್ನು 1913 ರಲ್ಲಿ ದಾವಣಗೆರೆ ವಿರಕ್ತಮಠದಲ್ಲಿ ಅಂದಿನ ಮಠಾಧೀಶರಾದ ಶ್ರೀ ಮೃತ್ಯುಂಜಯ ಅಪ್ಪಗಳೊಂದಿಗೆ ಪ್ರಾರಂಭಿಸಿದರು. ಅಂದಿನಿಂದ ಪ್ರಾರಂಭವಾದ ಬಸವ ಜಯಂತಿ ಇಂದು ವಿಶ್ವದಾದ್ಯಂತ ನಡೆಯಲಿಕ್ಕೆ ಹರ್ಡೇಕರ್ ಮಂಜಪ್ಪನವರು ಕಾರಣರಾಗಿದ್ದಾರೆ. ಅಷ್ಟೇ ಅಲ್ಲದೇ ಧನುರ್ಧಾರಿ ಪತ್ರಿಕೆಯನ್ನು ಪ್ರಾರಂಭಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಸಾವಿರಾರು ಯುವಕರನ್ನು ಸಂಘಟನೆ ಮಾಡಿ, ಜಾಗೃತಿ ಮೂಡಿಸಿದರು. ಅವರಲ್ಲಿರುವ ದುಶ್ಚಟಗಳನ್ನು ಬಿಡಿಸಿ ಖಾದಿ ಬಟ್ಟೆಗಳನ್ನು ತಯಾರಿಸುವ ವಿದ್ಯೆಯನ್ನು ಕಲಿಸಿ, ಸ್ವದೇಶಿ ಚಳುವಳಿಯನ್ನು ಪ್ರಾರಂಭಿಸಿದರು. ಮಹಿಳೆಯರಿಗೆ ಅಕ್ಷರ ಅಭ್ಯಾಸವನ್ನು ಮಾಡಿಸಿದರು. ರಾಟಿ ಉದ್ಯೋಗವನ್ನು ಕಲಿಸಿದರು. ಮಹಿಳೆಯರ ಜಾಗೃತಿಗಾಗಿ 1935 ರಲ್ಲಿ ವೈರಾಗ್ಯ ನಿಧಿ ಅಕ್ಕಮಹಾದೇವಿಯವರ ಜಯಂತಿ ಪ್ರಾರಂಭಿದರು. ಸ್ವದೇಶಿ ಚಳುವಳಿ, ರಾಷ್ಟ್ರೀಯತೆ, ಸ್ವಚ್ಛತಾ ಕಾರ್ಯ, ಆರೋಗ್ಯ ಸೂತ್ರ, ಬಸವೇಶ್ವರ ಸೇವಾದಳ ಮುಂತಾದ ಕಾರ್ಯಗಳನ್ನು ಮಾಡಿ ಇತಿಹಾಸ ವಾಗಿದ್ದಾರೆ. ಅವರು ಮಾಡಿರುವ ಕಾರ್ಯಗಳನ್ನು ನಾವು ಸ್ಮರಿಸುತ್ತಾ, ಅವರ ಆದರ್ಶಗಳನ್ನು ಪಾಲಿಸೋಣ ಎಂದು ಸ್ವಾಮೀಜಿ ಹೇಳಿದರು.

ಸಮಾರಂಭದಲ್ಲಿ ಬಸವಕಲಾ ಲೋಕದ ಶಶಿಧರ್, ವೀರಶೈವ ತರುಣ ಸಂಘದ ಕಣಕುಪ್ಪಿ ಮುರುಗೇಶಪ್ಪ, ಜಾಗತಿಕ ಲಿಂಗಾಯತ ಮಹಾ ಸಭಾದ ರುದ್ರೇಗೌಡ, ಬಸವ ಬಳಗದ ವೀಣಾ ಮಂಜುನಾಥ್, ಚಂದ್ರಕಲಾ ಹಾಗೂ ಇತರರು ಇದ್ದರು.



**ಹರ್ಡೇಕರ್ ಮಂಜಪ್ಪನವರ 138ನೇ ಜಯಂತ್ಯೋತ್ಸವ**

## ಕೆಟಿಜೆ ನಗರ ಠಾಣೆಯಲ್ಲಿ ರೌಡಿ ಶೀಟರ್‌ಗಳ ಪರೇಡ್



ದಾವಣಗೆರೆ, ಫೆ. 18- ನಗರದ ಕೆ.ಟಿ. ಜಂಬಣ್ಣ ನಗರ ಪೊಲೀಸ್ ಠಾಣೆ ಆವರಣದಲ್ಲಿ ಎಸ್ಪಿ ಉಮಾ ಪ್ರಶಾಂತ್ ಅವರು ಠಾಣಾ ವ್ಯಾಪ್ತಿಯ ರೌಡಿ ಶೀಟರ್‌ಗಳ ಪರೇಡ್ ನಡೆಸಿದರು.

ಬರುವ ಮಾರ್ಚ್ ತಿಂಗಳಿನಲ್ಲಿ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಹಾಗೂ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಈ ಪರೇಡ್ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್ಪಿ ಉಮಾ ಪ್ರಶಾಂತ್, ಜಿಲ್ಲೆಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ಕಂಡು ಬಂದರೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದಾಗಿ ರೌಡಿ ಶೀಟರ್‌ಗಳಿಗೆ ಎಚ್ಚರಿಕೆ ನೀಡಿ, ಸನ್ನಡತೆಯಿಂದ ಜೀವನ ನಡೆಸುವಂತೆ ಹೇಳಿದರು. ನಗರ ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ, ಕೆಟಿಜೆ ನಗರ ಠಾಣೆ ಇನ್ಸ್‌ಪೆಕ್ಟರ್ ಸುನೀಲ್ ಕುಮಾರ್, ಠಾಣೆಯ ಸಿಬ್ಬಂದಿ ಉಪಸ್ಥಿತರಿದ್ದರು.

## ಎಲೆಬೇತೂರಿನಲ್ಲಿ ದುಂಡಿ ಬಸವೇಶ್ವರ ದೇವಸ್ಥಾನ ಉದ್ಘಾಟನೆ



ದಾವಣಗೆರೆ ಸಮೀಪದ ಎಲೆಬೇತೂರು ಗ್ರಾಮದ ಮಾಳಿಗೇರ ಬಸವರಾಜಪ್ಪ ಕುರುವತ್ತೆಪ್ಪ ಅವರ ಮನೆಯ ಆವರಣದಲ್ಲಿರುವ ಶ್ರೀ ದುಂಡಿ ಬಸವೇಶ್ವರ ದೇವಸ್ಥಾನ ಉದ್ಘಾಟನೆ, ದೇವರ ಪ್ರತಿಷ್ಠಾಪನೆ ಹಾಗೂ ನೂತನ ಗೋಪುರ ಕಳಸಾರೋಹಣ ಕಾರ್ಯಕ್ರಮವು ಇಂದು ಜರುಗಲಿದೆ.

ಇಂದು ಬೆಳಿಗ್ಗೆ 6.30 ಗಂಟೆಗೆ ಶ್ರೀ ದುಂಡಿ ಬಸವೇಶ್ವರ ದೇವರಿಗೆ ಪಂಚಾಮೃತ ಅಭಿಷೇಕ, ದೇವರ ಗರ್ಭಗುಡಿ ಪ್ರವೇಶ, ಸ್ವಾಮಿಗೆ ವಿಶೇಷವಾಗಿ ಬಿಲ್ವಪತ್ರೆ ಹಾಗೂ ಪುಷ್ಪಾಲಂಕಾರ, ಪೂರ್ಣಾಹುತಿ ಹೋಮ, ಮಂಗಳಾರತಿ, ಗೋಪುರ ಕಳಸಾರೋಹಣ ನಂತರ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ನಡೆಯಲಿದೆ.

## ಇಲಾಖೆಗಳ ಸಮನ್ವಯತೆಯಿಂದ ಮಕ್ಕಳ ರಕ್ಷಣೆ ಸಾಧ್ಯ



**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್.ಹೆಗಡೆ ಅಭಿಮತ**

ದಾವಣಗೆರೆ, ಫೆ.18 - ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆಗಳು ಸಮನ್ವಯತೆಯಿಂದ ಕೆಲಸ ಮಾಡಿದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಅವರ ಮೇಲಾಗುವ ಘಟನೆಗಳನ್ನು ತಡೆಯಲು ಸಾಧ್ಯ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ವಿವಿಧ ಇಲಾಖೆಗಳ ಸಂಯುಕ್ತ ಆಶ್ರಯ ದಲ್ಲಿ ತುಂಗಭದ್ರಾ ಸಭಾಂಗಣದಲ್ಲಿ ನಿನ್ನೆ ಏರ್ಪ ಡಿಸಲಾದ ಪೋಕ್ಸೋ ಕಾನೂನು, ಬಾಲ್ಯ ವಿವಾಹ ತಡೆ ಕಾಯ್ದೆ ಮತ್ತು ಬಾಲನ್ಯಾಯ ವಿಷಯಗಳ ಕುರಿತು ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಏರ್ಪಡಿಸಿದ ಕಾರ್ಯಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ್, ಹಿರಿಯ ಸಿವಿಲ್ ನ್ಯಾಯಾಧೀಶೆ ಹೆಚ್.ಕೆ. ರೇಷ್ಮ, ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ವಾಸಂತಿ ಉಪ್ಪಾರ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಶಿವಾಜಿ ಮಹಾರಾಜರ 397ನೇ ಜಯಂತೋತ್ಸವ



ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘ ಮತ್ತು ಕ್ಷತ್ರಿಯ ಮರಾಠ ಸಮಾಜದ ವತಿಯಿಂದ ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ 397ನೇ ಜಯಂತ್ಯೋತ್ಸವ ಕಾರ್ಯಕ್ರಮವು ಇಂದು ಬೆಳಿಗ್ಗೆ 11ಕ್ಕೆ ನಗರದ ಕೃಷ್ಣ ಭವಾನಿ ಕಲ್ಯಾಣ ಮಂಟಪದ ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ ವೇದಿಕೆಯಲ್ಲಿ ನಡೆಯಲಿದೆ. ಶ್ರೀ ಬಸವಪ್ರಭು ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಜರುಗುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಿ. ಮಾಲತೇಶರಾವ್ ಜಾಧವ್ ವಹಿಸಲಿದ್ದಾರೆ. ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಜಿ.ಪಂ. ಸಿಇಓ ಡಾ. ಬಿ. ಸುರೇಶ್ ಇಟ್ನಾಳ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಅಪರ ಜಿಲ್ಲಾಧಿಕಾರಿ ಸೈಯಿದಾ ಅಫ್ರಿನ್ ಬಾನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಕ್ಷತ್ರೀಯ ಮರಾಠ ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷ ಯಶವಂತರಾವ್ ಜಾಧವ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

## ಶ್ರೀಕ್ಷೇತ್ರ ಕಡಲಬಾಳ : ಶ್ರೀ ಮಧ್ವನವಮಿ ರಥೋತ್ಸವ



ದಾವಣಗೆರೆ ತಾಲ್ಲೂಕಿನ ಶ್ರೀ ಕ್ಷೇತ್ರ ಕಡಲಬಾಳು, ಶ್ರೀ ಹನುಮ ಭೀಮ ಮಧ್ವ ಸೇವಾ ಚಾರಿಟಬಲ್ ಟ್ರಸ್ಟ್‌ನಿಂದ ಇತಿಹಾಸ ಪ್ರಸಿದ್ಧ ಶ್ರೀ ಮಧ್ವನವಮಿ, ರಥೋತ್ಸವದ ಅಂಗವಾಗಿ ಇಂದು ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ಇಂದು ಬೆಳಿಗ್ಗೆ ಪಂಚಾಮೃತ ಅಭಿಷೇಕ, ಪುಷ್ಪಾ ಲಂಕಾರದ ನಂತರ ಅವಭೃತ ಸ್ನಾನ (ಓಕುಳಿ), ಬೆಳಿಗ್ಗೆ 8.30ಕ್ಕೆ ವಾಯುಸ್ತುತಿ ಪುನಶ್ಚರಣ ಹಾಗೂ ರಾಘವೇಂದ್ರ ಅಷ್ಟೋತ್ತರ, ಬೆಳಿಗ್ಗೆ 10.30ಕ್ಕೆ ಶ್ರೀ ಸತ್ಯ ನಾರಾಯಣ ಪೂಜೆ ನಡೆಯುವುದು ನಂತರ 11.30 ರಿಂದ ವೇ॥ ಪಂ. ಮಣ್ಣೂರು ರಾಮ ಚಂದ್ರಚಾರ್ ಇವರಿಂದ ಪ್ರವಚನ ನಡೆಯು ವುದು. ಮಧ್ಯಾಹ್ನ 1 ಗಂಟೆಗೆ ಮಹಾಮಂಗಳಾರತಿ ನಂತರ ತೀರ್ಥ ಪ್ರಸಾದ ವಿನಿಯೋಗವಿದೆ. ಈ ಕಾರ್ಯಕ್ರಮವನ್ನು ವೇ॥ ಪಂ॥ ಕಡೂರು ಪ್ರಾಣೇಶಾಚಾರ್ ವಹಿಸುವರು ಎಂದು ಎಸ್. ಎಂ. ಪಿ. ಸ್ಟೋನ್ ಕ್ರಷರ್ ಮಾಲೀಕ ಎಚ್. ಮರುಳಸಿದ್ದೇಶ್ ತಿಳಿಸಿದ್ದಾರೆ.


**ಬೇಕಾಗಿದ್ದಾರೆ**

ಆಫೀಸಿನಲ್ಲಿ ಕೆಲಸಕ್ಕೆ ಅಟೆಂಡರ್ಸ್ (ಹುಡುಗರು) ಬೇಕಾಗಿದ್ದಾರೆ.

ಊಟ, ವಸತಿ, ಸಂಬಳ ಕೊಡುತ್ತೇವೆ.

ಸ್ಥಳ : ಮೈಸೂರು (ವಿದ್ಯಾಸಂಸ್ಥೆಗೆ)

ವಯಸ್ಸು : 35 ವರ್ಷದ ಒಳಗಿನವರು ಮಾತ್ರ

ಕರೆ ಮಾಡಿ :

9964801496


## ನಗರದಲ್ಲಿ ಇಂದು ಆರೋಗ್ಯ ಶಿಬಿರ

ಎಸ್.ಎಸ್ ಕೇರ್ ಟ್ರಸ್ಟ್ ವತಿಯಿಂದ ಸಂಚಾರಿ ಆರೋಗ್ಯ ವಾಹನದಲ್ಲಿ 30 ವರ್ಷ ಮೇಲ್ಪಟ್ಟವರಿಗೆ ಉಚಿತ ಆರೋಗ್ಯ ತಪಾಸಣೆಯನ್ನು ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3.30 ರವರೆಗೆ ವಿದ್ಯಾನಗರದ ಶಿವ-ಪಾರ್ವತಿ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗಿದೆ. ಉಚಿತ ಬಿ.ಪಿ ತಪಾಸಣೆ, ರಕ್ತದ ಸಕ್ಕರೆ ತಪಾಸಣೆ, ಇ.ಸಿ.ಜಿ ಪರೀಕ್ಷೆ, ನೇತ್ರ ತಪಾಸಣೆ, ಹೃದಯ ತಪಾಸಣೆ ಹಾಗು ನುರಿತ ವೈದ್ಯರಿಂದ ಸಂಪೂರ್ಣ ಆರೋಗ್ಯ ತಪಾಸಣೆ ಹಾಗು ಸಮಾಲೋಚನೆ ಮಾಡಲಾಗುವುದು.

## ರಾಮ ಮಂದಿರ ರಾಮರಾಜ್ಯದ ದಿಕ್ಸೂಚಿ : ಬಿಜೆಪಿ ನಿರ್ಣಯ

ನವದೆಹಲಿ, ಫೆ. 18 – ಅಯೋಧ್ಯೆಯಲ್ಲಿ ರಾಮ ಮಂದಿರ ಸ್ಥಾಪನೆಯಾಗಿರುವುದು ಮುಂದಿನ ಸಾವಿರ ವರ್ಷಗಳಿಗೆ ರಾಮರಾಜ್ಯದ ದಿಕ್ಸೂಚಿಯಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ಮಂಡಳಿಯಲ್ಲಿ ತೆಗೆದುಕೊಂಡ ನಿರ್ಣಯದಲ್ಲಿ ತಿಳಿಸಲಾಗಿದೆ. ಭವ್ಯ ರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆಯಾಗಿರುವುದು ದೇಶದ ಅಂತಃಸಾಕ್ಷಿಯಾಗಿದೆ. ಇದು ವಿಕಸಿತ ಭಾರತ ನಿರ್ಮಿಸುವ ಬದ್ಧತೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ತಿಳಿಸಲಾಗಿದೆ.


ssims SPARSH ORTHOPAEDICS • PLASTIC • NEURO SCIENCES CENTRE FOR ACCIDENTS BONE & JOINT CARE

**ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,**

ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು

ಪ್ರತೀ ಹದಿನೈದು ದಿನಗಳಿಗೊಮ್ಮೆ

ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**

D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)

ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 22ನೇ ಫೆಬ್ರವರಿ 2024 । ಸಮಯ: ಬೆಳಿಗ್ಗೆ 11 ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: **96869 29090 / 99800 33277**

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



**ಶ್ರೀ ಅಗಸನಕಟ್ಟೆ ರಂಗನಾಥ**

ಇವರು ದಿ. 11.02.2024ರಂದು ನಿಧನರಾದ ಪ್ರಯುಕ್ತ

**ಕೈಲಾಸ ಸಮಾರಾಧನೆಯನ್ನು**

ದಿನಾಂಕ 19.02.2024ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ಶ್ರೀರಾಮ ಕಲ್ಯಾಣ ಮಂಟಪ, 2ನೇ ಮೇನ್, 2ನೇ ಕ್ರಾಸ್, ಪಿ.ಜೆ. ಬಡಾವಣೆ ದಾವಣಗೆರೆ ಇಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು :

**ಶ್ರೀಮತಿ ಸುಧಾ ಮತ್ತು ಮಕ್ಕಳು, ಅಗಸನಕಟ್ಟೆ ವಂಶಸ್ಥರು, ಹೊಸಕುಂದುವಾಡ ಹಾಗು ಬಂಧು ಮಿತ್ರರು.**

ಮೊ : 99645 26818, 94814 18009

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.